
ಮಿಡಿವ ಜನರ ಪ್ರಾಣ ಮಿತ್ರ

ಐಕ್ಯರಂಗ

ಸಂಪುಟ 26 ಸಂಚಿಕೆ 50 ಡಿಸೆಂಬರ್ 12, 2004 ಬೆಲೆ ರೂ. 3.00







ಭೂಪಾಲ್
ದುರಂತ
ಕರಾಳ ನೆನಪು

ಬಿಜೆಪಿಗೆ ಈಗ ದೇವರೇ ಗತಿ !

ಶಿಶುನಾಳ ಸಮಾವೇಶ

ಮತಾಂಧತೆಯ ವಿರುದ್ಧ ಮಾನವೀಯತೆಯ ಸಮರ





ಗವರ್ನರ್ ಹುದ್ದೆ ಮತ್ತು ಅಧಿಕಾರ ಹಂಚಿಕೆ


ಪೇಟೆಂಟ್ ಮಸೂದೆ: ಅಂಗೀಕಾರಕ್ಕೆ ಅವಸರ ಬೇಡ

ಉಕ್ರೇನ್ : ಸಾಮ್ರಾಜ್ಯಶಾಹಿ ಹಸ್ತಕ್ಷೇಪ

ನಾಟಕ : ಪಂಪ ಭಾರತ

ಮಾಧ್ಯಮ ಮತ್ತು ವಿಶ್ವಾಸಾರ್ಹತೆ ?

ಬೆಂಗಳೂರು ಹಬ್ಬ ನಿಮಗಲ್ಲಾರೀ !



ಬುರುಡೇಪುರಾಣ ಹೊಸೆದು ಬುಡಬುಡಕೆ ಬಾರಿಸುವ ಕಸುಬಿನ ಬರಹಗಳಿಗೆ ವಿಜಯ ಕರ್ನಾಟಕ ಖ್ಯಾತವಾಗಿರುವುದು ಹೊಸ ಸಂಗತಿಯೇನಲ್ಲ. ಇಂತಹ ಪುಂಗಿ ಪ್ರವೀಣರಾದ ವಿಜಯಕರ್ನಾಟಕದ ಕಾರ್ಯನಿರ್ವಾಹಕ ಸಂಪಾದಕ ವಿಶ್ವೇಶ್ವರ ಭಟ್ ಮಾಧ್ಯಮಗಳ ವಿಶ್ವಾಸಾರ್ಹತೆ ಬಗ್ಗೆ ವಿಚಾರ ಸಂಕಿರಣದಲ್ಲಿ ಭರಾಟೆಯ ಭಾಷಣ ಮಾಡಿದ್ದಾರೆ. ಸಂಪಾದಕನೊಬ್ಬ ಅಂಕಣಕಾರನೂ ಆಗಿರುವ ಇವರ ಬರಹಗಳಲ್ಲಿ ವಿಶ್ವಾಸಾರ್ಹತೆ ಇದೆಯೇ? ಓದುಗರೊಬ್ಬರ ವೆಬ್‌ಸೈಟ್ ಲೇಖನದಲ್ಲಿ ಪ್ರತಿಕ್ರಿಯೆ

ಮಾಧ್ಯಮ ಮತ್ತು ವಿಶ್ವಾಸಾರ್ಹತೆ

(thats kannda.com ಲೇಖನವೊಂದರಿಂದ)

ಕೆಲವು ದಿನಗಳ ಹಿಂದೆ, ಜಾಗತಿಕ ಪತ್ರಿಕಾ ದಿನಾಚರಣೆ ಅಂಗವಾಗಿ, ಮಂಗಳೂರಿನಲ್ಲಿ ನಡೆದ ಒಂದು ಕಾರ್ಯಕ್ರಮದಲ್ಲಿ, ವಿಜಯ ಕರ್ನಾಟಕದ ಕಾರ್ಯನಿರ್ವಾಹಕ ಸಂಪಾದಕರೂ, ಅಂಕಣಕಾರರೂ ಆದ ವಿಶ್ವೇಶ್ವರ ಭಟ್ ಭಾಷಣ ಮಾಡುತ್ತ Credibility ಕುರಿತಾಗಿ ಪ್ರಸ್ತಾಪಿಸಿದರೆಂದು ವರದಿ ಯಾಗಿದೆ.

ಈ ವರದಿಯನ್ನು ಓದಿದಾಗ, ಭಟ್ಟರ ನೂರೆಂಟು ಮಾತು ಅಂಕಣಮಾಲೆಯಲ್ಲಿ ಪ್ರಕಟವಾದ ಅವನು ಬರೆದು ಬೀಗುತ್ತಿದ್ದ, ಅವಳು ಬಾಗಿ ಬಿಕ್ಕಳಿಸುತ್ತಿದ್ದಳು ಲೇಖನ ತಟ್ಟನೆ ನೆನಪಾಯಿತು.

ನಾನೋರ್ವ ಪತ್ರಿಕಾಕರ್ತನಲ್ಲ. ಲೇಖಕನೂ ಅಲ್ಲ. (ಓದುಗರ ಓಲೆಗಳನ್ನು ಬಿಟ್ಟರೆ, ಅಂತಹ ಹೇಳಿಕೊಳ್ಳುವುದೇನನ್ನೂ ನಾನು ಬರೆದಿಲ್ಲ.) ಹಾಗಾಗಿ, ಒಬ್ಬ ವರದಿಗಾರ/ಅಂಕಣಕಾರ ತನ್ನ ಓದುಗನ ವಿಶ್ವಾಸವನ್ನು ಗಳಿಸುವುದು - ಉಳಿಸಿಕೊಳ್ಳುವುದು ಹೇಗೆಂದು ಬರೆಯುವ ಇಚ್ಛೆ ನನಗಿಲ್ಲ. ಸಾಮರ್ಥ್ಯವೂ ಇಲ್ಲ. ಆದರೆ, ಒಬ್ಬ ಓದುಗನಾಗಿ, ಒಂದು ಪತ್ರಿಕೆ / ಒಬ್ಬ ವರದಿಗಾರ / ಓರ್ವ ಅಂಕಣಕಾರ್ತಿ ನನ್ನ ವಿಶ್ವಾಸವನ್ನು ಹೇಗೆ ಅಳಿಸಿಕೊಳ್ಳುತ್ತಾರೆ ಎಂಬುದರ ಅನುಭವ ನನಗೆ ಇದೆ. ಒಂದು ವರದಿಯಲ್ಲಿ / ಅಂಕಣದಲ್ಲಿ / ಲೇಖನದಲ್ಲಿ ನಿಜವಲ್ಲದ್ದನ್ನು ಓದಿದ ಕೂಡಲೆ, ಅದನ್ನು ಬರೆದ ಲೇಖಕನ ಬಗ್ಗೆ ಮತ್ತು ಅದನ್ನು ಪ್ರಕಟಿಸಿದ ಪತ್ರಿಕೆಯ ಬಗ್ಗೆ ನನ್ನ ವಿಶ್ವಾಸ ಕುಂದುತ್ತದೆ.

ಸತ್ಯಕ್ಕೆ ದೂರವಾದದ್ದನ್ನು ಒಬ್ಬ ಲೇಖಕ ಏಕೆ ಬರೆಯುತ್ತಾನೆ? ಒಂದು ಪತ್ರಿಕೆ ಇಂತಹುದ್ದನ್ನು ಏಕೆ ಪ್ರಕಟಿಸುತ್ತದೆ? ಈ ಪ್ರಶ್ನೆಗಳಿಗೆ ಹಲವಾರು ಉತ್ತರಗಳಿವೆ.

ಇತ್ತೀಚೆಗೆ, ನ್ಯೂಯಾರ್ಕ್ ನಗರದ ಪ್ರಮುಖ ದಿನಪತ್ರಿಕೆಗಳಲ್ಲಿ ಒಂದಾದ ನ್ಯೂಯಾರ್ಕ್ ಪೋಸ್ಟ್, ತನ್ನ ಮುಖಪುಟದಲ್ಲಿ ಅಮೆರಿಕ ಅಧ್ಯಕ್ಷ ಸ್ಥಾನಕ್ಕೆ ಡೆಮೊಕ್ರಾಟಿಕ್ ಪಕ್ಷದ ಅಭ್ಯರ್ಥಿಯಾದ ಜಾನ್ ಕೆರ್ರಿ, ತನ್ನೊಂದಿಗೆ ಚುನಾವಣೆಯಲ್ಲಿ ನಿಲ್ಲಲು ಡಿಕ್ ಗೆಪ್‌ಹಾರ್ಡ್ಟ್‌ನನ್ನು ಆಯ್ಕೆಮಾಡಿದ್ದಾನೆಂದು ವರದಿ ಮಾಡಿತು. ಇತರೆ ಪತ್ರಿಕೆಗಳಿಗಿಂತ ಮುಂಚೆ ಈ ವರದಿಯನ್ನು ತಮ್ಮ ಪತ್ರಿಕೆಯಲ್ಲಿ ಪ್ರಕಟಿಸಿದ್ದಕ್ಕೆ ಆ ಪತ್ರಿಕೆಯ ಸಂಪಾದಕ ಮಹಾಶಯರು ಹೆಮ್ಮೆ ಪಟ್ಟರೋ ಇಲ್ಲವೋ ಗೊತ್ತಿಲ್ಲ. ಆದರೆ, ಆ ಸುದ್ದಿ ಪ್ರಕಟವಾದ ಕೆಲವೇ ಗಂಟೆಗಳಲ್ಲಿ ಜಾನ್ ಕೆರ್ರಿ ತನ್ನ ಆಯ್ಕೆ ಜಾನ್ ಎಡ್ವರ್ಡ್ಸ್ ಎಂದು ಪ್ರಕಟಿಸಿದಾಗ, ನ್ಯೂಯಾರ್ಕ್ ಪೋಸ್ಟ್ ಎಲ್ಲರ ನಗೆಪಾಟಲಿಗೆ ಗುರಿಯಾಯಿತು. ತನ್ನ Scoop ಪ್ರಕಟಿಸುವ ಭರದಲ್ಲಿ, Get it first, but more importantly get it right ಎನ್ನುವ ಪತ್ರಿಕೋದ್ಯಮದ ಮೊದಲ ಪಾಠವನ್ನೇ ಮರೆತಿತ್ತು! ಇದಾದ ನಂತರ ನ್ಯೂಯಾರ್ಕ್ ಪೋಸ್ಟಿನಲ್ಲಿ ಪ್ರಕಟವಾಗುವ ತಾಜಾ ಸುದ್ದಿಗಳನ್ನು ನಂಬುವುದಾದರೂ ಹೇಗೆ?

(ಇನ್ನೊಂದು ವರದಿಯ ಪ್ರಕಾರ, ಈ ಪ್ರಸಂಗದ ಮುಖ್ಯ ಖಳಪಿತೃ (culprit) ರೂಪರ್ಟ್ ಮುರ್ಡಾಕ್. ನ್ಯೂಸ್ ಕಾರ್ಪ್ ಸಂಸ್ಥೆಯ ಮುಖ್ಯಸ್ಥನಾದ ಈತ, ತನ್ನ ಸಂಸ್ಥೆಗೇ ಸೇರಿದ ನ್ಯೂಯಾರ್ಕ್ ಪೋಸ್ಟ್ ದಿನಪತ್ರಿಕೆಗೆ ಈ ಸುದ್ದಿಯನ್ನು ಒದಗಿಸಿದರಂತೆ. ಯಜಮಾನನ ಕರೆಗೆ ಓಗೊಟ್ಟ ಸಂಪಾದಕರು ಈ ಸುದ್ದಿಯನ್ನು ಪ್ರಕಟಿಸಿದರಂತೆ. ಹೇಗಾದರೂ ಇರಲಿ, ಒಟ್ಟಿನಲ್ಲಿ ಪತ್ರಿಕೆಯ ವಿಶ್ವಾಸಾರ್ಹತೆಗೆ ಧಕ್ಕೆಯಾಗಿದ್ದಂತೂ ನಿಜ.)

ಸುದ್ದಿ ಪ್ರಕಟಿಸುವಲ್ಲಿ ತಾನೇ ಮೊದಲಿಗನಾಗ ಬೇಕೆಂಬ Competetive pressure ನಿಂದ ಮತ್ತು/ಅಥವಾ ಯಜಮಾನನ ಪ್ರೇರಣೆ/ಒತ್ತಡದಿಂದ ನ್ಯೂಯಾರ್ಕ್ ಪೋಸ್ಟ್ ಸುಳ್ಳು ಸುದ್ದಿ ಪ್ರಕಟಿಸಿದರೆ, ಕೆಲವು ಲೇಖಕರು ತಮ್ಮ ವಾದಗಳಿಗೆ, ತತ್ವಗಳಿಗೆ, ರಾಜಕೀಯ ಧೋರಣೆಗಳಿಗೆ ಬದ್ಧವಾದದ್ದೆಲ್ಲಾ ಸತ್ಯ, ವಿರುದ್ಧವಾದದ್ದೆಲ್ಲಾ ಮಿಥ್ಯ ಎಂಬ ಮನೋಭಾವನೆಯಿಂದ ಓದುಗರನ್ನು ತಪ್ಪುದಾರಿಗೆಳೆಯುತ್ತಾರೆ. ಅಂಕಣಕಾರರಲ್ಲಿ ಇಂತಹ ಮನೋಭಾವನೆ ಸಾಮಾನ್ಯವಾಗಿ ಕಾಣಸಿಗುವುದಾದರೂ, ಕೆಲವೊಮ್ಮೆ ಸುದ್ದಿಗಳಲ್ಲೂ ಕಾಣುತ್ತದೆ.

ಸಂಪಾದಕನೇ ಅಂಕಣಕಾರನಾದರೆ.....


ವಿಜಯ ಕರ್ನಾಟಕ ಇಂದು ಕನ್ನಡದ ನಂ. 1 ದಿನಪತ್ರಿಕೆ. ಲಕ್ಷಾಂತರ ಓದುಗರಿರುವ ಈ ಪತ್ರಿಕೆಯ ವರದಿಗಾರರ/ಲೇಖಕರ ಹೊಣೆ ಅಪಾರ. ಇಂತಹ ಪತ್ರಿಕೆಯ ಸಂಪಾದಿಸುವ ಹೊಣೆ ಅದಕ್ಕಿಂತ ಹೆಚ್ಚು. ವಿಶ್ವೇಶ್ವರ ಭಟ್ ತಮ್ಮ ಬವಿಜಯ ಕರ್ನಾಟಕದಲ್ಲಿ ಈ ಎರಡೂ ಹೊಣೆಗಳನ್ನೂ ಒಟ್ಟಿಗೆ ಹೊತ್ತಿದ್ದಾರೆ. ಹೀಗಾಗಿ, ಅವರ ಲೇಖನಗಳಲ್ಲಿ ತಪ್ಪಿದ್ದರೆ ಅದು ಅವರ ಪತ್ರಿಕೆಯ ಕ್ರೆಡಿಬಿಲಿಟಿ ಕಡಿಮೆ ಮಾಡುವುದರಲ್ಲಿ ಸಂದೇಹವೇ ಇಲ್ಲ.

ಲೈಂಗಿಕ ಹಗರಣದಲ್ಲಿ ಸಿಲುಕಿದ ಕ್ಲಿಂಟನ್ ವಿಶ್ವಸಂಸ್ಥೆಯ AIDS ಅಭಿಯಾನದ ರಾಯಭಾರಿಯಾಗಿರುವುದು ಭಟ್ಟರ ಅಭಿಪ್ರಾಯದಲ್ಲಿ ಶುದ್ಧ ನಾನ್‌ಸೆನ್ಸ್. ಈ ಅಭಿಪ್ರಾಯವನ್ನು ಹಲವರು ಒಪ್ಪಬಹುದು, ಒಪ್ಪದಿದ್ದವರು AIDS ಕೇವಲ ಲೈಂಗಿಕ ಸಂಬಂಧಗಳಿಂದ ಮಾತ್ರ ಹರಡುವಂತಹುದಲ್ಲ. ಜೊತೆಗೆ, ಕ್ಲಿಂಟನ್ ಖುದ್ದಾಗಿ ಮತ್ತು ತನ್ನ ಪ್ರತಿಷ್ಠಾನದ ಮೂಲಕ ಬಡ ರಾಷ್ಟ್ರಗಳಲ್ಲಿ ಈಗಾಗಲೇ ಈ ಮಾರಿಗೆ ತುತ್ತಾಗಿರುವವರ ಪರವಾಗಿ ಹಲವಾರು ಕಾರ್ಯಗಳಲ್ಲಿ ನಿರತನಾಗಿದ್ದಾನೆ. ಆದ್ದರಿಂದ, ಕ್ಲಿಂಟನ್‌ನನ್ನು ವಿಶ್ವಸಂಸ್ಥೆ ಆಯ್ಕೆಮಾಡಿದ್ದರಲ್ಲಿ ತಪ್ಪೇನೂ ಇಲ್ಲ ಎಂದು ವಾದಿಸಬಹುದು. ಅಭಿಪ್ರಾಯಗಳು ಚರ್ಚಾಸ್ಪದ; Facts ಗಳು ಅಲ್ಲ.

ಈ ಲೇಖನದಲ್ಲಿ ಕ್ಲಿಂಟನ್, ಮೋನಿಕ ಲೆವಿನ್‌ಸ್ಕಿ ಕುರಿತು ಅವರು ಬರೆದಿರುವ ಹಲವಾರು ಸಂಗತಿಗಳು ಆಧಾರರಹಿತ.

... ಮೋನಿಕಾ ಲೆವಿನ್‌ಸ್ಕಿ ಬಿಕ್ಕಿ ಬಿಕ್ಕಿ ಅಳುತ್ತಿದ್ದಳು. ಟಿವಿ ಸಂದರ್ಶಕನ ಮುಂದೆ ಕುಳಿತ ಆಕೆ ಚಿಕ್ಕ ಮಗುವಿನಂತೆ ಬಿಕ್ಕುತ್ತಿದ್ದರೆ,

ಮೋನಿಕ ತನ್ನ ಏಕಾಂತದಲ್ಲಿ ಅಥವಾ ತನ್ನ ಆಪ್ತರೊಡನೆ ಅತ್ತಳೋ ಇಲ್ಲವೋ ತಿಳಿಯದು. ಆದರೆ, ಟಿವಿ ಸಂದರ್ಶಕನ ಮುಂದೆ ಆಕೆ ಅಳಲಿಲ್ಲ. ಬಿಕ್ಕಿ ಬಿಕ್ಕಿಯಂತೂ ಅಳಲೇ ಇಲ್ಲ. (ಆಕೆಯಲ್ಲಿ ಮೆಚ್ಚಬೇಕಾದ ಒಂದು ಗುಣವೆಂದರೆ, ತಾನು ಒಬ್ಬ ಬಲಿಪಶು ಎಂಬ ಮನೋಭಾವವಿಲ್ಲದಿರುವುದು. ಜನವರಿ 2000ದಲ್ಲಿ ನೀಡಿದ ಒಂದು ಸಂದರ್ಶನದಲ್ಲಿ ಸಿಎನ್‌ಎನ್‌ನ Larry King ಗೆ



ಆಕೆ ಇತ್ತ ಉತ್ತರ ಇದು:

King : Do you feel a victim?
Lewisky : No, i don't

ಈ ಪುಸ್ತಕ ಬರೆದು ಕ್ಲಿಂಟನ್ ಲಕ್ಷಾಂತರ ಡಾಲರ್ ಸಂಪಾದಿಸಿದರೆ, ಮುಂದಿನ ಜೀವನ ಹೇಗೆ ಸಾಗಿಸಬೇಕೆಂಬುದನ್ನು ತಿಳಿಯದ ಮೋನಿಕಾ ಕಲ್ಲವಿಲಗೊಂಡು ಕುಳಿತಿದ್ದಳು.

ಪುಸ್ತಕ ಬರೆದಿರುವುದು ಕ್ಲಿಂಟನ್ ಮಾತ್ರ ಅಲ್ಲ. 1999ರಲ್ಲೇ ತನ್ನ ಪುಸ್ತಕ ಬಿಡುಗಡೆ ಮಾಡಿದ ಮೋನಿಕಾ, ವಾಷಿಂಗ್‌ಟನ್ ಪೋಸ್ಟ್‌ನಲ್ಲಿ ಪ್ರಕಟವಾದ ವರದಿಯೊಂದರ ಪ್ರಕಾರ, ಪುಸ್ತಕ, ಟಿವಿ, ಪತ್ರಿಕೆಗಳು ಇತ್ಯಾದಿಯಿಂದ 30 ಲಕ್ಷ ಡಾಲರ್ ಸಂಪಾದಿಸಿದ್ದಾಳೆ. ಇದಲ್ಲದೆ, Fox TV ಗಾಗಿ ಒಂದು ಕಾರ್ಯಕ್ರಮ ನಡೆಸಿಕೊಟ್ಟಿರುವ ಈಕೆ, ಜೆನ್ನಿ ಕ್ರೇಗ್ ಸಂಸ್ಥೆಯ ಪ್ರಚಾರಕರ್ತೆಯಾಗಿ ಸಹ ದುಡಿದಿದ್ದಾಳೆ. ಇವೆಲ್ಲವುಗಳ ಮಧ್ಯೆ ತನ್ನದೇ ಆದ designer handbags ಉದ್ದಿಮೆಯೊಂದನ್ನು ಸಹ ತೆರೆದಿದ್ದಾಳೆ. ಇಂತಹವಳ ಕುರಿತು ಮುಂದಿನ ಜೀವನ ಹೇಗೆ ಸಾಗಿಸಬೇಕೆಂಬುದನ್ನು ತಿಳಿಯದೆ... ಕಲ್ಲವಿಲಗೊಂಡು ಕುಳಿತಿದ್ದಳು ಎಂದು ಬರೆದರೆ ಅದು ಸತ್ಯಕ್ಕೆ ದೂರವಾದ ಮಾತು.

.. ಮನಸೋ ಇಚ್ಛೆ ಪ್ರೀತಿಸಿದ ಸುಂದರಿಯ ಕುರಿತು ..

ಕ್ಲಿಂಟನ್ ಮೋನಿಕಾಳನ್ನು ಮನಸೋ ಇಚ್ಛೆ ಪ್ರೀತಿಸಿದನೋ ಇಲ್ಲವೋ ಅದು ಅವರಿಬ್ಬರ ನಡುವಿನ ವಿಷಯ. ನಮಗೆ ಗೊತ್ತಿರುವುದಿಷ್ಟೇ: ಕ್ಲಿಂಟನ್ ಮತ್ತು ಮೋನಿಕಾ ಅವೈವಾಹಿಕ ಸಂಬಂಧ ಹೊಂದಿದ್ದರು. ಕ್ಲಿಂಟನ್ ಈ ಸಂಬಂಧಕ್ಕೆ ಹೆಚ್ಚಿನ ಪ್ರಾಮುಖ್ಯತೆ ಕೊಟ್ಟಂತೆ ಇಲ್ಲ. ಈ ಸಂಬಂಧವನ್ನು ಲೈಂಗಿಕ ಸಂಬಂಧಕ್ಕಿಂತ ಹೆಚ್ಚು ಅರ್ಥಪೂರ್ಣವಾಗಿ ಕಂಡ ಮೋನಿಕಾಗೆ, ಕ್ಲಿಂಟನ್‌ನ ಈ ಮನೋಭಾವನೆ ಬೇಸರ, ಕೋಪ ತಂದಿದೆ. ಇಷ್ಟನ್ನು ಬಿಟ್ಟು, ಕ್ಲಿಂಟನ್ ಮನಸೋ ಇಚ್ಛೆ ಪ್ರೀತಿಸುವುದುಟಿ, ಮೋನಿಕಾ ಬಿಕ್ಕುವುದು, ಕ್ಲಿಂಟನ್ ನನ್ನ ಕೈ ಬಿಟ್ಟನೆಂದು ಬಡಬಡಿಸುವುದು ಎಲ್ಲಾ ಭಟ್ಟರ ಮನಸ್ಸಿನಲ್ಲಿ ಮಾತ್ರ.

ಕ್ಲಿಂಟನ್ ಈ ಕೃತಿಯಲ್ಲಿ ಒಂದೆಡೆ ಬರೆದುಕೊಂಡಿದ್ದಾನೆ. ಪತ್ರಕರ್ತರು ಆತನನ್ನ ನೀನ್ಯಾಕೆ ಇಂಥ ಅಕ್ರಮ ಸಂಬಂಧಕ್ಕೆ ಮನಸ್ಸುಮಾಡಿದೆ ಅಂತ ಕೇಳುತ್ತಾರೆ. ಅದಕ್ಕೆ ಆತ Because I could ಅಂತಾನೆ.

ಕ್ಲಿಂಟನ್ ಈ ಮಾತು ಹೇಳಿದ್ದು ತನ್ನ ಪುಸ್ತಕದಲ್ಲಿ ಅಲ್ಲ. ಟಿವಿ ಸಂದರ್ಶನವೊಂದರಲ್ಲಿ. ಜೊತೆಗೆ, ಈ ಮಾತು ಕೆಲವರು (ಭಟ್ಟರಲ್ಲ) ಎಣಿಸಿದಂತೆ ದರ್ಪದಿಂದ ನುಡಿದಂತೆಯೂ ಇಲ್ಲ. ಆತನ ಪೂರ್ಣ ಉತ್ತರ ಹೀಗಿದೆ: for the wors possible reason : just because I could, I think that's just about the most morally indefencible reason that anybody could have for doing anything

ಎರಡು ತಿಂಗಳು ಬೆಡ್‌ರೂಮಿನ ಬಾಗಿಲ ಮುಂದೆ ಕಾರ್ಪೆಟ್ ಮೇಲೆ ಅಂಗಾತನಾಗಿ ಮಲಗಿ ರಾತ್ರಿ ಕಳೆಯುತ್ತಿದ್ದ. .... ಕ್ಲಿಂಟನ್ ಊಟ-ನೀರು ಇಲ್ಲದ ಅಬ್ಬೇಪಾರಿಯಂತೆ ಶ್ವೇತಭವನದ ನೆಲದ ಮೇಲೆ ಬಿದ್ದುಕೊಂಡಿರುತ್ತಿದ್ದ.

ಕ್ಲಿಂಟನ್ ಅಂಗಾತನಾಗಿ ಮಲಗುತ್ತಿದ್ದನೋ ಇಲ್ಲವೋ ತಿಳಿಯದು. ಆದರೆ ಆತನ ಪುಸಕದ ಪ್ರಕಾರ ಆತ ಮಲಗುತ್ತಿದ್ದಿದ್ದು ಕಾರ್ಪೆಟ್ ಮೇಲೆ ಅಥವಾ ನೆಲದ ಮೇಲೆ ಅಲ್ಲ. ಒಂದು couch ಮೇಲೆ.

ಜನರು ಬಾಯಿಗೆ ಬಂದಂತೆ ಮಾತನಾಡುತ್ತಿದ್ದರು. ಶ್ವೇತ ಭವನದ ಶ್ವೇತ ಸೂಳೆ, ಬಿಚ್, ಕ್ಲಿಂಟನ್ ಕೀಪು ಎಂದೆಲ್ಲ ಹೀಗಳೆಯುತ್ತಿದ್ದರು.

ಜನರು ಮೋನಿಕಾಳ ಹಿಂದೆ ಏನು ಮಾತನಾಡುತ್ತಿದ್ದರೋ ತಿಳಿಯದು. ಆದರೆ ಜನರು ಆಕೆಯ ಜೊತೆ ನಡೆದುಕೊಂಡ ರೀತಿಯ ಬಗ್ಗೆ, ಆಕೆಯೇ ಹೇಳುವ ಮಾತುಗಳಿವು:

KING: Have any people been rude to you?
LEWINSKY: No, no.
KING: Jokes, snide remarks, nothing?
LEWINSKY: Maybe once or twice, but not anything that even compares to how amazing people have been. And not just in the way people came up have come up to me now, sort of, that I'm actually able to go out in public and sometimes without a hat, but I think, too, with a lot of the letters that I received throughout the past two years and continue to receive, it's just it's heartwarming. I mean, for complete strangers to sit down and share something personal with you, it's touching.

ಉಳಿದುಕೊಳ್ಳಲು ಮನೆ ಬಾಡಿಗೆಗೆ ಸಿಗುತ್ತಿರಲಿಲ್ಲ. ವಾಟರ್‌ಗೇಟ್ ಹೋಟೆಲ್‌ನಲ್ಲಿ ತಿಂಗಳಾನುಗಟ್ಟಳೆ ಉಳಿದುಕೊಂಡಳು. ರೂಮು ಬಾಡಿಗೆ ಕಟ್ಟಲು ಆಗಲಿಲ್ಲ. ಮೂರ್ನಾಲ್ಕು ತಿಂಗಳಲ್ಲಿ ಮೋನಿಕಾ ಹೈರಾಣಾಗಿ ಹೋದಳು.

ಮೋನಿಕಾ ಹೈರಾಣಾಟಿಗಿದ್ದು ನಿಜವೋ ಸುಳ್ಳೋ ಗೊತ್ತಿಲ್ಲ. ಆದರೆ, ಹೈರಾಣಾಟಿಗಿದ್ದೇ ಆದರೆ, ರೂಮು ಬಾಡಿಗೆ ಕಟ್ಟಲಾಗದಿದ್ದಕ್ಕಂತೂ ಅಲ್ಲ. ಆಕೆ ಒಬ್ಬ ಶ್ರೀಮಂತ ವೈದ್ಯನ ಮಗಳು. ವಾಷಿಂಗ್‌ಟನ್‌ಗೆ ಬಂದದ್ದು ಸಂಬಳವಿಲ್ಲದ intern ಕೆಲಸ ಮಾಡಲು. ಅನಂತರ ಅಲ್ಲಿಯೇ ಸಂಬಳ್ ಸಿಗುವ ಕೆಲಸ ಸಿಕ್ಕಿತಾದರೂ ಆ ಸಂಬಳ ಕೇವಲ 30,000 ಡಾಲರ್ (ವರ್ಷಕ್ಕೆ) ಮಾತ್ರ. ವಾಟರ್‌ಗೇಟ್ ಕಾಂಪ್ಲೆಕ್ಸಿನಲ್ಲಿ ಹೋಟೆಲು ಇರುವುದಾದರೂ, ಆಕೆ ಇದ್ದಿದ್ದು ಹೋಟೆಲು ರೂಮಿನಲ್ಲಿ ಅಲ್ಲ. ಅದೇ ಕಾಂಪ್ಲೆಕ್ಸಿನಲ್ಲಿ ಇದ್ದ ತನ್ನ ತಾಯಿಯ ಅಪಾರ್ಟ್‌ಮೆಂಟಿನಲ್ಲಿ. ಅದೂ ಏನು ಕಳಪೆಯದ್ದೇನೂ ಅಲ್ಲ. ಸೆನೆಟರ್ ಬಾಬ್ ಡೋಲ್, [illegible] ಗಿನ್ಸ್‌ಬರ್ಗ್ ಅಂತಹ ಗಣ್ಯ ವ್ಯಕ್ತಿಗಳು ವಾಸಿಸುವ ಅಪಾರ್ಟ್‌ಮೆಂಟ್ ಕಾಂಪ್ಲೆಕ್ಸ್ ಅದು. ಇಂತಹ ಸಿರಿವಂತ ಕುಟುಂಬದಿಂದ ಬಂದ ಮೋನಿಕಾಗೆ ರೂಮು ಬಾಡಿಗೆ ಕಟ್ಟಲಾಗಲಿಲ್ಲಟಿ ಎಂಬುದು ಆಧಾರರಹಿತ ಮಾತು.

ಮೂರ್ನಾಲ್ಕು ಸಲ ಆತ್ಮಹತ್ಯೆಗೆ ಪ್ರಯತ್ನಿಸಿದಳು.

ಮೂರು ಸಲವೋ? ನಾಲ್ಕು ಸಲವೋ? ಆತ್ಮಹತ್ಯೆ ಪ್ರಯತ್ನ ಎಂಬುದು ಕ್ಷುಲ್ಲಕ ವಿಚಾರವಲ್ಲ. ಅದು ಅಕ್ಷರಶಃ ಜೀವನ್ಮರಣದ ಮಾತು. ಈ ವಿಷಯದಲ್ಲಾದರೂ specificity ಬೇಡವೇ?

ತನ್ನ ಪುಸ್ತಕ Monica story (ಆಕೆಯೇ ಬರೆದದ್ದಲ್ಲ. ಆಕೆಯ ಒಪ್ಪಿಗೆ ಪಡೆದು, ಆಕೆಯ ಪರವಾಗಿ ಬೇರೊಬ್ಬಾತ ಬರೆದಂತಹ ಪುಸ್ತಕ) ಪ್ರಕಾರ ಆಕೆ ಆತ್ಮಹತ್ಯೆಯ ಆಲೋಚನೆ ಮಾಡಿದ್ದು ಒಮ್ಮೆ ಮಾತ್ರ. ಎಫ್.ಬಿ.ಐ. ಏಜೆಂಟರು ವಿಚಾರಣೆ ನಡೆಸಲು ಆಕೆಯನ್ನು ಹೋಟೆಲು ರೂಮಿನಲ್ಲಿ ಕೂಡಿಟ್ಟಿದ್ದಾಗ. ಆಗಲೂ ಸಹ ಆಕೆಗೆ ಆ ಯೋಚನೆ ಬಂತು ಅಷ್ಟೆ. ಆಕೆ ಪ್ರಯತ್ನವೇನೂ ಮಾಡಲಿಲ್ಲ. ವಸ್ತುಸ್ಥಿತಿ ಹೀಗಿರುವಾಗ ಮೋನಿಕಾ ಮೂರ್ನಾಲ್ಕು ಸಲ ಆತ್ಮಹತ್ಯೆಗೆ ಪ್ರಯತ್ನಿಸಿದ ಸುದ್ದಿ ಭಟ್ಟರು ಎಲ್ಲಿಂದ ಪಡೆದರೋ ಅವರಿಗೇ ಗೊತ್ತು.

ಕ್ಲಿಂಟನ್ ವಿಚಾರದಲ್ಲಿ ಭಟ್ಟರ ಅಭಿಪ್ರಾಯವನ್ನು ಒಪ್ಪಬಹುದು, ನಿರಾಕರಿಸಬಹುದು. ಆದರೆ, ಒಂದೇ ಲೇಖನದಲ್ಲಿ ಇಷ್ಟೊಂದು ಆಧಾರರಹಿತ ಸಂಗತಿಗಳಿದ್ದರೆ, ಅವರನ್ನು ನಂಬುವುದಾದರೂ ಹೇಗೆ? ಅವರ ಇನ್ನುಳಿದ ಲೇಖನಗಳನ್ನು ನಂಬುವುದಾದರೂ ಹೇಗೆ? ಕೊನೆಗೆ, ಅವರು ಸಂಪಾದಿಸುವ ವಿಜಯ ಕರ್ನಾಟಕ ದಿನಪತ್ರಿಕೆಯನ್ನು ನಂಬುವುದಾದರೂ ಹೇಗೆ?

ವಿಶ್ವೇಶ್ವರ ಭಟ್ಟರು ತಮ್ಮ ಭಾಷಣದಲ್ಲಿ ಪತ್ರಿಕೋದ್ಯಮದ ಕ್ರೆಡಿಬಿಲಿಟಿ ಕುರಿತು ಮಾತನಾಡಿದರು ಎಂಬ ವರದಿಯನ್ನೋದಿದಾಗ ಶುದ್ಧ ನಾನ್‌ಸೆನ್ಸ್ ಎನ್ನಬೇಕೆ ?!

- ಶೇಷಾದ್ರಿ

ಇಂದಿಗಾಗಿ ನಾಳಿನ ಕಾರ್ಯಕ್ರಮಗಳು

- **ಡಿಸೆಂಬರ್ 9, 2004**
  ಔಷಧ ಬೆಲೆ ಹೆಚ್ಚಿಸುವ, ದೇಶೀಯ ಕೈಗಾರಿಕೆಗಳ ನಾಶಕ್ಕೆ ಕಾರಣವಾಗುವ ಪೇಟೆಂಟ್ ಕಾಯಿದೆ ತಿದ್ದುಪಡಿ ವಿರೋಧಿಸಿ ಸಹಿ ಸಂಗ್ರಹ ಚಳುವಳಿ ಮತ್ತು ಪ್ರತಿಭಟನಾ ರ್‍ಯಾಲಿ. ಸಂಜೆ ಬನ್ನಪ್ಪ ಪಾರ್ಕ್‌ನಿಂದ ಟೌನ್‌ಹಾಲ್, ಬೆಂಗಳೂರು.
- **ಡಿಸೆಂಬರ್ 10, 2004**
  ಮಾನವ ಹಕ್ಕುಗಳ ದಿನ, ಉದ್ಯೋಗ ಖಾತರಿ ಮಸೂದೆ ಜಾರಿಗೆ ಒತ್ತಾಯಿಸಿ ರಾಷ್ಟ್ರೀಯ ಬೇಡಿಕೆ ದಿನ.
  ಅಖಿಲ ಭಾರತ ಪ್ರಜಾಸತ್ತಾತ್ಮಕ ಮಹಿಳಾ ಸಂಘಟನೆ
- **ಡಿಸೆಂಬರ್ 10, 2004**
  ಉದ್ಯೋಗ ಖಾತರಿ ಮಸೂದೆ ಜಾರಿಗೆ ಒತ್ತಾಯಿಸಿ ರಾಜ್ಯಾದ್ಯಂತ ತಾಲ್ಲೂಕು ತಹಶೀಲ್ದಾರ್‌ಕಛೇರಿ ಎದುರು ಸಾಮೂಹಿಕ ಧರಣೆ - ಕೃಷಿಕೂಲಿಕಾರರ ಸಂಘದ ರಾಜ್ಯ ಸಮ್ಮೇಳನ ಕರೆ
- **ಡಿಸೆಂಬರ್ 12-13, 2004**
  ಸಿಪಿಐ(ಎಂ) - ಉತ್ತರ ಕನ್ನಡ ಜಿಲ್ಲಾ ಸಮ್ಮೇಳನ, ಶಿರಸಿ - ಉ.ಕ.
  ಉದ್ಘಾಟಕರು:ಕಾ. ಜಿ.ಎನ್.ನಾಗರಾಜ್, ಸಿಪಿಐ(ಎಂ) ರಾಜ್ಯ ಕಾರ್ಯದರ್ಶಿ
- **ಜನವರಿ 22 ರಿಂದ 25, 2005**
  ಸಿಪಿಐ(ಎಂ) ಕರ್ನಾಟಕ ರಾಜ್ಯ ಸಮ್ಮೇಳನ, ಉಡುಪಿಯಲ್ಲಿ.

ಶೇಷಾದ್ರಿ

ಗವರ್ನರ್ ಹುದ್ದೆ ಮತ್ತು ಅಧಿಕಾರ ಹಂಚಿಕೆ

ರಾಜ್ಯದ ಬೊಕ್ಕಸಕ್ಕೆ ಹೊರೆಯಾಗಿರುವ, ಆಡಳಿತಕ್ಕೂ ಅನಗತ್ಯವಾಗಿರುವ ಗವರ್ನರ್ ಹುದ್ದೆಗೆ ನೇಮಕಗಳು ಬಹುತೇಕ ರಾಜಕೀಯ ನಿರಾಶ್ರಿತರ ಡೇರೆಗಳಾಗಿವೆ. ಕಾಂಗ್ರೆಸ್ಸಿಗರ ಅಧಿಕಾರ ಹಂಚಿಕೆ, ಹವಣಿಕೆಗಳ ಜಗ್ಗಾಟದಲ್ಲಿ ಎಸ್.ಎಂ.ಕೃಷ್ಣರ ನೇಮಕ ಆ ಸರಣಿಯಲ್ಲಿ ಈಚಿಗಿನದು. ಇದರಿಂದ ಮೈತ್ರಿಕೂಟದ ಸರ್ಕಾರದಲ್ಲಿನ ಬಿಕ್ಕಟ್ಟು ಪರಿಹಾರವಾದಂತೆಯೇ? ಮಂತ್ರಿ ಮಂಡಲ ವಿಸ್ತರಣೆ ಸುಸೂತ್ರವೇ?

ಕರ್ನಾಟಕದ ಮಾಜಿ ಹೈಟೆಕ್ ಮುಖ್ಯಮಂತ್ರಿ ಎಸ್.ಎಂ.ಕೃಷ್ಣ ಈಗ ಮಹಾರಾಷ್ಟ್ರದ ಗವರ್ನರ್. ಯುಪಿಎ ಸರ್ಕಾರ ಅಧಿಕಾರಕ್ಕೆ ಬಂದ ನಂತರದಲ್ಲಿ ಹಾಲಿ ಮತ್ತು ಮಾಜಿ ಕಾಂಗ್ರೆಸ್‌ನ ರಾಜಕಾರಣಿಗಳನ್ನು ಗವರ್ನರ್ ಹುದ್ದೆಗೆ ನೇಮಕಗೊಳಿಸುತ್ತಿರುವ ಸರಣಿಯಲ್ಲಿ ಕೃಷ್ಣರ ನೇಮಕ ಹಲವಾರು ಕಾರಣಗಳಿಂದ ಗಮನ ಸೆಳೆದಿದೆ. ಮುಖ್ಯಮಂತ್ರಿ ಸ್ಥಾನಕ್ಕೆ ಮತ್ತೆ ಪೈಪೋಟಿ ನಡೆಸಿದ್ದ, ಮಾತ್ರವಲ್ಲ ಮುಂದೆ ಕರ್ನಾಟಕದ ಮಂತ್ರಿಮಂಡಲ ವಿಸ್ತರಣೆಗೆ ಅಡ್ಡಿಯೆಂದೂ ಅಥವಾ ತನ್ನ ಬಂಟರನ್ನು (ಡಿಕೆಶಿ) ಸಚಿವ ಸಂಪುಟದಲ್ಲಿ ಸೇರಿಸಿಕೊಳ್ಳಲೇಬೇಕು, ಇಲ್ಲವಾದರೆ ವಿಸ್ತರಣೆಯೇ ಅಸಾಧ್ಯ ಎಂಬಲ್ಲಿ ಇನ್ನೊಂದು ರೀತಿ ದೇವಗೌಡರಷ್ಟೇ ಹಠ ಹಿಡಿದಿದ್ದ ಕೃಷ್ಣರ ನೇಮಕವನ್ನು ಹಲವಾರು ರೀತಿಯಲ್ಲಿ ವ್ಯಾಖ್ಯಾನಿಸಲಾಗುತ್ತಿದೆ. ಕಾಂಗ್ರೆಸ್ ಹೈಕಮಾಂಡ್ ಕರ್ನಾಟಕದ ಉಸ್ತುವಾರಿಯನ್ನು ವಿಲಾಸ್ ರಾವ್ ದೇಶಮುಖ್ ರಿಂದ ಬಿಡಿಸಿ (ಕೃಷ್ಣ ಆಪ್ತರೆಂದೂ ಹೇಳಲಾಗುತ್ತಿತ್ತು) ಕೇರಳ ಮಾಜಿ ಮುಖ್ಯಮಂತ್ರಿ ಅಂಥೋನಿಗೆ ನೀಡಿದ ಕ್ಷಣದಿಂದಲೇ ಕೆಲವು ಅಚ್ಚರಿಗಳು ಕಾದಿವೆ ಎಂದು ಹೇಳಲಾಗುತ್ತಿತ್ತು.

ಕೊಂಚ ಹಿಂದೆ ಕೇಂದ್ರ ಮಂತ್ರಿಮಂಡಲ ಸೇರಿಕೊಳ್ಳಲು ಯತ್ನ ನಡೆಸಿದ್ದರು. ಕೃಷ್ಣ ಈಗ ಚೀನಾದಲ್ಲಿ ಪ್ರವಾಸದಲ್ಲಿರುವಾಗಲೇ ರಾಜ್ಯಪಾಲ ಹುದ್ದೆಯ ಈ ಆಹ್ವಾನವನ್ನು ಒಪ್ಪಿದ್ದಾರೆ. ಕಾಂಗ್ರೆಸ್‌ನ ಒಳಗಿನ ಒಂದು ಗುಂಪಿನ ನಾಯಕರಾಗಿದ್ದ ಕೃಷ್ಣರವರು ಮಹಾರಾಷ್ಟ್ರಕ್ಕೆ ಅದೂ ನೇರವಾಗಿ ಸಕ್ರಿಯ ರಾಜಕಾರಣದಿಂದ ದೂರ ಇರುವಂತಾದ್ದು ಬೆಂಬಲಿಗರಲ್ಲಿ ಹೊಸ ಪ್ರಶ್ನೆ ಹುಟ್ಟಿಸಿದೆಯಂತೆ? ಯಾರು ತಮ್ಮ ನಾಯಕರು ಎಂದು? ಡಿಕೆಶಿಗೆ ಪಟ್ಟಕಟ್ಟಿ ಹೋಗಿ ಎಂದಿದ್ದಾರೆ ಕೆಲವರು. ಈ ಬಗ್ಗೆ 'ನನ್ನ ಮನೆ ಮಂಡ್ಯ ಜಿಲ್ಲೆಯಲ್ಲೇ ಇರುತ್ತದೆ ಎಂದು ಕೃಷ್ಣ ಹೇಳಿರುವುದು ಸುಮ್ಮನೇ ಕೈಚೆಲ್ಲಿ ಕೂಡುವುದಿಲ್ಲ ಎಂಬುದರ ಸಂಕೇತವಾಗಿರಬಹುದು. ಈ ಕಾಂಗ್ರೆಸ್ ಪಕ್ಷ ಅಥವಾ ಬಂಡವಾಳಶಾಹಿ ಪಕ್ಷಗಳು ತಮ್ಮ ನಡುವಿನ ಭಿನ್ನಾಭಿಪ್ರಾಯ - ವ್ಯತ್ಯಾಸಗಳನ್ನು ಬಗೆಹರಿಸಿಕೊಳ್ಳಲು ಕಂಡುಕೊಂಡ ಪ್ರಮುಖ ಮಾರ್ಗ ಈ ಅಧಿಕಾರದ ಸ್ಥಾನ ಕೊಡುವುದು. ಬಹುತೇಕ ಈ 'ನಾಯಕ'ರು ಎತ್ತುವ ತಕರಾರುಗಳು, ಅಧಿಕಾರ(ಹಣ) ಗಿಟ್ಟಿಸುವ ಸುತ್ತಲೇ ಗಿರಕಿ ಹೊಡೆಯುತ್ತವೆ. ಸಂಘ ಪರಿವಾರದ ಬಿಜೆಪಿಯಂತಹ ಪಕ್ಷ ಇದರೊಟ್ಟಿಗೆ ಫ್ಯಾಸಿಸ್ಟ್ ಕಾರ್ಯಸೂಚಿಯನ್ನು ಇಟ್ಟುಕೊಂಡಿರುತ್ತದೆ. ಇದು ಬಹುತೇಕ ರಾಜ್ಯಪಾಲರ ನೇಮಕದಲ್ಲಿ ದೇಶ ಕಂಡಿತು.

ರಾಜ್ಯಪಾಲರ ಹುದ್ದೆ ಸಂವಿಧಾನವನ್ನು ಕಾಪಾಡುವ, ಎತ್ತಿ ಹಿಡಿವ ಹೊಣೆಯದ್ದೆಂದು ಹೇಳಲಾಗುತ್ತಿದೆ. ಆದರೆ ವಾಸ್ತವದಲ್ಲಿ ರಾಜ್ಯ ಸರ್ಕಾರದ ಮೇಲೆ ನಿಗಾ ವಹಿಸುವ, ಬೇಕೆನಿಸಿದಾಗ



ಕೇಂದ್ರ ಸರ್ಕಾರದ ದಾಳವಾಗಿ ಬಳಸುವ - ಬಳಸಿದ ಸಂದರ್ಭಗಳೇ ಹೆಚ್ಚು. ಒಕ್ಕೂಟದ ವ್ಯವಸ್ಥೆಯಲ್ಲಿ ರಾಜ್ಯಪಾಲ ಹುದ್ದೆಯೇ ಅನಗತ್ಯ. ಅದೊಂದು ದುಬಾರಿ ವೆಚ್ಚದ ಬಿಳಿ ಆನೆ. ಆಗೀಗ ವಿಧಾನಸಭೆಯಲ್ಲಿ ಅಧಿವೇಶನ ಮೊದಲು ಭಾಷಣ ಓದುವ, ನನ್ನ ಸರ್ಕಾರ ಎಂದು ಸಂಭೋದಿಸುವ, ಕಾನೂನು-ಆದೇಶಗಳ ಸುತ್ತೋಲೆಗೆ ಸಹಿ ಹಾಕುವ ಭಾರಿ ಕೆಲಸವಿರುತ್ತದೆ! ಅದು ಬಿಟ್ಟರೆ ಇನ್ನೇನಿದೆ? ಭಿನ್ನಮತೀಯರ, ಅಧಿಕಾರ ವಂಚಿತರ ಆಶ್ರಯ ತಾಣ ಈ ರಾಜ್ಯಪಾಲರ ಹುದ್ದೆಯಾಗಿ ಬಿಟ್ಟಿದೆ.

ಯುಪಿಎ ಸರ್ಕಾರ ಗವರ್ನರ್ ನೇಮಕದಲ್ಲಿ ಕೊಂಚವಾದರೂ ಭಿನ್ನವಾಗಬೇಕಿತ್ತು. ಅದು ಮೈತ್ರಿಕೂಟ ಎಂಬುದನ್ನು ಮರೆತು ಕಾಂಗ್ರೆಸ್ಸಸರ್ಕಾರ ಎಂದು ಭಾವಿಸಿದಂತಿದೆ! ಆ ಕೂಟದಲ್ಲಿ ವಿರೋಧದ ಧ್ವನಿಯೂ ಬಂದಿದೆ. ಮಹಾರಾಷ್ಟ್ರದ ಮುಖ್ಯಮಂತ್ರಿಯಾಗಿದ್ದ ಸುಶೀಲಕುಮಾರ್ ಶಿಂಧೆಯವರ ಜಾಗ ಖಾಲಿ ಮಾಡಿಸಲು ಆಂಧ್ರದ ಗವರ್ನರ್ ಆಗಿ ನೇಮಿಸಲಾಯಿತು. ಹಾಗೆಯೇ ಮೂಲೆ ಸೇರಿದ್ದ ಮಾಜಿ ಕೇಂದ್ರ ಸಚಿವ ಬೂಟಾಸಿಂಗ್ ಬಿಹಾರ ರಾಜ್ಯಕ್ಕೂ, ರಾಜಸ್ಥಾನ ಇತರೆಡೆಗೂ ಹೀಗೆ ಕಾಂಗ್ರೆಸ್ ನಾಯಕರನ್ನು ನೇಮಿಸಲಾಯಿತು.

ಕೃಷ್ಣರಿಗೆ ಅಧಿಕಾರದ ಮನೆಯೊಂದನ್ನು ತೋರಿಸಿದ ಬಳಿಕ ಮಂತ್ರಿಮಂಡಲ ರಚನೆ ಸುಸೂತ್ರವಾಗುತ್ತದೆಂದೆಲ್ಲಾ ವ್ಯಾಖ್ಯಾನಿಸಲಾಗುತ್ತಿದೆ. ಕಾಂಗ್ರೆಸ್ ಪಟ್ಟಿಯೂ ಅಂತಿಮಗೊಂಡಿದೆಯಂತೆ. 6 ಅಥವಾ 9 ಕ್ಕೆ ವಿಸ್ತರಣೆ ಆದೀತು ಎಂದು ಮುಖ್ಯಮಂತ್ರಿ ಧರಂಸಿಂಗ್ ಹೇಳಿದ್ದಾರೆ. ಇನ್ನು ದೇವೇಗೌಡರ ಪಟ್ಟಿ ಸಿದ್ದವಾಗಬೇಕಂತೆ.

ಅದೇನೇ ಸಿದ್ದತೆ ಮಾಡಿಕೊಳ್ಳಲಿ, ಜನರಿಗೆ ಉತ್ತಮ ಆಡಳಿತ ನೀಡಲಾಗದಿರುವುದಕ್ಕೆ ಕಾಗಕ್ಕ-ಗುಬ್ಬಕ್ಕನ ಕಥೆ ಹೇಳಿಕೊಂಡು ಇನ್ನು ಮುಂದೆಯೂ ದೇವಗೌಡರು ಹಾಗೂ ಧರಂಸಿಂಗ್ ಓಡಾಡಿಕೊಂಡಿದ್ದರೆ ಜನ ಸಹಿಸಲಾರರು ಎಂಬುದನ್ನು ಗಮನಿಸುವುದು ಒಳ್ಳೆಯದು.

ಈ ವಾರ ಕರ್ನಾಟಕ ಒಂದು ನೋಟ

— ಎಸ್.ವೈ.ಗುರುಶಾಂತ್

ಚಿತ್ರೋದ್ಯಮ ಬಿಕ್ಕಟ್ಟು - ಮಾತುಕತೆ - ಪರಿಹಾರ ಕಾಣಲಿ

ಚಲನಚಿತ್ರ ಉದ್ಯಮದಲ್ಲಿ ತಲೆದೋರಿದ್ದ ಗಂಭೀರ ಸಮಸ್ಯೆಗಳ ಇತ್ಯರ್ಥಕ್ಕೆ ಈಗ ಪರಸ್ಪರರು ಕುಳಿತು ಚರ್ಚೆ ಪರಿಹಾರೋಪಾಯ ಕಂಡುಕೊಳ್ಳಲು ಮುಂದಾಗಿರುವುದು ಸ್ವಾಗತಾರ್ಹ ಬೆಳವಣಿಗೆ.

ಕರ್ನಾಟಕದಲ್ಲಿ ಪರಭಾಷಾ ಚಿತ್ರಗಳ ಪ್ರದರ್ಶನದ ನಿರ್ಬಂಧಕ್ಕೆ ಆಗ್ರಹಿಸಿ ನಡೆಯುತ್ತಿದ್ದ ಚಳುವಳಿ ಅಂತ್ಯಗೊಂಡಿಲ್ಲವಾದರೂ ಮುಖ್ಯಮಂತ್ರಿ ಭರವಸೆ ಅನುಸರಿಸಿ ಚಿತ್ರ ನಿರ್ಮಾಣ ಹಾಗೂ ಪ್ರದರ್ಶನದ ಬಹಿಷ್ಕಾರ ಹಿಂತೆಗೆದುಕೊಂಡು ಮಾತುಕತೆ ಮತ್ತೇ ಮುಂದಾಗಿರುವುದು ಹಾಗೂ



ತಮ್ಮಲ್ಲಿ ಒಂದು ಇತ್ಯರ್ಥದ ಸೂತ್ರ ರೂಪಿಸಿಕೊಳ್ಳಲು ಯತ್ನಿಸುತ್ತಿರುವುದು ಸ್ವಾಗತಾರ್ಹ ಬೆಳವಣಿಗೆ.

ಕಳೆದ ವಾರ ವಿಧಾನಸೌಧ ಚಲೋ ನಡೆಸಿ, ಅಹವಾಲು ಕೇಳಲು ಬಂದ ಮುಖ್ಯಮಂತ್ರಿಗಳತ್ತ ಚಪ್ಪಲಿ ತೂರಿ ಅಸಭ್ಯ, ಅನಾಗರೀಕವಾಗಿ ಕೆಲವರು ವರ್ತಿಸಿದ್ದರು. ಇಲ್ಲಿ ಉದ್ಭವಿಸಿರುವ ಪ್ರಶ್ನೆಯಲ್ಲಿ ಸರ್ಕಾರದ ಪಾತ್ರವೇ ಪ್ರಮುಖ ಎನ್ನುವುದಕ್ಕಿಂತ ಅದಕ್ಕೆ ಸೀಮಿತತೆ ಇದೆ. ನಿರ್ಮಾಪಕರು - ಪ್ರದರ್ಶಕರ ನಡುವೆ ಇತ್ಯರ್ಥ ವಾಗಬೇಕಾದ ಮುಖ್ಯ ಪ್ರಶ್ನೆಗಳಿವೆ.

ಮೇಲಾಗಿ ಜಾಗತೀಕರಣ-ಉದಾರೀಕರಣದ ಚಂಡಮಾರುತದ ಹೊಡೆತಕ್ಕೆ ಸಿಕ್ಕು ಕೈಗಾರಿಕೆ, ಕೃಷಿ, ಸಂಸ್ಕೃತಿ ಎಲ್ಲವೂ ತತ್ತರಗೊಂಡು ಬಿಕ್ಕಟ್ಟಿನಲ್ಲಿರುವಾಗ ಚಿತ್ರೋದ್ಯಮವೊಂದೇ ಪ್ರತ್ಯೇಕವಾಗಿರುತ್ತದೆ ಎಂದು ಭಾವಿಸುವುದು ಸರಿಯಲ್ಲ. ಒಟ್ಟು ಬಿಕ್ಕಟ್ಟಿನಲ್ಲಿ ಸರ್ಕಾರ ಹಾಗೂ ಇತರರು ಪರಿಹಾರಾತ್ಮಕವಾಗಿ ಪಾತ್ರವಹಿಸುವ ಅಗತ್ಯವಿದೆಯಾದರೂ ಸ್ವತಃ ಕನ್ನಡ ಚಲನಚಿತ್ರ ಉದ್ಯಮವೇ ಗುಣಮಟ್ಟ ಮತ್ತು ಸೃಜನಶೀಲತೆ ಒಳಗೊಂಡು ಆಂತರಿಕ ಸ್ವವಿಮರ್ಶೆ ಮಾಡಿಕೊಳ್ಳುವುದು, ತಿದ್ದಿಕೊಂಡು ಕುರಿತು ಬೆಳೆಯುವ ಯತ್ನದ ಅಗತ್ಯವಿದೆ.

ಆದಷ್ಟು ಬೇಗ ಸಮಸ್ಯೆಯು ಇತ್ಯರ್ಥಕ್ಕೆ ಬರುವುದು, ಅದರತ್ತ ಸರ್ಕಾರವೂ ಸಹಕರಿಸಿ, ಪಾತ್ರ ಪ್ರಯತ್ನ ನಡೆಸುವುದು ಕನ್ನಡದ ಚಲನಚಿತ್ರೋದ್ಯಮದ ಬೆಳವಣಿಗೆಗೆ ಮತ್ತು ಒಟ್ಟು ದೇಶದ ಸಾಂಸ್ಕೃತಿಕ ಸಂದರ್ಭಕ್ಕೆ ಪ್ರಜಾಸತ್ತಾತ್ಮಕ ಪರಿಹಾರ ಕಂಡುಕೊಳ್ಳುವಂತಾಗಲಿ.

ಸರ್ವಾಧಿಕಾರಿ ಪ್ರವೃತ್ತಿ

ಕನ್ನಡ ಚಲನಚಿತ್ರೋದ್ಯಮದವರ ಚಳುವಳಿಯಲ್ಲಿ ಈ ಹಂತದಲ್ಲಿ ಗಮನಿಸಬೇಕಾದ ಬೆಳವಣಿಗೆಯೆಂದರೆ, ಕೆಲ ದಲಿತ, ರೈತ ಕನ್ನಡ ಸಂಘಟನೆಗಳು ತೊಡಗಿದ್ದು, ಈ ಉದ್ಯಮದ ಪ್ರಶ್ನೆಯನ್ನು ಭಾಷೆ, ಸಂಸ್ಕೃತಿ, ಬದುಕಿನ ಉಳಿವಿಗೆ ಹೇಗೆಲ್ಲಾ ಸಂಬಂಧ ಎಂದು ಜೋಡಿಸುವ ವಿಶ್ಲೇಷಣೆಗಳು ನಡೆದವು. ಈ ಚಳುವಳಿಯನ್ನು ಗೋಕಾಕ್ ಮಾದರಿಯ ಚಳುವಳಿ ಎಂದೆಲ್ಲಾ ಕರೆದದ್ದರ ಬಗ್ಗೆಯೂ ವಿಮರ್ಶೆಗಳಾದವು. ಹಾಗೆ ನೋಡಿದರೆ ಇಂತಹ ಒಂದು ಬೆಳವಣಿಗೆಗಳ ಸುತ್ತ ವಾದ-ವಿವಾದ - ಚರ್ಚೆ ಏಳುವುದು ಸಾಮಾನ್ಯ. ಹಾಗೆ ಆಗುವುದು ಚಳುವಳಿಯೊಂದರ ಅಗತ್ಯ. ಮುಕ್ತ-ಪ್ರಜಾಸತ್ತಾತ್ಮಕ ಸಂವಾದದ ಮೂಲಕ ಮಾತ್ರವೇ ಬೆಳಕು ಕಾಣಲು - ಬೆಳೆಯಲು ಸಾಧ್ಯ. ಇಂಥಲ್ಲಿ ವ್ಯಕ್ತಿ ನಿಷ್ಠೆಗಿಂತ ವಸ್ತು ನಿಷ್ಟತೆಯೇ ಪ್ರಧಾನವಾಗಿರಬೇಕು.

ಆದರೆ ಇಂತಹ ಚರ್ಚೆ ಎತ್ತಿದ, ಹಲವಾರು ಭಿನ್ನ ಅಭಿಪ್ರಾಯ ವ್ಯಕ್ತಪಡಿಸಿ ಎದ್ದು ನಿಂತ ಲಂಕೇಶ್ ಪತ್ರಿಕೆ ಮುಖ್ಯವಾಗಿ ಲಂಕೇಶರ ಕುಟುಂಬವನ್ನು ಬಹಿಷ್ಕರಿಸುವುದಾಗಿ ನಿರ್ಮಾಪಕರ ಸಂಘದ ಅಧ್ಯಕ್ಷ ಬಸಂತ ಕುಮಾರ್ ಪಾಟೀಲ್ ಘೋಷಿಸಿದ್ದು ಖಂಡನೀಯ. ಈ ಅನಾರೋಗ್ಯಕರ ಪ್ರವೃತ್ತಿಯನ್ನು ಒಪ್ಪಲು ಸಾಧ್ಯವಿಲ್ಲ. ನಾಡಿನ ಅನೇಕ ಆಗುಹೋಗುಗಳೊಂದಿಗೆ ತನ್ನದೇ ರೀತಿಯಲ್ಲಿ (ಭಿನ್ನಾಭಿಪ್ರಾಯವಿರಬಹುದಾದರೂ) ಗುರುತಿಸಿಕೊಂಡಿರುವ ಪತ್ರಿಕೆಯ ಸಂವಾದವನ್ನು ವ್ಯಕ್ತಿನಿಷ್ಟ ಮಟ್ಟಕ್ಕೆ ಇಳಿಸಿದ್ದು ಅನಾಹುತಕಾರಿ. ಇದು ಈಗ ಎದ್ದಿರುವ ಚಳುವಳಿ - ಎತ್ತಿದ ಪ್ರಶ್ನೆಗಳಲ್ಲಿಯೂ ಸಮೂಹದ ಪ್ರಶ್ನೆಗಳೆಷ್ಟು? ಕೆಲವರ ಪ್ರಶ್ನೆಗಳೆಷ್ಟು ಎಂಬ ಪ್ರಶ್ನೆಯನ್ನು ಕೇಳುವಂತೆ ಮಾಡುತ್ತಿದೆ.

ಬೆಂಗಳೂರು ಹಬ್ಬ ಸಾಮಾನ್ಯ ಜನರಿಗಿಲ್ಲದ 'ಹಬ್ಬ"

ನವೆಂಬರ್ 30 ರ ಮಂಗಳವಾರ ಬೆಳಿಗ್ಗೆ ಪತ್ರಿಕೆ ನೋಡುತ್ತಿದ್ದಾಗ 'ಬೆಂಗಳೂರು ಹಬ್ಬಕ್ಕೆ ಧರಂ ಬೆಂಬಲ" ಎಂದು ಪ್ರಕಟವಾಗಿತ್ತು. ಇದೇ ಡಿಸೆಂಬರ್ 5 ರಿಂದ 12ರವರೆಗೆ ಬೆಂಗಳೂರು ಹಬ್ಬ ನಡೆಯಲಿದೆ. ಇದನ್ನು ಅತ್ಯಂತ ಆತುರದಿಂದ ಪ್ರಕಟಿಸಿದ್ದಾರೆ. ಹಬ್ಬಕ್ಕೆ ಸಡಗರದ ಸಿದ್ದತೆಗಳು ನಡೆಯುತ್ತಿದೆ. ಪ್ರಚಾರವು ನಡೆಯುತ್ತಿದೆ. ಕಳೆದ ವರ್ಷ ಹುಟ್ಟಿದ ಬೆಂಗಳೂರು ಹಬ್ಬ ತುಂಬ ಒಳ್ಳೆಯ ಸಂಸ್ಕೃತಿಯ ವಾತಾವರಣ ಸೃಷ್ಟಿಸುವ ನಿರೀಕ್ಷೆ ಹುಟ್ಟಿಸಿತ್ತು. ಕಳೆದ ವರ್ಷ ಹಬ್ಬಕ್ಕೆ ನಮ್ಮ ತಂಡದಿಂದ ಒಂದು ನಾಟಕವನ್ನೂ ಸಹ ಮಾಡಿದ್ದೆವು. ಈ ಹಬ್ಬ ನಡೆದಿದ್ದು ದೊಡ್ಡ ದೊಡ್ಡ ಕಲಾಕ್ಷೇತ್ರಗಳಲ್ಲಿ, ಉದ್ಯಾನವನಗಳಲ್ಲಿ,



ಇನ್ನೂ ಅನೇಕ ಕಡೆಗಳಲ್ಲಿ ನಮ್ಮ ನಾಟಕ ನಡೆದಿದ್ದು ಕಬ್ಬನ್ ಪಾರ್ಕ್‌ನ ಮಧ್ಯಭಾಗದಲ್ಲಿ. ಅತ್ಯಂತ ನಿರಾಶೆ ಎಂದರೆ ನಮ್ಮ ನಾಟಕ ನೋಡುವುದಕ್ಕೆ ಹೆಚ್ಚೆಂದರೆ ಕೇವಲ 10-20 ಜನರು ಮಾತ್ರ ಸೇರಿದ್ದು ಅದು ವಿಶ್ರಾಂತಿಗೆ ಸಮಯ ಕಳೆಯುವುದಕ್ಕೆ ಮತ್ತು ಕೆಲ ಮಧ್ಯಮ ವರ್ಗದ ಜನರು ಮಾತ್ರ ಈ ಕಾರ್ಯಕ್ರಮಗಳಿಗೆಂದು ಕಬ್ಬನ್ ಪಾರ್ಕ್ ಉದ್ಯಾನವನದಲ್ಲಿ 8 ವೇದಿಕೆಗಳು ಹಾಕಿದ್ದರು. ಒಂದೊಂದು ಕಡೆ ಒಂದೊಂದು ಬಗೆಯ, ನಾಟಕ, ಯಕ್ಷಗಾನ, ಮಕ್ಕಳ ನಾಟಕ, ಗಾಯನ ಸ್ಪರ್ಧೆ, ಇನ್ನೂ ಇತರೆ ಕಾರ್ಯಕ್ರಮಗಳು

ಪುಟ 4 ಕ್ಕೆ

ಸಿಪಿಐ(ಎಂ) ಗುಲ್ಬರ್ಗಾ ನಗರ ಸಮ್ಮೇಳನ

ನವೆಂಬರ್ 27.28 ಭಾರತ ಕಮ್ಯೂನಿಸ್ಟ್ ಪಕ್ಷ (ಮಾರ್ಕ್ಸ್‌ವಾದಿ) ಗುಲಬರ್ಗಾ ನಗರ ಸಮ್ಮೇಳನ ನಗರದ ಕನ್ನಡ ಭವನದಲ್ಲಿ ನಡೆಯಿತು. ಈ ಸಮ್ಮೇಳನದ ಉದ್ಘಾಟಕರಾಗಿ ಸಿ.ಪಿ.ಐ(ಎಂ) ಪಕ್ಷದ ರಾಜ್ಯ ಕಾರ್ಯದರ್ಶಿ ಮಂಡಳಿ ಸದಸ್ಯರಾದ ಕಾಂ.ಮಾರುತಿ ಮಾನ್ಪಡೆ ಮಾತನಾಡುತ್ತಾ ದೇಶದಲ್ಲಿ ಮತ್ತು ರಾಜ್ಯದಲ್ಲಿ ಪಟ್ಟಭದ್ರ ಹಿತಾಸಕ್ತಿಗಳು ಬಂಡವಾಳ ಶಾಹಿಗಳು ಆಡಳಿತವನ್ನು ಕಪಿಮುಷ್ಠಿಯಲ್ಲಿ ಇಟ್ಟುಕೊಳ್ಳಲು ಶ್ರಮಿಸುತ್ತಿವೆ. ಇದರಿಂದ ದುಡಿಯುವ ಜನತೆಗೆ ತುಂಬಾ ಗಂಡಾಂತರ ಬರಲಿದೆ. ರಾಜ್ಯದಲ್ಲಿ ಆರ್.ಎಸ್.ಎಸ್. ವಿ.ಎಚ್.ಪಿ ಬಜರಂಗದಳ ದಂತಹ ಕೋಮುವಾದ ಸಂಘಟನೆಗಳು ಧಾರ್ಮಿಕ ಹೆಸರಿನಲ್ಲಿ ರಾಷ್ಟ್ರೀಯ ಭಾವೈಕ್ಯತೆ ಕೋಮು ಸೌಹಾರ್ದತೆ ಹಾಳುಮಾಡಲು ಮುಂದಾಗಿವೆ. ಉದಾ: ಬಾಬಾಬುಡನ್‌ಗಿರಿ, ಶಿಶುನಾಳದಂತಹ ಕೇಂದ್ರಗಳಲ್ಲಿ ಮತೀಯ ಸಾಮರಸ್ಯವನ್ನು ಹದಗೆಡಿಸುತ್ತಿದ್ದಾರೆ. ನಾವು ಜನರಿಗೆ ಜಾಗೃತಿ ಮೂಡುವುದರ ಜೊತೆಗೆ ರಾಷ್ಟ್ರೀಯ ಭಾವೈಕ್ಯತೆ ಸೌಹಾರ್ದತೆಯನ್ನು ಕಾಪಾಡಿಕೊಂಡು ಹೋಗಬೇಕೆಂದು ಕರೆ ನೀಡಿದರು. ಮುಖ್ಯ ಅತಿಥಿಗಳಾಗಿ ಪಕ್ಷದ ರಾಜ್ಯ ಕಾರ್ಯದರ್ಶಿ ಮಂಡಳಿ ಸದಸ್ಯರಾದ ಕೆ.ನೀಲಾ ಮಾತನಾಡುತ್ತಾ ಉದಾರೀಕರಣ, ಜಾಗತೀಕರಣ, ವಿಶ್ವಬ್ಯಾಂಕಿನ ನೀತಿಗಳ ಜಾರಿ ಮಾಡುವುದರಿಂದ ದೇಶದ ಜನತೆ ತತ್ತರಿಸಿ ಹೋಗಿದ್ದಾರೆ ಇಂತಹ ನೀತಿಗಳ ವಿರುದ್ಧ ಈ ಮುಂದಿನ ದಿನಗಳಲ್ಲಿ ಹೋರಾಟಕ್ಕೆ ಸಜ್ಜಾಗಬೇಕೆಂದು ಸಮ್ಮೇಳನದ ಪ್ರತಿನಿಧಿಗಳಿಗೆ ಕರೆ ನೀಡಿದರು. ಪಕ್ಷದ ಜಿಲ್ಲಾ ಕಾರ್ಯದರ್ಶಿ ಮಂಡಳಿ ಸದಸ್ಯರಾದ ಮೇಘರಾಜ ಕಠಾರೆ ಮಾತನಾಡಿದರು. ಅದೇ ರೀತಿಯಾಗಿ ಜಿಲ್ಲಾ ಸಮಿತಿ ಸದಸ್ಯರಾದ ಶಾಂತ ಘಂಟೆ, ಮಂಜೂರ ಪಟೇಲ್, ಚಂದಮ್ಮಾ ಗೋಳಾ ಮುಂತಾದವರು ಈ ಸಮ್ಮೇಳನದಲ್ಲಿ ಪಾಲ್ಗೊಂಡಿದ್ದರು. ನಂತರ ಪ್ರತಿನಿಧಿಗಳ ಅಧಿವೇಶನದಲ್ಲಿ ನಗರ ಕಾರ್ಯದರ್ಶಿ ಕೆ.ವಿ.ಎನ್. ರಾವ್ ಕರಡು ವರದಿಯನ್ನು ಮಂಡಿಸಿದರು. ಈ ವರದಿಯ ಮೇಲೆ ಪ್ರತಿನಿಧಿಗಳು ಚರ್ಚಿಸುತ್ತಾ ನಗರದಲ್ಲಿ ರಾಜಕೀಯವಾಗಿ, ಸಾಮಾಜಿಕವಾಗಿ, ಆರ್ಥಿಕವಾಗಿ, ಸಾಂಸ್ಕೃತಿಕವಾದ ವಿದ್ಯಮಾನಗಳು ಕೋಮುವಾದದ ಬೆಳವಣಿಗೆ. ಅಭಿವೃದ್ಧಿ ಕಾರ್ಯಗಳ ಕುಂಟಿತದ ಬಗ್ಗೆ ಮಾತನಾಡಿದರು. ಸಂಘಟನಾ ವಿಷಯ ಚರ್ಚಿಸಿದರು. 2 ದಿನಗಳ ಕಾಲ ನಡೆದ ಸಮ್ಮೇಳನದಲ್ಲಿ ಸುದೀರ್ಘವಾಗಿ ಚರ್ಚಿಸಿ ಹಲವಾರು ತೀರ್ಮಾನಗಳನ್ನು ಕೈಗೊಳ್ಳಲಾಯಿತು.

1. ಹಳದಿ ಕಾರ್ಡಿಗಾಗಿ 2. ಮನೆನಿವೇಶನಕ್ಕಾಗಿ 3.ಪ್ರತಿನಿತ್ಯ ನೀರುಸರಬರಾಜಿಗಾಗಿ 4. ನಗರದಲ್ಲಿ ಶೌಚಾಲಯ ವ್ಯವಸ್ಥೆಗಾಗಿ 5. ಭೂಮಿ ಹೋರಾಟ 6. ರಸ್ತೆ ಚರಂಡಿ ವ್ಯವಸ್ಥೆಗಾಗಿ 7. ಭ್ರಷ್ಟಾಚಾರ ವಿರುದ್ಧ 8. ನಗರದ ಕನಿಷ್ಟ ಮೂಲಭೂತಗಳ ಸಮಸ್ಯೆಗಳ ಪರಿಹಾರಕ್ಕಾಗಿ ಹೋರಾಟ ಮಾಡಲು ತೀರ್ಮಾನಗಳನ್ನು ಕೈಗೊಳ್ಳಲಾಯಿತು.

ಈ ಸಮ್ಮೇಳನದಲ್ಲಿ ಅಫಜಲಪುರ, ಚಿತ್ತಾಪೂರ ಮತ್ತು ಗುಲಬರ್ಗಾ ನಗರದ ಸುಮಾರು 12 ಶಾಖೆಗಳಿಂದ ನೂರಕ್ಕಿಂತ ಹೆಚ್ಚು ಪ್ರತಿನಿಧಿಗಳು ಪಾಲ್ಗೊಂಡಿದ್ದರು. ನಂತರ ಈ ಸಮ್ಮೇಳನ 13 ಜನರ ಹೊಸ ಸಮಿತಿಯನ್ನು ಆಯ್ಕೆಮಾಡಿತು. ಕಾರ್ಯದರ್ಶಿಯಾಗಿ ಗಂಗಮ್ಮಾ ಬಿರಾದಾರ ಮತ್ತು ಸಮಿತಿ ಸದಸ್ಯರಾಗಿ ಕೆ.ವಿ.ಎನ್.ರಾವ, ಜೈಲಾಲ ತೋಟದ ಮನೆ, ಗೌರಮ್ಮಾ ಪಾಟೀಲ್, ಸಂದೀಪ, ವನಮಾಲ, ಸಿದ್ದಮ್ಮಾ ತಾರಫೈಲ್, ರಾಮಣ್ಣ ಔರಾದ, ಮಂಜೂರ ಪಟೇಲ್, ಮಹಮದ್ ಖಾದರ ಹನ್ನುಬಾಯಿ, ಚಂದಮ್ಮಾ ಈರಮ್ಮಾ ಬಂಗಾರ ಕಿರಣಗಿ, ಶಾಂತ ಘಂಟೆ.

ಸಿಪಿಐ(ಎಂ) ವರ್ತೂರು ಕ್ಷೇತ್ರ ಸಮಿತಿ 8ನೇ ಸಮ್ಮೇಳನ

ಸಿಪಿಐ(ಎಂ) ವರ್ತೂರು ಕ್ಷೇತ್ರ ಸಮಿತಿ 8ನೇ ಸಮ್ಮೇಳನ ಇದೇ ನವೆಂಬರ್ 27ರಂದು ಪಕ್ಷದ ರಾಜ್ಯ ಸಮಿತಿಯ ಸದಸ್ಯರಾದ ರಾಜನ್ ಧ್ವಜಾರೋಹಣ ಮಾಡುವುದರ ಮುಖಾಂತರ ಪ್ರಾರಂಭವಾಯಿತು. ಸ್ವಾಗತ ಭಾಷಣ ಹೆಚ್.ಎನ್.ಗೋಪಾಲಗೌಡ, ಅಧ್ಯಕ್ಷತೆ ಕೆ.ಆರ್.ವೆಂಕಟೇಶ್‌ಗೌಡರು ವಹಿಸಿದ್ದರು. ಸಮ್ಮೇಳನದ ಉದ್ಘಾಟನೆಯನ್ನು ಬೈಯ್ಯಾರೆಡ್ಡಿ ಮಾಡಿದರು ಮತ್ತು ಪ್ರಕಾಶ್ ಮಾತನಾಡಿದರು.

ಸಂಜೆ ಉದಯನಗರದ ಮುಖ್ಯ ಬೀದಿಗಳಲ್ಲಿ ಸಿಪಿಐ(ಎಂ) ನ ಕಾರ್ಯಕರ್ತರು ಮೆರವಣಿಗೆ ನಡೆಸಿದರು. ಆರ್.ಆರ್.ಬೇಕರಿ ಹತ್ತಿರ ಬಹಿರಂಗ ಸಭೆ ನಡೆಯಿತು. ಸ್ವಾಗತವನ್ನು ಸಿ.ರಾಮಚಂದ್ರ ಮಾಡಿದರು. ಅಧ್ಯಕ್ಷತೆಯನ್ನು ಕುಂಜಪ್ಪನ್ ವಹಿಸಿದ್ದರು. ಸಭೆಯನ್ನುದ್ದೇಶಿಸಿ, ಹೆಚ್.ಎನ್. ಗೋಪಾಲಗೌಡರು, ಜಿ.ಸಿ. ಬಯ್ಯಾರೆಡ್ಡಿ, ಪ್ರಕಾಶ್ ಮಾತನಾಡಿದರು. ಜಯರಾಂ ವಂದನಾರ್ಪಣೆ ಮಾಡಿದರು. ವೇದಿಕೆಯಲ್ಲಿ ಗೌರಮ್ಮ ಸಿ.ರಮೇಶ್ ಇದ್ದರು. ನಂತರ ಹುಲಿಕಲ್ ನಟರಾಜು ಪವಾಡ ಸಂಶೋಧನೆ ಕಾರ್ಯಕ್ರಮ ನಡೆಯಿತು.

28-11-2004 ರಂದು ಕಾರ್ಯದರ್ಶಿ ಗೋಪಾಲಗೌಡರು ಮಂಡಿಸಿದ ವರದಿಯ ಮೇಲೆ ಚರ್ಚೆ ನಡೆದು ಹಿಂದಿನ ಮೂರು ವರ್ಷಗಳಲ್ಲಿ ಪಕ್ಷ ನಡೆಸಿದ ಜನಪರ ಹೋರಾಟಗಳ ಬಗ್ಗೆ ವಿಮರ್ಶಿಸಿ, ಮುಂದಿನ ಹೋರಾಟಗಳ ಬಗ್ಗೆ ಚರ್ಚಿಸಿ ಕೆಲವು ಮುಖ್ಯ ನಿರ್ಣಯಗಳನ್ನು ಅಂಗೀಕರಿಸಿತು.

ನಿರ್ಣಯಗಳು

1. ಕೆ.ಆರ್.ಪುರಂ ಮೇಲ್ ಸೇತುವೆ ಬಳಿ ಲೆವೆಲ್ ಕ್ರಾಸ್ ತೆರವುಗೊಳಿಸಲು ಒತ್ತಾಯಿಸಿ 2. ಉದಯನಗರ ಟಿಟಿಕೆ ಹತ್ತಿರ ಜನ ರಸ್ತೆ ದಾಟಲು ಸುರಂಗ ಮಾರ್ಗಬೇಕು ಎಂದು. 3. ಸ್ಲಂಗಳನ್ನು ಗುರುತಿಸಿ ಹಕ್ಕುಪತ್ರ ಕೊಡಿಸಲು ಹೋರಾಟ 4. ಕ್ಷೇತ್ರದಲ್ಲಿ ಮೂಲಭೂತ ಸೌಲಭ್ಯಗಳ ಜಾರಿಗೆ ಒತ್ತಾಯಿಸಿ 5. ಗುತ್ತಿಗೆ ಮತ್ತು ಗಾರ್ಮೆಂಟ್ ಕಾರ್ಮಿಕರಿಗೆ ಕನಿಷ್ಠ ವೇತನಕ್ಕೆ ಒತ್ತಾಯಿಸಿ

ನಂತರ ಸಮ್ಮೇಳನ ವರ್ತೂರು ಕ್ಷೇತ್ರದ 9 ಜನರ ಸಮಿತಿಯನ್ನು ಆರಿಸಿತು. ಹೊಸ ಕಾರ್ಯದರ್ಶಿಯಾಗಿ ಸಿ.ರಾಮಚಂದ್ರ ಹಾಗೂ ಹೆಚ್.ಎನ್.ಗೋಪಾಲಗೌಡ, ಸಿ.ಕುಂಜಪ್ಪನ್, ಗೌರಮ್ಮ ಪಿ.ಜಯರಾಮ್, ಸಿ.ರಮೇಶ, ರಾಮನಾಥನ್, ವಾರಿಯರ್, ಗಿರೀಶ್ ಆಯ್ಕೆ ಮಾಡಲಾಯಿತು ಮತ್ತು ಡಿಸೆಂಬರ್ 18,19,20 ರಂದು ನಡೆಯಲಿರುವ ಬೆಂಗಳೂರು ಜಿಲ್ಲಾ ಸಮ್ಮೇಳನಕ್ಕೆ 15 ಜನ ಪ್ರತಿನಿಧಿಗಳನ್ನು ಹೊಸ ಸಮಿತಿ ಆಯ್ಕೆ ಮಾಡಿತು.

ಅಕ್ಷರದಾಸೋಹ ಕೆಲಸಗಾರರ ಉಡುಪಿ ತಾಲ್ಲೂಕು ಮಟ್ಟದ ಸಂಘಟನೆ ಅಸ್ತಿತ್ವಕ್ಕೆ

ಉಡುಪಿ ತಾಲೂಕಿನಲ್ಲಿರುವ ಅಕ್ಷರದಾಸೋಹ (ಬಿಸಿಯೂಟ) ಕೆಲಸಗಾರರ ತಾಲೂಕು ಮಟ್ಟದ ಸಭೆಯು ತಾ: 28.11.2004 ರಂದು ಉಡುಪಿ ಕೃಷ್ಣಕೃಪಾ ಕಟ್ಟಡದ ಮಹಡಿಯಲ್ಲಿ ನಡೆಯಿತು. ಸಿಐಟಿಯು ಉಡುಪಿ ಜಿಲ್ಲಾ ಪ್ರಧಾನ ಕಾರ್ಯದರ್ಶಿ ಪಿ.ವಿಶ್ವನಾಥ ರೈಯವರು ಮಾತನಾಡುತ್ತಾ ಎಲ್ಲರಿಗೂ ವಿದ್ಯೆ ಒದಗಿಸುವ ಜವಾಬ್ದಾರಿ ಸರಕಾರದ್ದು. ಕನ್ನಡ ಶಾಲೆಗೆ ಬರುವ ವಿದ್ಯಾರ್ಥಿಗಳು ಬಡವರ್ಗಕ್ಕೆ ಸೇರಿದವರು. ಈ ವಿದ್ಯಾರ್ಥಿಗಳಿಗೆ ಪ್ರೋತ್ಸಾಹ ಕೊಡುವ ಉದ್ದೇಶದಿಂದ ಬಿಸಿಯೂಟ ಯೋಜನೆ ಸರಕಾರ ಹಾಕಿಕೊಂಡಿದೆ. ಈ ಬಿಸಿಯೂಟ ಕೆಲಸಗಾರರೂ ಬಡವರ್ಗಕ್ಕೆ ಸೇರಿದವರು. ತಾವು ದುಡಿಮೆಗೆ ಉತ್ತಮ ವೇತನ ಪಡೆಯುವ ಹಕ್ಕೂ ಇವರಿಗಿದೆ. ಈ ಕೆಲಸಗಾರರಿಗೆ ಕೆಲಸ ಖಾಯಂ ಮಾಡಬೇಕು. ವೇತನ ಹೆಚ್ಚಳ ಮಾಡಬೇಕು, ಸರಕಾರಿ ಶಾಲೆ ಮತ್ತು ಖಾಸಗಿ ಶಾಲೆಗಳಿಗೆ ಒಂದೇ ರೀತಿಯ ಊಟದ ವ್ಯವಸ್ಥೆ ಮಾಡಬೇಕು. ಇದಕ್ಕಾಗಿ ಅಕ್ಷರದಾಸೋಹ ಕೆಲಸಗಾರರು ಹೋರಾಟಕ್ಕೆ ತಯಾರಾಗಬೇಕು ಎಂದರು.

ಶ್ರಿ ರಮೇಶ ಮೆಂಡನ್‌ರವರು ಪ್ರಾಸ್ತಾವಿಕ ಭಾಷಣ ಮಾಡಿ ಸರಕಾರಿ ಶಾಲೆಗೆ ಕೊಡುವ ಸವಲತ್ತುಗಳನ್ನು ಖಾಸಗಿ ಶಾಲೆಗಳಿಗೂ ಸರಕಾರ ಒದಗಿಸಬೇಕು, ಕೆಲಸಗಾರರಿಗೆ ವೇತನ ಕೊಡುವಾಗ ಚೆಕ್ ಕಲೆಕ್ಷನ್ ಚಾರ್ಜನ್ನು ಅವರ ಸಂಬಳದಲ್ಲಿ ಕಡಿತಮಾಡಿ ಕೊಡುವ ಕ್ರಮವನ್ನು ಬದಲಾಯಿಸಬೇಕು ಎಂದರು.

ಸಭೆಯನ್ನುದ್ದೇಶಿಸಿ ಶ್ರೀಮತಿ ಯಶೋಧಾ, ಶ್ರೀಮತಿ ವೇದಾವತಿ ಹೆಜಮಾಡಿ, ಕೃಷ್ಣಮ್ಮ ಪಡುಬಿದ್ರಿ ಮೊದಲಾದವರು ಸಂಘಟನೆಯ ಬಗ್ಗೆ ಮಾತನಾಡಿದರು. ವೇದಿಕೆಯಲ್ಲಿ ಪಿ.ವಿಶ್ವನಾಥ ರೈ, ರಮೇಶ ಮೆಂಡನ್, ಶ್ರೀಮತಿ ಕೃಷ್ಣಮ್ಮ ಶ್ರಿಮತಿ ದೇವಕಿ ಪಡುಬಿದ್ರಿ, ಸುಂದರಿ ಕಲ್ಯಾಣಪುರ, ಕೃಷ್ಣ ಎಸ್. ಅಮೀನ್, ಸಾಧು ಅಮೀನ್ ಉಪಸ್ಥಿತರಿದ್ದರು.

ಈ ಸಭೆಯಲ್ಲಿ ಉಡುಪಿ ತಾಲೂಕು ಅಕ್ಷರ ದಾಸೋಹ ಕೆಲಸಗಾರರ ಸಂಘಟನಾ ಸಮಿತಿಯನ್ನು ರಚಿಸಲಾಯಿತು. ಈ ಸಮಿತಿಗೆ ಶ್ರಿಮತಿ ಶೋಭ ವಿ.ಕರಂಬಳ್ಳಿ ಮತ್ತು ಶ್ರೀಮತಿ ಕೃಷ್ಣಮ್ಮ ಪಡುಬಿದ್ರಿ ಸಂಚಾಲಕರಾಗಿ ಆಯ್ಕೆಯಾದರು.

ತಾಲೂಕು ಸಮಿತಿಗೆ ಸದಸ್ಯರಾಗಿ ಯಶೋಧಾ ಹೆಜಮಾಡಿಕೋಡಿ, ವೇದಾವತಿ ಹೆಜಮಾಡಿ, ಶಕುಂತಲರಾವ್ ಅಲೆವೂರು, ಲಲಿತ ಸುಬ್ಬಹ್ಮಣ್ಯನಗರ, ಸೆಲಿಟಾ ಕಿದಿಯೂರು, ಸಹನಾ ಕಂಚಿನಡ್ಕ, ಯಶೋಧಾ ಪೊಲಿಪು, ಜಯಲಕ್ಷ್ಮಿ ನಂದಿಕೂರು, ಭವಾನಿ ತೆಂಕ ಏರ್ಮಾಳು, ಶಕುಂತಳ ಪಾಂಗಾಳ, ವಿಮಲ ಮೂಳೂರು, ಶಾರದಾ ಅಡ್ವೆ, ಸುಗಂಧಿ ಪಲಿಮಾರು, ಉಷಾ ಕಾಪು, ರೇಣುಕ, ಆರ್.ಏರ್ಮಾಳು, ಶಕುಂತಳ ಸಗ್ರಿ, ಕುಶಲ ಶೆಟ್ಟಿ ಅಚ್ಚಡ, ಶೋಭ ಉದ್ಯಾವರ, ಮಾಲತಿ ಸಗ್ರಿ, ಸುಜಾತ, ಶಾರದಾ ಕೆ., ಸನಿಲ್ ಕೈ ಪುಂಜಾಲ್, ಆಶಾ ಕಿನ್ನಿಮೂಲ್ಕಿ, ಕಲಾವತಿ ಮಂಚಿ, ಸುಶೀಲ ಕೊರಂಗ್ರಪಾಡಿ ಇವರು ಆಯ್ಕೆಯಾದರು.



ವಿದೇಶಿಯವರಿಗೆ ಮಾತ್ರ "ಹಬ್ಬ"

ಪುಟ 3 ರಿಂದ

ನಡೆಯುತ್ತಿದ್ದವು. ಈ 8 ವೇದಿಕೆಯ ಹತ್ತಿರ 30-40 ಜನರಿಗಿಂತ ಹೆಚ್ಚು ಇರಲಿಲ್ಲ. ಉದ್ಯಾನವನಗಳಲ್ಲಿ ನಡೆದಂತಹ ಕಳೆದ ವರ್ಷದ ಹಬ್ಬ ಯಶಸ್ವಿಯಾಗಲಿಲ್ಲ. ನಂತರ ನಾನು ಕಲಾಕ್ಷೇತ್ರಗಳ ಕಡೆ ನಾಟಕ ಮತ್ತು ಭರತನಾಟ್ಯ, ನೃತ್ಯ, ವೀಕ್ಷಿಸಲು ಹೋದೇನು. ಅಲ್ಲಿ ಹೆಚ್ಚೆಂದರೆ 200-300 ಜನರು ನೋಡುತ್ತಿದ್ದರು. ಎಲ್ಲರೂ ಸಹ ಮಧ್ಯಮ ವರ್ಗದ ಶ್ರೀಮಂತ ಜನರು, ಅತ್ಯಂತ ಆಸಕ್ತಿ ಇರುವ ಜನರು ಮಾತ್ರ ಬಂದಿದ್ದರು. ಬಡವರು, ಕೂಲಿ ಕೆಲಸ ಮಾಡುವವರು ಯಾರೂ ಬರಲಿಲ್ಲ. ಮುಖ್ಯವಾಗಿ ಸಾಮಾನ್ಯ ಜನರ ಮಧ್ಯೆ ನಡೆಯದ ಈ ಹಬ್ಬವು ಯಶಸ್ವಿಯಾಗಲಿಲ್ಲ. ಈ ಹಬ್ಬಕ್ಕೆ ಕರ್ನಾಟಕದ ಮೂಲೆ-ಮೂಲೆಗಳಿಂದ ತುಂಬ ದೂರದ ಜಿಲ್ಲೆಗಳಿಂದ ಮತ್ತು ದೊಡ್ಡ-ದೊಡ್ಡ ರಂಗ ತಂಡಗಳು, ಕಲಾತಂಡಗಳು ಹಬ್ಬಕ್ಕೆ ಭಾಗವಹಿಸಿದ್ದವು.


ಈ ವರ್ಷ ಈ ಬೆಂಗಳೂರು ಹಬ್ಬ ನಡೆಯುವುದಿಲ್ಲ ಎಂದುಕೊಂಡಿದ್ದೆ. ಆದರೆ ಹಬ್ಬಕ್ಕೆ ಕೇವಲ 4-5 ದಿನ ಇರುವ ಹಾಗೆ ಪ್ರಕಟಿಸಿಯೇ ಬಿಟ್ಟರು. ಈ ವರ್ಷದ ಹಬ್ಬದ ಸಿದ್ಧತೆಯ ನೇತೃತ್ವವನ್ನು ಆಫಾ(ಆರ್ಟಿಸ್ಟ್ಸ್ ಫೌಂಡೇಷನ್ ಫಾರ್ ಆರ್ಟ್ಸ್) ಸಂಘಟನೆ ವಹಿಸಿದೆ. ಹಬ್ಬದ ಎಲ್ಲ ಖರ್ಚುವೆಚ್ಚಕ್ಕೆ ಸುಮಾರು 1.25 ಕೋಟಿ ಹಣ ಬಿಡುಗಡೆಯಾಗಿದೆ. ಇದಕ್ಕೆ ಕೇಂದ್ರ- ರಾಜ್ಯ ಸರ್ಕಾರದಿಂದ ಸಹಾ ಹಣ ಬಿಡುಗಡೆಯಾಗಿದೆ.

ಹಬ್ಬದ ನೇತೃತ್ವ ವಹಿಸಿರುವ ಸಂಘಟನೆಯ ಪತ್ರಿಕಾ ಗೋಷ್ಟಿಯಲ್ಲಿ ಕಳೆದ ಬಾರಿ ನಡೆದ ಹಬ್ಬದಲ್ಲಿ ಕೆಲವು ತಪ್ಪುಗಳಾಗಿವೆ, ಅದನ್ನು ಈ ಸರಿಪಡಿಸಿ ತಪ್ಪು ನಡೆಯದ ಹಾಗೆ ನೋಡಿಕೊಳ್ಳುತ್ತೇವೆ. ಹೇಗೆಂದರೆ ಬೆಂಗಳೂರಿನ ದೊಡ್ಡ ದೊಡ್ಡ ದೇವಸ್ಥಾನಗಳಲ್ಲಿ "ವೇದಗೋಷ್ಟಿ-ನಾದಸ್ವರ" ಮತ್ತು ಅರಮನೆ ಆವರಣದಲ್ಲಿ ಹಬ್ಬದ ಊಟದ ಕಾರ್ಯಕ್ರಮ ಮತ್ತು ಬ್ರಿಗೇಡ್ ರೋಡ್ ಮತ್ತು ಮಹಾತ್ಮಾಗಾಂಧಿ ರಸ್ತೆಯ ಎಲ್ಲ ವ್ಯಾಪಾರದ ಅಂಗಡಿಗಳು ಹಬ್ಬದ ಒಂದು ವಾರದಂದು ರಾತ್ರಿಯೆಲ್ಲಾ ವ್ಯಾಪಾರ ನಡೆಸುವ ಕಾರ್ಯಕ್ರಮ, ಇದು ಹಬ್ಬದ ಕೆಲವು ಬದಲಾವಣೆ ವಿದೇಶೀಯರನ್ನು ಬೆಂಗಳೂರಿಗೆ ಆಕರ್ಷಿಸುವುದರಿಂದ ಅವರಿಗೆ ನಮ್ಮ ಕರ್ನಾಟಕದ ಸಂಸ್ಕೃತಿ-ಪರಂಪರೆಯನ್ನು ಪ್ರಚಾರಗೊಳಿಸುವುದಕ್ಕೋಸ್ಕರ ಈ ಹಬ್ಬವನ್ನು ನಡೆಸುತ್ತಿದ್ದೇನೆ ಎಂದು ತಿಳಿಸಿದೆ.

ಈ ಹಬ್ಬವನ್ನು ನಡೆಸಿಕೊಡಲು ರಾಜ್ಯದ ಮೂಲೆ ಮೂಲೆಗಳಿಂದ ಸುಮಾರು 400-500 ಜನರು ಭಾಗವಹಿಸಲಿದ್ದಾರೆ. ಆದರೆ ಈ ಕಾರ್ಯಕ್ರಮ ವೀಕ್ಷಿಸಲು ಕನಿಷ್ಟ ಒಂದು ದಿನ ಎಂದರೂ ಹೆಚ್ಚೆಂದರೆ ಒಂದು 7-8 ಸಾವಿರ ಜನ ವೀಕ್ಷಿಸಬಹುದು. ಬೆಂಗಳೂರಿನಲ್ಲಿ ಈಗಿರುವ ಜನಸಂಖ್ಯೆ ಪ್ರಕಾರ ಈ ಕಾರ್ಯಕ್ರಮ ಯಶಸ್ವಿಯಂತೂ ಅಲ್ಲ. ಈ ಕಾರ್ಯಕ್ರಮಕ್ಕೆ ಸರ್ಕಾರದ ಸಹಾಯವಲ್ಲದೆ ಮೆಟ್ರೋದಂತಹ ವಿದ್ದೇಶಿ ಕಂಪನಿಯ ಸಹಾಯ ನೀಡಿದೆ. ಒಟ್ಟಿನಲ್ಲಿ ಸಂಘಟಕರೇ ಹೇಳುವಂತೆ ವಿದೇಶಿಯರನ್ನು ಆಕರ್ಷಿಸಲು ನಡೆಯುತ್ತಿರುವ ಹಬ್ಬ.

ಇದರ ಬದಲು, ಜನರ ಮಧ್ಯೆ ಅತ್ಯಂತ ಹೆಚ್ಚು ಜನ ಸಂದಣಿ ಇರುವ ಪ್ರದೇಶಗಳಲ್ಲಿ ಈ ಕಾರ್ಯಕ್ರಮ ಹಮ್ಮಿಕೊಂಡರೆ ಅತ್ಯಂತ ಯಶಸ್ವಿಯಾಗಿ ಕಾರ್ಯಕ್ರಮ ನಡೆಯುತ್ತದೆ. ಇದು ಕೇವಲ ಬೆಂಗಳೂರಿನ ಕೇವಲ ಬೆರಳೆಣಿಕೆಯಷ್ಟು ಜನರಿಗೆ ಮಾತ್ರ ಈ ಕಾರ್ಯಕ್ರಮ ಇನ್ನು ಉಳಿದ ಶೇ.99 ಜನ ಏನು ಮಾಡಬೇಕು ಎಂದು. ಸರ್ಕಾರಕ್ಕೆ ಮತ್ತು ಈ ಕಾರ್ಯಕ್ರಮ ನಡೆಸುವ ಸಂಘ ಸಂಸ್ಥೆಗಳನ್ನು ನಾವಿಂದು ಕೇಳುತ್ತಿದ್ದೇವೆ. ಜನನ ಹೋದಿದರೆಷ್ಟು, ಬಿಟ್ಟರೆಷ್ಟು, ಬರಬೇಕಾದ್ದು ಬಂದರೆ ಆಯಿತು ಎಂಬ ಸಂಸ್ಕೃತಿಯನ್ನು ಒಂದು ಸರಕನ್ನಾಗಿಸಿ ವ್ಯಾಪಾರ ಮಾಡುವ ದಂಧೆಗಾರರ ಧೋರಣೆಯನ್ನು ನಾವಿಂದು ಪ್ರಶ್ನಿಸುತ್ತಿದ್ದೇವೆ.

ವಿನೋದ ಶ್ರಿರಾಂಪುರ



ನಿಮಗೆ ಒಸಮಾ ಬೇಕೆ? ನಮಗೆ ಅಂಡರಸನ್ ಕೊಡಿ' ನೊಂದವರ ಪ್ರತಿಭಟನೆಯಲ್ಲೊಂದು ಪ್ಲೇಕಾರ್ಡ್


ಎಳೆ ಕಂದಗಳ ಕಳೇಬರಗಳ ರಾಶಿ

ಭೋಪಾಲ್ ಅನಿಲ ದುರಂತದ
ಇಪ್ಪತ್ತು ವರ್ಷಗಳ ಕರಾಳ ನೆನಪು

ಭೋಪಾಲ್ ಇನ್ನೊಂದೂ ಬೇಡ



'ಕೊಲೆಗಾರ ಆಂಡರ್‌ಸನ್ ಬೇಕಾಗಿದ್ದಾನೆ' ಎಲ್ಲಾ ಭೋಪಾಲ್ ದುರಂತದಲ್ಲಿ ನೊಂದವರ ಪ್ರದರ್ಶನಗಳಲ್ಲಿ ಕಾಣುವ ಪ್ಲೇಕಾರ್ಡ್. ದುರಂತಕ್ಕೆ ಹೊಣೆಗಾರನಾದ ಯೂನಿಯನ್ ಕಾರ್ಬೈಡ್ ಅಧ್ಯಕ್ಷನಾಗಿದ್ದ ಅಂಡರ್‌ಸನ್ ಇನ್ನೂ ನಮ್ಮ ಪೊಲೀಸರಿಗೆ ಸಿಕ್ಕಲ್ಲವಂತೆ.



ಭೋಪಾಲ್ ದುರಂತದ ಚಾರಿತ್ರಿಕ ಪ್ರತೀಕವಾದ ಎಳೆ ಹಸುಗೂಸಿನ ಕಳೆಬರ



ಭೋಪಾಲ್ ದುರಂತದಲ್ಲಿ ಸತ್ತವರ ಮೆದುಳನ್ನು ವಿವರವಾಗಿ ಪರಿಶೀಲಿಸಿದ ಮೇಲೆ ರಾಶಿ ಬಿದ್ದ ಬುರುಡೆಗಳ ರಾಶಿ



ಭೋಪಾಲ್ ದುರಂತದ ಬಗ್ಗೆ ಶಿಲ್ಪ ಮತ್ತು 20 ವರ್ಷಗಳ ನಂತರವೂ ಪರಿಹಾರ ಸಿಗದೆ ನೊಂದವರ ಪ್ರತಿಭಟನೆ



ಶಿಶುನಾಳ : ಮತಾಂಧತೆ ವಿರುದ್ಧ ಮಾನವೀಯತೆ ಸಮರ

ದೇಶದಲ್ಲಿ ಇಂದು ಕೋಮುವಾದಿ ಶಕ್ತಿಗಳು, ಜಾತಿ, ಧರ್ಮದ ಹೆಸರಿನಲ್ಲಿ ದೇಶವನ್ನಾಳಲು ಹೊರಟಿವೆ. ಈ ಬಗ್ಗೆ ಜನ ಜಾಗೃತರಾಗಬೇಕೆಂದು ಚಿತ್ರದುರ್ಗದ ಬೃಹನ್ಮಠದ ಶಿವಮೂರ್ತಿ ಮುರುಘರಾಜೇಂದ್ರ ಸ್ವಾಮೀಜಿ ಹೇಳಿದರು.

ನವೆಂಬರ್ 28 ರಂದು ಕರ್ನಾಟಕ ಸೌಹಾರ್ದ ವೇದಿಕೆ ಶಿಗ್ಗಾವಿ ತಾಲೂಕಿನ ಶಿಶುನಾಳದ ಶರೀಫ ಗಿರಿಯಲ್ಲಿ ರವಿವಾರ ಜರುಗಿದ ಸೌಹಾರ್ದ ಸಾಂಸ್ಕೃತಿಕ ಸಮಾವೇಶವನ್ನು ಡೊಳ್ಳು ಬಾರಿಸುವ ಮೂಲಕ ಉದ್ಘಾಟಿಸಿ ಮಾತನಾಡಿದ ಅವರು ಇಂದು ಮತೀಯವಾದಿಗಳು ಆಯುಧ ಹಿಡಿದು ಹೋರಾಟ ಮಾಡುತ್ತಿದ್ದಾರೆ. ಅಂಥವರ ವಿರುದ್ಧ ಹೋರಾಟ ಮಾಡಲು ತಾಳ್ಮೆ, ಸಹನೆ ಹಾಗೂ ವೈಚಾರಿಕತೆಯ ಪ್ರಜ್ಞಾವಂತಿಕೆಯನ್ನು ಪ್ರದರ್ಶಿಸಬೇಕು. ಅದೇ ವೈಚಾರಿಕತೆ ಪರಮಾಸ್ತ್ರವಾಗಿ ಕೆಲಸ ಮಾಡುತ್ತದೆ ಎಂದ ಅವರು ನಾವೆಲ್ಲರೂ ಮತಾಂಧರ ಹಾಗೂ ಕೋಮುವಾದಿಗಳ ವಿರುದ್ಧ ಶಾಂತಿಯುತ ಹೋರಾಟ ಮಾಡಬೇಕೆಂದು ಕರೆ ನೀಡಿದರು.



ಇಂದು ದೇಶ ದ್ವೇಷದ ಬೆಂಕಿ ಜ್ವಾಲೆಯಾಗಿದೆ. ಇದನ್ನು ಕೋಮು ಕಿಚ್ಚು ಎಂದು ಕರೆಯಬಹುದು ಎಂದ ಅವರು ದೇಶದಲ್ಲಿ ಮತೀಯವಾದಿಗಳು ಶ್ರೀಸಾಮಾನ್ಯರ ಮನಸ್ಸಿಗೆ ಕೋಮುವಾದ ಕಿಚ್ಚನ್ನು ಹಚ್ಚಿ ದೇಶದ ಆಡಳಿತ ಹಿಡಿಯಲು ಹೊರಟಿವೆ ಹಾಗೂ ದೇಶಭಕ್ತಿಯ, ಹಿಂದುತ್ವದ ರಕ್ಷಣೆ ಹೆಸರಿನಲ್ಲಿ ಆಯುಧ ಕೈಗೆತ್ತಿಕೊಂಡಿದ್ದಾರೆ ಹಾಗೂ ದೇಶದ್ರೋಹಿ ವಿಚಾರಗಳನ್ನು ಹೊಂದಿರುವವರು ಇದರಿಂದ ಸಮಾಜದ ಸ್ವಾಸ್ಥ್ಯ ಹಾಳಾಗುತ್ತಿದೆ ಎಂದು ವಿಷಾದ ವ್ಯಕ್ತಪಡಿಸಿದರು. ಭಾರತ ದೇಶದಲ್ಲಿ ಎಲ್ಲ ಜಾತಿ, ಮತ, ಧರ್ಮದವರೂ ಸಮಾನವಾಗಿ ಬಾಳುವ ಅಧಿಕಾರವನ್ನು ಸಂವಿಧಾನದಲ್ಲಿಯೇ ನೀಡಲಾಗಿದೆ. ಆದ್ದರಿಂದ ಸಂವಿಧಾನಕ್ಕೆ ಹೆಚ್ಚಿನ ಬೆಲೆ ನೀಡಬೇಕು ಎಂದರು.

ಜಿ.ಕೆ.ಗೋವಿಂದರಾವ್ ಮಾತನಾಡಿ, ಸಮಾಜದಲ್ಲಿ ಮೇಲು ಕೀಳು ಎಂಬ ಭಾವನೆ ಬಿಟ್ಟು ಎಲ್ಲರೂ ಒಂದೇ ಎಂಬ ಭಾವನೆ ಮೂಡಬೇಕು, ಸಂಘ ಪರಿವಾರದವರು ಹಿಂದುತ್ವದ ವಿಚಾರದಲ್ಲಿ ಜನರ ಮನಸ್ಸು ಕೆಡಿಸಿ ಸಮಾಜದ ಶಾಂತಿಭಂಗ ಮಾಡಿದರು. ಆದರೆ ಅದರ ಪರಿಣಾಮವಾಗಿ ಕೇಂದ್ರದಲ್ಲಿ ಅಧಿಕಾರ ಕಳೆದುಕೊಂಡರು ಎಂದ ಅವರು ಕಂಚಿ ಶ್ರೀಗಳ ವಿಚಾರದಲ್ಲಿ ಸ್ವಾಮಿಜಿಗಳು ಕೂಗಾಟ ನಡೆಸಿರುವುದು ಹುಚ್ಚಾಟ. ಕಾವಿ ಬಟ್ಟೆ ಹಾಕಿದ ಸ್ವಾಮಿಗಳು ಕಾನೂನು ಮೀರಿ ನಿಂತಿದ್ದೇವೆ ಎಂದು ಭಾವಿಸಿದರೆ ಅದು ಅವರ ಮೂರ್ಖತನದ ಪರಮಾವಧಿ ಎಂದು ಟೀಕಿಸಿದರು.

ಧರ್ಮದ ಆಚರಣೆಗೆ ಇನ್ನೊಬ್ಬರನ್ನು ಶೋಷಣೆ ಮಾಡಬಾರದು. ಎಲ್ಲ ಧರ್ಮವನ್ನು ನಾವು ಪ್ರೀತಿಸಬೇಕು. ಇನ್ನೊಬ್ಬರ ರಕ್ತದೋಕುಳಿಯ ಮೇಲೆ ದೇವರ ಪೂಜೆ ಸಲ್ಲದು ಎಂದರು.

ಜಗತ್ತನ್ನು ಇಸ್ಲಾಮೀಕರಣ ಮಾಡುವುದಾಗಿ ಮುಸ್ಲಿಂ ಮೂಲಭೂತವಾದಿಗಳು ತಿಳಿದಿದ್ದರೆ ಅದು ಮೂರ್ಖತನ ಅದು ಎಂದೂ ಸಾಧ್ಯವಿಲ್ಲ. ಹಾಗೂ ಜಗತ್ತನ್ನು ಹಿಂದೂ ರಾಷ್ಟ್ರಮಾಡುವುದಾಗಿ ಹಿಂದೂ ಮೂಲಭೂತವಾದಿಗಳು ಭಾವಿಸುವುದರೆ ಅದು ಸಹ ಸಾಧ್ಯವಿಲ್ಲ. ಹಾಗೂ ನಕ್ಸಲ್‌ವಾದಿಗಳು ಹಾಗೂ ಬಜರಂಗದಳದವರು ಈ ದೇಶಕ್ಕೆ ಅಪಾಯಕಾರಿ ಎಂದರು.

ನಿಡುಮಾಮಿಡಿ ಚನ್ನಮಲ್ಲ ವೀರಭದ್ರಸ್ವಾಮೀಜಿ, ಇಳಕಲ್ ವೀರ ಮಹಾಂತ ಸ್ವಾಮೀಜಿಯವರು ಮಾತನಾಡಿದರು. ಭಸವರಾಜ ಸೂಳಿಭೂವಿ ಸ್ವಾಗತಿಸಿ ಪ್ರಾಸ್ತಾವಿಕವಾಗಿ ಮಾತನಾಡಿದರು.

ಜನವಾದಿ ಮಹಿಳಾ ಸಂಘಟನೆಯ ಕೆ.ನೀಲಾ ಮಾತನಾಡಿ, ಪ್ರಸ್ತುತ ಸಂದರ್ಭದಲ್ಲಿ ರಾಮಮಂದಿರ ಸಮಸ್ಯೆಯನ್ನು ಜೀವಂತವಾಗಿಟ್ಟು ಕೆಲವರು ಅಧಿಕಾರಗಳಿಸಲು ಹಾತೊರೆಯುತ್ತಿದ್ದಾರೆ. ಆದರೆ ಜನರಿಗೆ ಬೇಕಾಗಿರುವುದು ಅನ್ನ-ನೀರು ಎಂಬುದನ್ನು ಅರಿಯಬೇಕೆಂದರು. ಸಾಣೇನಹಳ್ಳಿ ಮಠದ ಪಂಡಿತಾರಾಧ್ಯ ಸ್ವಾಮಿಜಿ ಅವರು ಮನುಷ್ಯರ ಮಧ್ಯದ ಪ್ರೀತಿ, ಆರೋಗ್ಯಕರ ಸಮಾಜದ ಲಕ್ಷಣ, ಜೊತೆಗೆ ಮಾನಸಿಕ ಚೇತನದಿಂದ ಸೌಹಾರ್ದತೆ ಸಾಧ್ಯವೆಂದರು. ಸಭೆಯಲ್ಲಿ ತನ್ವೀರ್ ಪೀರಾ ಗುರೂಜಿ, ಜಿ.ಎನ್.ನಾಗರಾಜ, ಕಾರ್ಮಿಕ ಮುಖಂಡ ಸಿದ್ಧನಗೌಡ ಪಾಟೀಲ, ಪತ್ರಕರ್ತ ಸನತ್‌ಕುಮಾರ ಬೆಳಗಲಿ, ಇಳಕಲ್ಲ ಶ್ರೀಗಳು, ಎಚ್.ಎಲ್.ಕೇಶವಮೂರ್ತಿ, ಸಾತಿ ಸುಂದರೇಶ್, ಶ್ರೀಮಂತ ನಡುವಿನಕೇರಿ ಮುಂತಾದವರು ಪಾಲ್ಗೊಂಡು ಮಾತನಾಡಿದರು. ಸೌಹಾರ್ದ ವೇದಿಕೆ ಮುಖಂಡ ಬಸವರಾಜ ಸೂಳೆಭೂವಿ ಸ್ವಾಗತಿಸಿದರು. ಬಿ.ಪೀರಭಾಷಾ ವಂದಿಸಿದರು.

ಸೌಹಾರ್ದ ವೇದಿಕೆಯಿಂದ ಶಿಶುನಾಳ ಚಲೋ

ಶಾಂತಿ, ಸೌಹಾರ್ದತೆಯ ಸಂರಕ್ಷಣೆಗಾಗಿ ನವೆಂಬರ್ 28 ರ ರವಿವಾರ ಕರ್ನಾಟಕ ಸೌಹಾರ್ದ ವೇದಿಕೆ ಶಿಶುನಾಳ ಚಲೋ ಎಂಬ ಮಹತ್ವ ಪೂರ್ಣ ಕಾರ್ಯಕ್ರಮ ನಡೆಸಿತು.

ಈ ಕಾರ್ಯಕ್ರಮದಂಗವಾಗಿ ಭಾವೈಕ್ಯತೆಯ ಹರಿಕಾರ ಶಿಶುನಾಳ ಶರೀಫರ ಶರೀಫ ಗಿರಿಯಲ್ಲಿ ಸೌಹಾರ್ದ ಸಂಸ್ಕೃತಿ ಸಮಾವೇಶ ಜರುಗಿದರೆ, ಬೆಳಿಗ್ಗೆ ಈ ಸಮಾವೇಶದ ಮಹತ್ವಪೂರ್ಣ ನಾಂದಿಯಾಗಿ ಹಾವೇರಿ ಜಿಲ್ಲೆ ಹುಲಗೂರಿನಲ್ಲಿ ಹಜರೇಶ ಖಾದರಲಿಂಗ ಶಾಂತಿ ಯಾತ್ರೆ ಹಾಗೂ ಧಾರವಾಡ ಜಿಲ್ಲೆಯ ಕಳಸದಲ್ಲಿ ಗುರುಗೋವಿಂದ ಭಟ್ಟ ಶಾಂತಿ ಯಾತ್ರೆ ಉದ್ಘಾಟನೆಗೊಂಡು ಮಧ್ಯಾಹ್ನ ಶರೀಫ ಗಿರಿಯನ್ನು ತಲುಪಿದವು. ನಾಡಿನ ಮೂಲೆ ಮೂಲೆಗಳಿಂದ ಬಂದ ಸಾವಿರಾರು ಚಿಂತಕರು ಪ್ರಗತಿಪರ ವಿಚಾರಧಾರೆಯ ಜನ ಈ ಕಾರ್ಯಕ್ರಮದಲ್ಲಿ ಪಾಲ್ಗೊಂಡಿದ್ದರು.

ಹಲುಗೂರಿನಲ್ಲಿ ಧಾರವಾಡ ಕವಿವಿ ಅಧ್ಯಯನ ಪೀಠದ ಡಾ.ಎ.ಮುರಿಗೆಪ್ಪ ತಮಟೆಯನ್ನು ಬಾರಿಸುವ ಮೂಲಕ ಶಾಂತಿ ಯಾತ್ರೆಯನ್ನು ಉದ್ಘಾಟಿಸಿ, ಭಾವೈಕ್ಯತೆಯ ಕೊರತೆ ಇರುವ ಇಂದಿನ ಸಂದರ್ಭದಲ್ಲಿ ಪ್ರೀತಿ ಬೆಳೆಸುವ ಕೆಲಸ ನಡೆಸುವ ಇಂಥ ಕಾರ್ಯಕ್ರಮಗಳು ಅರ್ಥಪೂರ್ಣ ಎಂದರು. ಧಾರವಾಡ ಬಸವರಾಜ ದೇವರು, ಸಾಹಿತಿ ಸುಂದರೇಶ, ಕೆ.ನೀಲಾ, ಕೆ.ಎಲ್.ಅಶೋಕ, ಶ್ರೀಮಂತ ನಡುವಿನ ಕೆರೆ ಶಾಂತಿ ಯಾತ್ರೆ ಉದ್ಘಾಟನೆಯಲ್ಲಿ ಪಾಲ್ಗೊಂಡಿದ್ದರು.

ಮತ್ತೊಂದೆಡೆ ಕಳಸದಲ್ಲಿ ಗುರು ಗೋವಿಂದ ಭಟ್ ಶಾಂತಿಯಾತ್ರೆಯನ್ನು ಉದ್ಘಾಟಿಸಿದ ಪ್ರಗತಿಪರ ಚಿಂತಕ ಡಾ.ಜಿ.ರಾಮಕೃಷ್ಣ, ಇಂದು ನಮ್ಮ ಸಮಾಜದಲ್ಲಿ ಕೋಮುವಾದಿ ಶಕ್ತಿಗಳು ವಿಜೃಂಭಿಸುತ್ತಿವೆ. ಗ್ರಾಮ ಗ್ರಾಮಗಳಲ್ಲಿ ಶಾಂತಿ ಸೌಹಾರ್ದತೆ, ಪ್ರೀತಿ ಪ್ರೇಮದ ಭಾವನೆಗಳು ಮಾಯವಾಗುತ್ತಿದೆ. ದ್ವೇಷವನ್ನು ಬಿಟ್ಟು ಪ್ರೀತಿಸುವ ಸಮಾಜ ನಿರ್ಮಿಸುವ ಜವಾಬ್ದಾರಿ ಎಲ್ಲ ಪ್ರಗತಿಪರ ಸಂಘಟನೆಗಳ ಜನರ ಮೇಲಿದೆ. ಇಂಥ ಸಂದರ್ಭದಲ್ಲಿ ಸೌಹಾರ್ದ ಶಾಂತಿಯಾತ್ರೆಯಂತಹ ಕಾರ್ಯಕ್ರಮಗಳು ಜನರಲ್ಲಿ ಅರಿವು ಉಂಟುಮಾಡುತ್ತವೆ ಎಂದರು.

ಉದ್ಘಾಟನೆಯ ನೇತೃತ್ವ ವಹಿಸಿದ್ದ ದಾವಣಗೆರೆಯ ಜಯ ಮೃತ್ಯುಂಜಯ ಶರಣರು ಮಾತನಾಡಿ, ಯಾವುದೇ ಧರ್ಮ ಕೊಲೆ ಮಾಡು ಎಂದು ಹೇಳುವುದಿಲ್ಲ. ಪ್ರೀತಿಯನ್ನು ಹೇಳುತ್ತದೆ. ಧರ್ಮದ ಹೆಸರಿನಲ್ಲಿ ಮುಗ್ಧ ಜನರನ್ನು ಶೋಷಣೆ ಮಾಡುತ್ತಿರುವ ಇಂದಿನ ಪರಿಸ್ಥಿತಿ ಬದಲಾಗಬೇಕು. ಹಿಂದುಳಿದ ವಾಹಿನಿಯ ಜನರಲ್ಲಿ ಜ್ಞಾನದ ಅರಿವು ಬಿತ್ತುವ ಕೆಲಸ ನಡೆಯಬೇಕು. ಅಂದಾಗ ಶಾಂತಿ ಯಾತ್ರೆಯಂತಹ ಕಾರ್ಯಕ್ರಮಗಳು ಅರ್ಥಪೂರ್ಣವಾಗಲು ಸಾಧ್ಯ ಎಂದರು.

ಎಚ್.ಎಲ್.ಕೇಶವಮೂರ್ತಿ, ಹನಮಂತು, ಡಾ.ಸಿದ್ದನಗೌಡ ಪಾಟೀಲ, ಸುನಂದಾ, ಕಿಂಚಿರೆಡ್ಡಿ, ಸಿಪಿಐ(ಎಂ) ರಾಜ್ಯ ಕಾರ್ಯದರ್ಶಿ ಜಿ.ಎನ್.ನಾಗರಾಜ ಮೊದಲಾದವರು ಈ ಶಾಂತಿ ಯಾತ್ರೆಯಲ್ಲಿ ಪಾಲ್ಗೊಂಡಿದ್ದರು.

ಪಾಠ ಕಲಿಯಲಾರದ ಬಿಜ

ಹಲವಾರು ಕಸರತ್ತುಗಳನ್ನು ತೊಡಗಿ ಸಿಕ್ಕ 'ಹುಲ್ಲುಕಡ್ಡಿಯನ್ನು ಹಿಡಿದು ದಡ ಸೇರುವ ಹತಾಶೆ ಯತ್ನದಲ್ಲಿರುವ ಬಿಜೆಪಿ ಈಗ 'ದೇವರ ಮೊರೆ' ಹೊಕ್ಕಿದೆ. ರಾಂಚಿಯ ಅಧಿವೇಶನದಲ್ಲಿ ಅಡ್ವಾನಿ ಇಂತಹ ಹೊಸ ರಾಗ ತೆಗೆದದ್ದು ತಾವೆಂಥ ಡಾಂಭಿಕರು, ವಂಚಕರು ಎಂಬುದನ್ನು ತೋರಿಸಿಕೊಂಡರು. ಹಿಂದುತ್ವ, ಅಯೋಧ್ಯಾ, ಕಂಚಿ.... ಪ್ರಶ್ನೆಗಳಲ್ಲಿ ಬೇಳೆ ಬೇಯಿಸಿಕೊಳ್ಳಬಯಸಿದ ಬಿಜೆಪಿಗೆ ಜನರಿಂದ ಏನು ಕಾದಿದೆ? ಪ್ರಸಕ್ತ ವಿದ್ಯಮಾನಗಳತ್ತ ತೀಕ್ಷ್ಣ ವಿಶ್ಲೇಷಣೆ ಇಲ್ಲಿದೆ.

ರಾಂಚಿಯಲ್ಲಿ ಬಿಜೆಪಿಯ ರಾಷ್ಟ್ರೀಯ ಕಾರ್ಯಕಾರಿಣಿಯ ಮೂರು ದಿನಗಳ ಸಭೆಯ ಕೊನೆಯಲ್ಲಿ ನವೆಂಬರ್ 25 ರಂದು ಆ ಸಭೆಯ ಮುಖ್ಯ ಅಂಶಗಳ ಬಗ್ಗೆ ಒಂದು ಲಿಖಿತ ಹೇಳಿಕೆ ನೀಡುತ್ತಾ ಪಕ್ಷದ ಅಧ್ಯಕ್ಷ ಎಲ್.ಕೆ.ಅಡ್ವಾಣಿಯವರು ಅವರ ಟೀಕಾಕಾರರು ಕೂಡಾ ಊಹಿಸದ ಒಂದು ರಾಗ ಹಾಡಿದರು. ಭೂಮಿಯಿಂದ ಒಮ್ಮೆಲೇ ಸ್ವರ್ಗಕ್ಕೆ ನೆಗೆದು, ತಮ್ಮ ಪಕ್ಷ ಸ್ವತಃ ಪರಮಾತ್ಮನ ಆಶೀರ್ವಾದ ಪಡೆದ ಪಕ್ಷ ಎಂದು ದೇಶಕ್ಕೆ ತಿಳಿಸಿದರು. 'ಬಿಜೆಪಿ ಈ ದೇಶವನ್ನು ಅದರ ಪ್ರಸಕ್ತ ಸಮಸ್ಯೆಗಳಿಂದ ಹೊರತರಲಿಕ್ಕಾಗಿ, ಉನ್ನತ ಸಾಧನೆಗಳಿಗಾಗಿ ದೈವದತ್ತವಾದ ಸಾಧನ' ಎಂದು ಅವರು ಹೇಳಿದರು.

ಇದೊಂದು ಇದ್ದಕ್ಕಿದ್ದಂತೆ ಅವರ ಬಾಯಿಂದ ಹೊರಬಿದ್ದ ಹೇಳಿಕೆಯಲ್ಲ ಎಂಬ ನಾಟಕ ಸ್ಪಷ್ಟವಾಯಿತು. ಪತ್ರಿಕಾ ಸಮ್ಮೇಳನದಲ್ಲಿ ಪ್ರಶ್ನೆಯೊಂದಕ್ಕೆ ಉತ್ತರಿಸುತ್ತಾ ಅವರು 'ದೈವತ್ವ ಎಂಬುದು ಮಧ್ಯಯುಗದ ಪರಿಕಲ್ಪನೆಯೇನಲ್ಲ. ಬಹುಶಃ ನಾಸ್ತಿಕರು ಇದನ್ನು ನಂಬಲಿಕ್ಕಿಲ್ಲ. ಆದರೆ ದೇವರು ನಮ್ಮನ್ನು ಆರಿಸಿಕೊಂಡಿದ್ದಾರೆ. ನಮಗೆ ಈ ಜವಾಬ್ದಾರಿ ಕೊಟ್ಟಿದ್ದಾನೆ' ಎಂದರು.

ಸಮಾಧಾನ ಪಡಲು ಬೇರೇನಿದೆ?

ನಿಜವಾಗಿಯೂ ಇದು ಬಿಜೆಪಿಯ ಸ್ಥಿತಿಯನ್ನು ಎತ್ತಿ ತೋರಿದೆ. ಮೊದಲು ಈ ವರ್ಷ ಏಪ್ರಿಲ್ - ಮೇನಲ್ಲಿ ಈ ದೇಶದ ಜನ ಅದನ್ನು ತಿರಸ್ಕರಿಸಿದರು. ನಂತರ ಅಕ್ಟೋಬರ್‌ನಲ್ಲಿ ಮಹಾರಾಷ್ಟ್ರದ ಜನತೆ ಮತ್ತೆ ತಿರಸ್ಕರಿಸಿದರು. ಅಂದರೆ **ಐದೇ ತಿಂಗಳಲ್ಲಿ ಎರಡು ಬಾರಿ ಜನ ಅವರನ್ನು ತಿರಸ್ಕರಿಸಿದರು. ಆದ್ದರಿಂದ ಸಮಾಧಾನ ಪಟ್ಟುಕೊಳ್ಳಲು ಬಿಜೆಪಿ ದೇವರ ಮೊರೆ ಹೋಗಬೇಕಾಗಿದೆ.**

ಆದರೆ ಹೀಗೆ ದೇವರೇ ಆರಿಸಿದ ಬಿಜೆಪಿಯನ್ನು ಅನುಸರಿಸಲು ಜನ ಹಿಂಜರಿಯಬಾರದು ಎಂದು ಸೂಚಿಸುತ್ತಾ ಜನಮಾನಸದ ಮೇಲೆ ಪ್ರಭಾವ ಬೀರಬಹುದು ಎಂದು ಅವರು ಭಾವಿಸಿದ್ದರೆ ಅದು ಮೊದ್ದುತನದ ಪರಮಾವಧಿ ಎಂದು ಹೇಳಬೇಕಾಗುತ್ತದೆ. ನಮ್ಮದೇಶದ ಜನ ಬಹಳ ಧಾರ್ಮಿಕರಿರಬಹುದು, ಆದರೆ ಧಾರ್ಮಿಕತೆ ಮತ್ತು ಅದರ ರಾಜಕೀಯ ದುರುಪಯೋಗದ ನಡುವೆ ವ್ಯತ್ಯಾಸ ಕಾಣದಷ್ಟು ಮುಗ್ಧರಲ್ಲ.

ಇನ್ನೂ ಧರ್ಮದ ರಾಜಕೀಯ ದುರುಪಯೋಗ ಬಿಜೆಪಿಯ ಆಯುಧ ತಾನೇ. ಆದರೂ ಅಡ್ವಾಣಿಯವರು ರಾಜಕೀಯ ಸ್ವೀಕೃತಿ ಪಡೆಯಲು ಇಂತಹ ಮಟ್ಟಕ್ಕೆ ಇಳಿಯುತ್ತಾರೆ ಎಂದು ಯಾರೂ ಯೋಚಿಸಿರಲಿಕ್ಕಿಲ್ಲ. ಬಿಜೆಪಿಯನ್ನು ಎಂತಹ ಹತಾಶೆ ಆವರಿಸಿದೆ ಎಂಬುದನ್ನು ಇದು ಎತ್ತಿ ತೋರಿಸಿದೆ.


ಈ ಹತಾಶೆ ಇನ್ನೂ ತೀವ್ರವಾಗುವ ಸಂಭವವೇ ಹೆಚ್ಚು. ಏಕೆಂದರೆ ಮುಂದಿನ ಫೆಬ್ರವರಿ ತಿಂಗಳಲ್ಲಿ ಬಿಹಾರ ಮತ್ತು ಝಾರ್ಖಂಡ್‌ದಲ್ಲಿ, ಆಮೇಲೆ ಪಶ್ಚಿಮ ಬಂಗಾಳ, ಕೇರಳ ಮತ್ತು ತಮಿಳುನಾಡಿನಲ್ಲಿ ನಡೆಯಲಿರುವ ವಿಧಾನಸಭಾ ಚುನಾವಣೆಗಳಲ್ಲಿ ಅದರ ಪರಿಸ್ಥಿತಿ ಸುಧಾರಿಸುವ ನಿರೀಕ್ಷೆಯಿಟ್ಟುಕೊಳ್ಳುವಂತಿಲ್ಲ. ವಾಸ್ತವವಾಗಿ ಝಾರ್ಖಂಡ್‌ನಲ್ಲಿ ಅದು ತನ್ನ ಸರ್ಕಾರವನ್ನು ಕಳಕೊಳ್ಳುವ ಸಂಭವವೇ ಹೆಚ್ಚು. ಏಕೆಂದರೆ ಅಲ್ಲಿಯ ಬಿಜೆಪಿ ಸರ್ಕಾರ ಭ್ರಷ್ಟಾಚಾರ, ದುರಾಡಳಿತ ಹಾಗೂ ಸ್ಥಳೀಯ ಸಂಸ್ಥೆಗಳನ್ನು ಕುರಿತಂತೆ ಪ್ರಜಾಪ್ರಭುತ್ವ - ವಿರೋಧಿ ವರ್ತನೆಗಳಲ್ಲಿ ಹೊಸ ದಾಖಲೆಯನ್ನೇ ನಿರ್ಮಿಸಿದೆ.

ಆದ್ದರಿಂದಲೇ ಅದು ಝಾರ್ಖಂಡ್ ಜನತೆಯನ್ನು ಹೆದರಿಸುವ ಪ್ರಯತ್ನ ನಡೆಸಿದೆ. ಬಿಜೆಪಿಗೆ ಮತ್ತೆ ಅಧಿಕಾರ ನೀಡದಿದ್ದರೆ 'ಭಯೋತ್ಪಾದನೆ', 'ಸಾಮಾಜಿಕ ಕಲಹ', 'ರಾಜಕೀಯ ಅಪರಾಧೀಕರಣ' ಮತ್ತು 'ಅಸೀಮಿತ ಭ್ರಷ್ಟಾಚಾರ'ಕ್ಕೆ ಆಹ್ವಾನ ನೀಡಿದಂತೆಯೇ ಎಂಬುದು ತಮ್ಮ ಪತ್ರದ ಚುನಾವಣಾ ಪ್ರಚಾರದ ಹೂರಣವಾಗುತ್ತದೆ ಎಂದು ಅಡ್ವಾಣಿಯವರು ಹೇಳಿದ್ದಾರೆ. ಇವೆಲ್ಲಾ ಕಳೆದ ಮೂರು ವರ್ಷಗಳಲ್ಲಿ ಬಿಜೆಪಿ ಸರ್ಕಾರದ 'ಸಾಧನೆ'ಗಳೇ!. ಬಿಜೆಪಿಯ ರಾಷ್ಟ್ರೀಯ ಕಾರ್ಯಕಾರಿಣಿಯ ಸಭೆಯನ್ನು ರಾಂಚಿಯಲ್ಲಿ ನಡೆಸಿರುವುದೇ ಝಾರ್ಖಂಡ್‌ನಲ್ಲಿ ಅಧಿಕಾರ ಕಳಕೊಂಡರೆ ಅದೆಂತಹ ಹೊಡೆತವಾಗಬಹುದು ಎಂಬ ಭಯದಿಂದ.

ಮತ್ತದೇ ಹಳೇ ದಾರಿ

ಅಂತೂ ಬಿಜೆಪಿಗೆ ನವೆಂಬರ್ ತಿಂಗಳ ಆರಂಭದಲ್ಲಿ ಹರಿದ್ವಾರದಲ್ಲಿ ಆರ್‌ಎಸ್‌ಎಸ್ ನ ರಾಷ್ಟ್ರೀಯ ಕಾರ್ಯಕಾರಿಣಿ ಸಭೆ ತಾಕೀತು ಮಾಡಿದ ದಾರಿಯನ್ನು ಬಿಟ್ಟು ಬೇರೆ ದಾರಿ ಹಿಡಿಯಲು ಅವಕಾಶವೇ ಇಲ್ಲ ಎಂಬುದನ್ನು ಬಿಜೆಪಿಯ ರಾಂಚಿ ಸಭೆ ದೃಢಪಡಿಸಿದೆ. ಈ ಬದಲಾವಣೆ, ಅದನ್ನು ನಿಜವಾಗಿಯೂ ಬದಲಾವಣೆ ಎನ್ನಬಹುದಾದರೆ, ಬಂದಿರುವುದು ಬಿಜೆಪಿಯನ್ನು ಮಾತ್ರವಲ್ಲ, ಇಡೀ ಸಂಘ ಪರಿವಾರವನ್ನು ಅಪಹಾಸ್ಯಕ್ಕೀಡು ಮಾಡಿದ ಸಂಘ ಪರಿವಾರದೊಳಗಿನ ಗಂಭೀರ ತಿಕ್ಕಾಟಗಳಿಂದಾಗಿ. ಅಡ್ವಾಣಿಯವರು ಹರಿದ್ವಾರ ಸಭೆಯಲ್ಲಿರುವುದನ್ನು ಪ್ರತಿಭಟಿಸಿ ವಿಹೆಚ್‌ಪಿಯ ಬಹಿಷ್ಕಾರ, ಅವರು ಹೋದ ಮೇಲೆ ಮರುದಿನ ಸಭೆಗೆ ಹಾಜರಾದದ್ದು ಹೇಗೆ ಆರ್‌ಎಸ್‌ಎಸ್ ಈ ಪರಿವಾರದ ಯಜಮಾನ, ಹೇಗೆ ಬಿಜೆಪಿ ಹೆಚ್ಚು ಕರ್ಕಶವಾದ ಕೋಮುವಾದಿ ನಿಲುವು ತಳೆಯುವಂತೆ ಕೈ ತಿರುಚಿದೆ ಎಂಬುದನ್ನು ಜಗತ್ತಿಗೇ ತೋರಿಸಿಕೊಟ್ಟಿದೆ.

ರಾಂಚಿಯಲ್ಲಿ ಅಡ್ವಾಣಿಯವರೂ ಈ ಬಗ್ಗೆ ವ್ಯಥೆತೋಡಿಕೊಂಡರು. 'ಅಸಹನೆಯ ಕೋಪೋದ್ರಿಕ್ತ ದನಿಗಳು ನಾವು ಸೋದರರೆಂದು ಪರಿಗಣಿಸಿರುವ ಸಂಘಟನೆಗಳಿಂದ ವ್ಯಕ್ತವಾಗಿದೆ. ಆ ವೈಮನಸ್ಯಗಳು



ಸೈದ್ಧಾಂತಿಕ ಅನೈಕ್ಯತೆಯ ಭಾವನೆಯನ್ನು ಪೋಷಿಸಿವೆ ಎಂದು ತಮಗೆ ನೋವಾಗಿದೆ' ಎಂದು ಅವರು ಹೇಳಿದರು. ಆದರೂ ರಾಂಚಿಯಲ್ಲಿ ಅಡ್ವಾಣಿ ಮತ್ತು ಬಿಜೆಪಿ ಮಾಡಿದ್ದು ಆರ್‌ಎಸ್‌ಎಸ್ ಬಯಸ್ಸಿದ್ದನ್ನೇ.

ಆದರೆ ಮಹತ್ವದ ಸಂಗತಿಯೆಂದರೆ ರಾಂಚಿ ಸಭೆಯಲ್ಲಿ ಬಿಜೆಪಿಗೆ ಇತ್ತೀಚಿನ ಚುನಾವಣೆಗಳಲ್ಲಿ ತನ್ನ ಸೋಲಿಗೆ ಕಾರಣಗಳೇನು ಎಂಬ ಬಗ್ಗೆ ಗಂಭೀರ ಆತ್ಮಪರಿಶೀಲನೆ ನಡೆಸುವ ಅಗತ್ಯವಿದೆ ಎಂದು ಅನಿಸಲಿಲ್ಲ ಎಂಬುದು - ಹಲವಾರು ಟಿಪ್ಪಣಿಗಾರರು ಇದನ್ನು ಸ್ಪಷ್ಟವಾಗಿ ಗಮನಿಸಿದ್ದಾರೆ. ಬಿಜೆಪಿ ಚುನಾವಣೆಗಳಲ್ಲಿ ಸೋತದ್ದು ಹಿಂದುತ್ವ ಕಡಿಮೆಯಾಗಿ ಅಲ್ಲ, ಅದು ಹೆಚ್ಚಿದುದರಿಂದಲೇ ಎಂದು ಸುಮಾರಾಗಿ ಎಲ್ಲಾ ಮಾಧ್ಯಮಗಳು ಮಾಡಿರುವ ಟಿಪ್ಪಣಿ. ಆದರೆ ಬಿಜೆಪಿ ಮತ್ತು ಇಡೀ ಸಂಘ ಪರಿವಾರ ಈ ವಾಸ್ತವತೆಯನ್ನು ಸ್ವೀಕರಿಸಲು ನಿರಾಕರಿಸುತ್ತಿವೆ. ಎಷ್ಟೆಂದರೆ ಎನ್‌ಡಿಎ ಒತ್ತಡಗಳಿವೆಯಲ್ಲಾ ಎಂಬ ಬಿಜೆಪಿ ವಾದವನ್ನು 'ತಿಳಿಗೇಡಿತನದ್ದು' ಎಂದು ಆರ್‌ಎಸ್‌ಎಸ್ ತಿರಸ್ಕರಿಸಿದೆ. ಒಂದು ಅತ್ಯಂತ ಕರ್ಕಶ ಕೋಮುವಾದಿ ನಿಲುವು ತಳೆಯದಿದ್ದರೆ, ಜನಗಳನ್ನು ಕೋಮು ಆಧಾರದಲ್ಲಿ ಒಡೆಯದಿದ್ದರೆ ಬಿಜೆಪಿಗೆ ಉಳಿಗಾಲವಿಲ್ಲ ಎಂಬುದೇ ಇದರ ಹಿಂದಿರುವ ವಿಚಾರ. ಅದು ಕೋಮು ಧ್ರುವೀಕರಣದ ಪರಿಸ್ಥಿತಿಯನ್ನು ಮತ್ತು ಹಿಂದೂ ಜನಸಮೂಹಗಳಲ್ಲಿ ಕೃತಕ ಬೆದರಿಕೆಗಳ ಆಧಾರದಲ್ಲಿ ಒಂದು ಭಯದ ಮನೋಭಾವವನ್ನು ನಿರ್ಮಿಸಿದರೆ ಮಾತ್ರವೇ ಮತಗಳನ್ನು ಗೆಲ್ಲುವ ನಿರೀಕ್ಷೆಯನ್ನು ಇಟ್ಟುಕೊಳ್ಳಲು ಸಾಧ್ಯ. ಒಟ್ಟಿನಲ್ಲಿ ಬಿಜೆಪಿ 1980 ರ ಹಾಗೂ 1990 ರ ದಶಕದಲ್ಲಿ ಅದಕ್ಕೆ ಸ್ವಲ್ಪ ಪ್ರತಿಫಲ ನೀಡಿದ ಕೋಮುವಾದದ ಹಳೆಯ ಲೈನಿಗೇ ಹಿಂದಿರುಗಿದೆ.

ಚರ್ಚಾಸ್ಪದ ಪ್ರಶ್ನೆ

ಆದರೆ ಚರ್ಚಾಸ್ಪದ ಪ್ರಶ್ನೆಯೆಂದರೆ ಅದೇ ಜೂಜಿನಾಟ ಈಗ ಫಲ ನೀಡಬಹುದೇ? ಈ ಬಗ್ಗೆಯೂ ಬಿಜೆಪಿಯನ್ನು ಗಮನಿಸುತ್ತಿರುವ ಹಲವರಿಗೆ ಗಂಭೀರ ಸಂದೇಹಗಳಿವೆ. ಪ್ರಖ್ಯಾತ ರಾಜಕೀಯ ಟಿಪ್ಪಣಿಕಾರರಾದ ಎ.ಜಿ.ನೂರಾಣಿ ಹೇಳುವಂತೆ "ಹಿಂದೂಗಳು ಮಾಡಿದ್ದು ಅದನ್ನೇ. ಅವರು ಸಂಕುಚಿತ ರಾಜಕೀಯವನ್ನು ತಿರಸ್ಕರಿಸಿದರು. 1989-92 ರಲ್ಲಿ ಅಡ್ವಾಣಿ ಮತ್ತು ಕಂಪನಿಯ ಮಾತುಗಳಿಂದ ದಾರಿತಪ್ಪಿ ಬಿಜೆಪಿಗೆ ಮತ ನೀಡಿದರು. ನಂತರ ಅದಕ್ಕಾಗಿ ಖೇದ ಪಟ್ಟರು. ಹಿಂದುತ್ವದ ಗುರಿಯನ್ನು ಮತ್ತೆ ಎತ್ತಿದರೆ ಅದು ಇನ್ನುಮುಂದೆ ಫಲ ನೀಡದು. ನೊರೆಯೇಳುವುದು ಒಮ್ಮೆ ಮಾತ್ರ".

ಈ ಗುರಿಯನ್ನು ಪುನರುಜ್ಜೀವನಗೊಳಿಸಿದರೆ ಅದರ ಗತಿಯೇನಾಗಬಹುದು ಎಂಬುದು ಕಳೆದ ಕೆಲವು ವರ್ಷಗಳಲ್ಲಿ ಅದು ಗಳಿಸಿದ ಚುನಾವಣಾ ಫಲ ಸಾಕಷ್ಟು ಸಂಕೇತ ನೀಡುತ್ತದೆ. 1998 ರಲ್ಲಿಯೂ ಅದು ಅಧಿಕಾರಕ್ಕೆ ಬಂದದ್ದು ತನ್ನ ಸ್ವಂತ ಬಲದಿಂದ ಅಥವಾ ಯಾವುದೇ ಸಕಾರಾತ್ಮಕ ಮತಗಳಿಂದ ಅಲ್ಲ. ರಾವ್ ಸರ್ಕಾರದ ಮತ್ತು ನಂತರ ಸಂಯುಕ್ತ ರಂಗ ಸರ್ಕಾರದ ನೀತಿಗಳಿಂದ ಅತೃಪ್ತಿಗೊಂಡ ಜನತೆ ಒಂದು ಪರ್ಯಾಯದ ಹುಡುಕಾಟದಲ್ಲಿದ್ದರು. ಆಗ ಬಿಜೆಪಿ ತಾನು ನೀತಿಯುತ ಪಕ್ಷ, ಒಂದು ಭಿನ್ನವಾದ ಪಕ್ಷ ಎಂದು ವೇಷ ಹಾಕಿತು. ಅತ್ತ ಕಾಂಗ್ರೆಸ್ ಕೂಡಾ ಬದಲಾದ ರಾಜಕೀಯ ಪರಿಸ್ಥಿತಿಯನ್ನು ಅರಿಯದೆ ತಾನೇ ಏಕಾಂಗಿಯಾಗಿ ಅಧಿಕಾರಕ್ಕೆ ಬರಬಹುದು, ಎಂದು ಯಾವುದೇ ಮಿತ್ರಕೂಟ ರಚಿಸಿಕೊಳ್ಳಲು ನಿರಾಕರಿಸಿದ್ದು ಬಿಜೆಪಿಗೆ ನೆರವಾದ ಇನ್ನೊಂದು ಸಂಗತಿ. ಆಗಲೂ ಕೂಡಾ ಬಿಜೆಪಿ ಅಧಿಕಾರಕ್ಕೆ ಬರಲು ಸಾಧ್ಯವಾದದ್ದು ಹತ್ತಾರು ಪ್ರಾದೇಶಿಕ ಪಕ್ಷಗಳ ಬೆಂಬಲದಿಂದ, ಜತೆಗೆ ತೆಲುಗುದೇಶಂ ಪಕ್ಷದ ಹೊರಗಿನ ಬೆಂಬಲದಿಂದ ಮಾತ್ರ. ಹೀಗೆ ಬಿಜೆಪಿಯ ಕೋಮುವಾದಿ ತಂತ್ರ 1998 ರಲ್ಲಿ ಫಲಿಸಲಿಲ್ಲ ಎಂಬುದು ಸ್ಪಷ್ಟ. ಆಮೇಲೆ ಆರು ವರ್ಷಗಳಲ್ಲಿ ಇದು ಇನ್ನಷ್ಟು ಸ್ಪಷ್ಟವಾಯಿತು. ಏಕೆಂದರೆ ಈ ಆರು ವರ್ಷಗಳಲ್ಲಿ ನಡೆದ ವಿಧಾನಸಭಾ ಚುನಾವಣೆಗಳಲ್ಲಿ ಶೇ 80 ಸ್ಥಾನಗಳಲ್ಲಿ ಬಿಜೆಪಿ (ಮತ್ತು ಅದರ ಮಿತ್ರರು) ಸೋತರು. ಉತ್ತರ ಪ್ರದೇಶದಲ್ಲಿ ಫೆಬ್ರವರಿ 2002 ರಲ್ಲಿ ಅದು ಕೋಮುವಾದಿ ತಂತ್ರ ಬಳಸಲು ಪ್ರಯತ್ನಿಸಿತು. ವಿಹೆಚ್‌ಪಿ ಅಲಹಾಬಾದಿನಲ್ಲಿ ಕುಂಭಮೇಳದಲ್ಲಿ ಒಂದು ದೊಡ್ಡ ಜಾತ್ರೆಯನ್ನೇ ಮಾಡಿ ದೇವಸ್ಥಾನ ನಿರ್ಮಾಣಕ್ಕೆ ಒಂದು ನಿರ್ದಿಷ್ಟ ದಿನಾಂಕದೊಳಗೆ ಅನುಮತಿ ಮಾಡಿಕೊಡದಿದ್ದರೆ ಚಳುವಳಿ ಆರಂಭಿಸುವುದಾಗಿ ಬೆದರಿಕೆಯನ್ನು ಹಾಕಿತು. ಆದರೆ ಬಿಜೆಪಿಯ ಸೀಟುಗಳ ಸಂಖ್ಯೆ ಅರ್ಧಕ್ಕಿಳಿಯಿತು, ಅಕ್ಟೋಬರ್ 1996 ರಲ್ಲಿ 177 ಇದ್ದದ್ದು 88 ಕ್ಕಿಳಿಯಿತು. ಅದು ಮೂರನೇ ಸ್ಥಾನಕ್ಕೆ ತಳ್ಳಲ್ಪಟ್ಟಿತು.

ಹೀಗೆ ಈ ಹಿಂದೆ ಕೋಮುವಾದೀ ತಂತ್ರ ಬಿಜೆಪಿಗೆ ಅಷ್ಟಾಗಿ ಫಲ ನೀಡಿರದಿದ್ದರೆ, ಸದ್ಯ ಭವಿಷ್ಯದಲ್ಲೂ ಅದಕ್ಕೆ ಬಹಳ ಅವಕಾಶವೇನೂ ಇಲ್ಲ. ಇದು ಎರಡು ಕಾರಣಗಳಿಂದಾಗಿ ಅತ್ಯಂತ ಸಹಜ ಕೂಡಾ. ಮೊದಲನೆಯದಾಗಿ, ಆರು ವರ್ಷಗಳಲ್ಲಿ ಜನ ಅಧಿಕಾರದಲ್ಲಿ ಬಿಜೆಪಿಯನ್ನು ನೋಡಿದ್ದಾರೆ. ಅದು ಹೇಳುವುದಕ್ಕೂ ಮಾಡುವುದಕ್ಕೂ ಇರುವ ವೈರುಧ್ಯಗಳನ್ನು ಕಣ್ಣಾರೆ ಕಂಡಿದ್ದಾರೆ. ದೇಶವನ್ನು ಬಾಧಿಸುವ ಎಲ್ಲಾ ಜ್ವಲಂತ ಪ್ರಶ್ನೆಗಳಲ್ಲೂ ಇದು ನಿಜ - ಆರ್ಥಿಕ ಪ್ರಶ್ನೆಗಳಿಂದ ಹಿಡಿದು ಭ್ರಷ್ಟಾಚಾರದವರೆಗೆ, ರಾಜಕೀಯ ಅಪರಾಧೀಕರಣದಿಂದ ಹಿಡಿದು, ರಕ್ಷಣಾ ಮತ್ತು ವಿದೇಶ ನೀತಿಗಳವರೆಗೆ ಎಲ್ಲದರಲ್ಲೂ. ಎರಡನೆದಾಗಿ, ಈ ದೇಶದ ಜನತೆ ಕಟ್ಟಾ ಜಾತ್ಯತೀತರು, ಕೋಮು ಕಲಹ ತಮ್ಮ ಸಾಮಾಜಿಕ ಬದುಕಿಗೆ ಮಾರಕವಾಗುವುದು ಅವರಿಗೆ ಬೇಕಿಲ್ಲ. ಆದ್ದರಿಂದ ತಾತ್ಕಾಲಿಕವಾಗಿ ಕೆಲವೊಮ್ಮೆ ವಿಚಲಿತರಾದರೂ, ಒಟ್ಟಾರೆಯಾಗಿ ಕೋಮುವಾದಿ ಭಾವನೆಗಳಿಗೆ ಬಲಿಬೀಳಲಿಲ್ಲ. ನಮ್ಮ ಆಳುವ ಮುಂದಿನ ಕೆಲಸಗಳು ಅಧಿಕಾರಸ್ಥ-ವಿರೋಧಿ ಭಾವನೆ ಏನನ್ನುತ್ತಾರೋ ಅದನ್ನು ನಿರ್ಮಿಸಿಕೊಳ್ಳದಿದ್ದರೆ ಮುಂಬರುವ ದಿನಗಳಲ್ಲೂ ಬಿಜೆಪಿಯ ಕೋಮುವಾದಿ ತಂತ್ರಗಳು ಅವರಿಗೆ ಫಲ ನೀಡಲಿಕ್ಕಿಲ್ಲ.


…ಡ್ವಾಣಿ :

ಕಸರತ್ತುಗಳೆಲ್ಲಾ ವಿಫಲ

ಒಂದೊಂದಾಗಿ ಬಿಜೆಪಿಯ ಘೋಷಣೆಗಳೆಲ್ಲಾ ಏಕೆ ವಿಫಲವಾಗುತ್ತಿದೆ ಎಂಬದನ್ನು ಜನಸಮೂಹಗಳ ಈ ರೀತಿಯ ಯೋಜನೆಗಳಿಂದ ಅರಿಯಬಹುದು. ಹುಬ್ಬಳ್ಳಿಯಲ್ಲಿ ಈದ್ಗಾ ಮೈದಾನದ ಪ್ರಶ್ನೆಯ ಮೇಲೆ ಕೋಮುದಳ್ಳುರಿ ಹರಡಲು ಅದು ಪ್ರಯತ್ನಿಸಿತು. ಜನ ಅದಕ್ಕೆ ಕಿವಿಗೊಡಲಿಲ್ಲ. ಉಮಾಭಾರತಿ ಅವರ ಹೆಸರಿನಲ್ಲಿ 'ತಿರಂಗಾ ಯಾತ್ರಾ' ನಡೆಸಿದರು. ಅದರ ಶೋಚನೀಯ ವಿಫಲತೆಯ ಬಗ್ಗೆ ಮರುಗುವವರು ಯಾರೂ ಇಲ್ಲ. ಸಾವರ್ಕರ್ ವಿವಾದವನ್ನು ದುರುಪಯೋಗಪಡಿಸಿಕೊಳ್ಳಲು ಪ್ರಯತ್ನಿಸಿತು, ವಿಫಲವಾಯಿತು. ಅಫ್ಜಲ್ ಖಾನ್ ಸಮಾಧಿಯ ಪ್ರಶ್ನೆಯ ಮೇಲೆ ಕೀಳು ಭಾವನೆಗಳನ್ನು ಎಬ್ಬಿಸಲು ಯತ್ನಿಸಿ ಅಲ್ಲೂ ವಿಫಲಗೊಂಡಿತು. ಗುಜರಾತಿನಲ್ಲಂತೂ ಒಂದೊಂದಾಗಿ ನರೇಂದ್ರ ಮೋದಿಯವರ ಕೃತ್ಯಗಳು ಬಯಲಾಗುತ್ತಾ ಬಿಜೆಪಿಗೆ ಮುಜುಗರ ಉಂಟು ಮಾಡುತ್ತಿವೆ.

ಇಂತಹ ನಿರಾಶಾದಾಯಕ ಪರಿಸ್ಥಿತಿಯಲ್ಲಿ ಅಡ್ವಾಣಿ ಪಕ್ಷಕ್ಕೆ ಅಯೋಧ್ಯಾ ಪ್ರಶ್ನೆ ಎಷ್ಟು ಮಹತ್ವದ್ದು ಎಂದು ರಾಷ್ಟ್ರೀಯ ಕಾರ್ಯಕಾರಿಣಿಗೆ ತಿಳಿ ಹೇಳಲು ಪ್ರಯತ್ನಿಸಿದರು ಮತ್ತು 'ಹಿಂದೂ ಪರಂಪರೆ'ಯ ರಕ್ಷಣೆಗಾಗಿ ಹೋರಾಡುವ ಪಣ ತೊಟ್ಟರು. ಕಾಂಗ್ರೆಸ್, ಕಮ್ಯುನಿಸ್ಟರು ಮತ್ತು ಇತರ 'ಹಿಂದೂ-ವಿರೋಧಿ' ಶಕ್ತಿಗಳು 'ಹಿಂದೂ ಪರಂಪರೆಯನ್ನು ಅಳಿಸಿ ಹಾಕುತ್ತಿವೆ, ನಮ್ಮ ಸಂಸ್ಕೃತಿ ಮತ್ತು ನಾಗರಿಕತೆಯ ಹಿಂದೂ ಚಹರೆಯನ್ನು ಮಾಸಿಹೋಗುವಂತೆ ಮಾಡುತ್ತಿವೆ' ಮತ್ತು 'ಹಿಂದೂ


ವಾದಕ್ಕೆ ಧಕ್ಕೆ ತರುತ್ತಿವೆ' ಎಂದೆಲ್ಲಾ ಪಾದಿಸಿದರು. ರಾಂಚಿಯಲ್ಲಿ ಅವರು ತಮ್ಮ ಪಕ್ಷ ತ್ರ ನಿಜವಾಗಿಯೂ ಜಾತ್ಯತೀತ, ಉಳಿದೆಲ್ಲಾ ಸಿ ಜಾತ್ಯತೀತ ಎಂಬ ತಮ್ಮ ಬೊಗಳೆವಾದವನ್ನು ನರುಚ್ಚರಿಸಿದರು. ಭಾರತ ತ್ಯತೀತವಾಗಿರುವುದು ಪ್ರಮುಖವಾಗಿ ಹಿಂದೂ ರಂಪರೆಯಿಂದಾಗಿಯೇ' ಎಂದರು. 'ನಮ್ಮ ೀಶದಲ್ಲಿ ಬಟ್ಟಾರೆಯಾಗಿ ಹುಸಿ ಜಾತ್ಯತೀತೆಯ ತಾವರಣ, ಹಿಂದೂ ನಂಬಿಕೆಗಳನ್ನು ೀಗಳೆಯುವುದು ಜಾತ್ಯತೀತಯ ಏಕೈಕ ಳತೆಗೋಲಾಗಿಬಿಟ್ಟಿದೆ' ಎಂದು ಅವರು ೀಳಿದರು.

ಈ ಬುಡವಿಲ್ಲದ ಆಪಾದನೆಗಳಿಗೆ ಇಲ್ಲಿ ಉತ್ತರ ೀಡಲು ಹೋಗುವುದಿಲ್ಲ. ಹಿಂದೆ ಬಹಳ ಸಲ ದಕ್ಕೆ ಉತ್ತರ ನೀಡಿದ್ದೇವೆ. ಮುಂದೆಯೂ

ಸ್ಪಂದನ ಅಷ್ಟಕಷ್ಟೇ. ಶಂಕರಾಚಾರ್ಯರ ವಕೀಲರಾದ ರಾಮ್ ಜೇಠ್ಮಲಾನಿ ಕೂಡಾ ಕಂಚೀ ಆಚಾರ್ಯರ ವೇದನೆಗಳನ್ನು ರಾಜಕೀಯ ಬಂಡವಾಳ ಮಾಡಿಕೊಳ್ಳುತ್ತಿದೆ ಎಂದು ಆ ಪಕ್ಷವನ್ನು ಹಳಿದರು' ಈ ಮೊಕದ್ದಮೆಯಲ್ಲಿ ಹೆಚ್ಚೆಚ್ಚು ವಿಷಯಗಳು ಬೆಳಕಿಗೆ ಬರಲಾರಂಭಿಸಿದಂತೆ ಬಿಜೆಪಿಯು ಈ ಹಡಗೂ ಮುಳುಗುವ ನಿರೀಕ್ಷೆಯಿಟ್ಟುಕೊಳ್ಳಬಹುದು.

ಹೀಗೆ ಕ್ಷೋಭೆಗೊಂಡ ಅಡ್ವಾಣಿ ಎಐಎಡಿಎಂಕೆ ಮತ್ತು ಡಿಎಂಕೆ 'ಸೇಡು ತೀರಿಸಿಕೊಳ್ಳುವ, ಸಂಘರ್ಷಕ, ಮೇಲಾಟದ ಮತ್ತು ಸಾಮಾಜಿಕ ವಿಭಜಕತೆಯ ರಾಜಕೀಯ' ಅನುಸರಿಸುತ್ತಿವೆ ಎಂದು ದೂಷಿಸಿದ್ದಾರೆ. ಈ ಎರಡೂ ಪಕ್ಷಗಳೊಡನೆ ಇದೇ ಬಿಜೆಪಿ ಮೈತ್ರಿ ಹೊಂದಿತ್ತು ಎಂಬುದನ್ನು ನೆನಪಿಸಿಕೊಳ್ಳಬೇಕು.

ಬಿಡಲಿಲ್ಲ ಎಂದು ಆಪಾದಿಸಿದರು. ಇದು ಹಾಸ್ಯಾಸ್ಪದ. ರಾಜ್ಯಸಭೆಯಲ್ಲಿ ಬಹುಮತವಿಲ್ಲದಿದ್ದರೂ ಸಂಸತ್ತಿನ ಎರಡೂ ಸದನಗಳ ಜಂಟಿ ಅಧಿವೇಶನ ನಡೆಸಿ ಪೋಟಾ ಕಾನೂನು ಪಾಸು ಮಾಡಿಸಿಕೊಂಡ ಸರ್ಕಾರ ಅವರದ್ದು. ಹಾಗಿರುವಾಗ ಕಾಂಗ್ರೆಸ್ ಮತ್ತು ಕಮ್ಯುನಿಸ್ಟರು ಜನಪರ ನೀತಿಗಳನ್ನು, ಕ್ರಮಗಳನ್ನು ಕೈಗೊಳ್ಳಲು ಬಿಡಲಿಲ್ಲ ಎಂದರೆ ಯಾರು ನಂಬುತ್ತಾರೆ?



ಕೃಪೆ: 'ದಿನಮಣಿ' ತಮಿಳು ದೈನಿಕ

ಹೀಗೆ ಬಿಜೆಪಿ ಮಟ್ಟಿಗೆ ಪರಿಸ್ಥಿತಿ ಗಂಭೀರವಾಗಿದೆ, ಅಷ್ಟೇ ಅಲ್ಲ, ವಿನಾಶಕಾರಿಯಾಗಿದೆ. ಜನಗಳಿಂದ ದೂರ ತಳ್ಳಲ್ಪಟ್ಟ ಈ ಪಕ್ಷ ಮೊದಲನೆಯದಾಗಿ ಜನತೆ ತಮ್ಮನ್ನೇಕೆ ತಿರಸ್ಕರಿಸಿದರು ಎಂದು ಆತ್ಮಾವಲೋಕನ ಮಾಡಲು ನಿರಾಕರಿಸುತ್ತಿದೆ. ಇದನ್ನು ಕಂಡೇ ಎಂ.ಕೆ.ಧರ್‌ರಂತಹ ಹಿರಿಯ ಪತ್ರಕರ್ತರು "ಬಿಜೆಪಿ ಒಂದು ಶುದ್ಧ ಕೋಮುವಾದಿ ಅಜೆಂಡಾವನ್ನು ಅನುಸರಿಸಿದರೆ ಭಾರತದ ರಾಜಕಾರಣದಲ್ಲಿ ಅಂಚಿಗೆ ತಳ್ಳಲ್ಪಡುತ್ತದೆ ಎಂದು ಬೇರೆ ಹೇಳಬೇಕಾಗಿಲ್ಲ. ಅದು ಕಳೆದ ಲೋಕಸಭಾ ಚುನಾವಣೆಗಳ ಪಾಠ - ಆ ಪಕ್ಷದ ಮುಖಂಡತ್ವ ಇದನ್ನು ಕಲಿಯಲು ನಿರಾಕರಿಸುತ್ತಿದೆ. ಎಲ್ಲಾ ಧರ್ಮಗಳಲ್ಲೂ ಜೆಹಾದಿ



ಸಂಸ್ಕೃತಿ ಈಗ ಫ್ಯಾಶನ್ ಆಗಿ ಉಳಿದಿಲ್ಲ. ಅದಕ್ಕೆ ಒಂದು ಜಾತ್ಯಾತೀತ ಪ್ರಜಾಪ್ರಭುತ್ವದಲ್ಲಿ ಶಾಶ್ವತ ಸ್ಥಾನವಿಲ್ಲ" ಎಂದಿದ್ದಾರೆ. ಬಿಜೆಪಿಯ ಪ್ರಸಕ್ತ ಇಕ್ಕಟ್ಟಿನ ಸಾರಾಂಶವನ್ನು ಇದು ಚೆನ್ನಾಗಿ ನೀಡಿದೆ.

ಅಂದರೆ ಮತ್ತೆ ಬಡಿದೆಬ್ಬಿಸುವ ಹಿಂದುತ್ವ ವೇದಿಕೆ ನಮ್ಮ ರಾಷ್ಟ್ರೀಯ ಐಕ್ಯತೆಗೆ, ಕೋಮು ಸಾಮರಸ್ಯಕ್ಕೆ, ನಮ್ಮ ನಾಗರಿಕ ಅಸ್ತಿತ್ವಕ್ಕೆ ಮತ್ತು ಸಮ್ಮಿಶ್ರ ಸಂಸ್ಕೃತಿಗೆ ಬೆದರಿಕೆ ಒಡ್ಡಿಲ್ಲವೆಂದೇನೂ ಅರ್ಥವಲ್ಲ. ಆದರೆ ಎಡ, ಜಾತ್ಯತೀತ ಮತ್ತು ಪ್ರಜಾಪ್ರಭುತ್ವ ಶಕ್ತಿಗಳು ಒಂದಾಗಿ ಜನಗಳನ್ನು ಜಾತ್ಯಾತೀತತೆ ಮತ್ತು ರಾಷ್ಟ್ರೀಯ ಐಕ್ಯತೆಯ ಪ್ರಶ್ನೆಯ ಮೇಲೆ ಅಣಿನೆರೆಸಿ ಈ ಹೊಸ ಸವಾಲನ್ನು ಪರಿಣಾಮಕಾರಿಯಾಗಿ ಎದುರಿಸಲು ಪರಿಸ್ಥಿತಿ ಖಂಡಿತಾ ಅನುಕೂಲಕರವಾಗಿದೆ.

...ಗೆ ಈಗ 'ದೇವರೇ' ಗತಿ!

ಹರ್ಕಿಶನ್ ಸಿಂಗ್ ಸುರ್ಜಿತ್

ಖಂಡಿತಾ ಇಂತಹ ಅವಕಾಶ ಬರಲಿದೆ. ಅಡ್ವಾಣಿ ...ಪನಿಯ ಕುತರ್ಕದ ಒಂದು ನೋಟ ನೀಡಲು ...ಲ್ಲಿ ಕೆಲವು ಪ್ರಶ್ನೆಗಳನ್ನಷ್ಟೇ ಹಾಕುತ್ತೇವೆ - ಭಜರಂಗ ...ಳದ ಗೂಂಡಾಗುಂಪೊಂದು ಒಬ್ಬ ಪಾದ್ರಿ ಮತ್ತು ...ತನ ಮಕ್ಕಳನ್ನು ಜೀವಂತ ಸುಟ್ಟಾಗ ಹಿಂದೂ ...ಂಬಿಕೆಗಳಿಗೆ ಮಸಿ ಬಳಿದವರು ಯಾರು? ...ಜರಾತಿನಲ್ಲಿ ಬಿಜೆಪಿ ಸರ್ಕಾರದ ಬಹಿರಂಗ ...ಂಬಲದಿಂದ ಕೋಮುವಾದಿ ಗೂಂಡಾಗಳು ...ರಡು ಸಾವಿರಕ್ಕೂ ಹೆಚ್ಚು ಅಮಾಯಕ ...ಸ್ಲಿಮರನ್ನು ಕೊಂದಾಗ ಹಿಂದೂ ಪರಂಪರೆಯನ್ನು ...ಸಿಹಾಕಿದವರು ಯಾರು? ಆದರೂ ಬಿಜೆಪಿ ಅಧ್ಯಕ್ಷರು ಹಿಂದೂ ನಂಬಿಕೆಗಳಿಗೆ ಮಸಿ ಬಳಿಯುವ ಪ್ರಯತ್ನ ನಡೆಸುವವರು ಬಿಜೆಪಿ-ವಿರೋಧಿ ಶಕ್ತಿಗಳು ಎಂದು ಹೇಳುವ ಭಂಡತನ ತೋರುತ್ತಾರೆ.


...ೀ ಏನು?

ಅದೇನೇ ಇರಲಿ, ಆರ್‌ಎಸ್‌ಎಸ್ - ಬಿಜೆಪಿ ರಾಜಕೀಯದ ಬಗ್ಗೆ ಜನಗಳಲ್ಲಿ ಜುಗುಪ್ಸೆ ಉಂಟಾಗಿರುವ ಇಂತಹ ಒಂದು ವಾತಾವರಣದಲ್ಲಿ ಒಂದು ಕೊಲೆ ಮೊಕದ್ದಮೆಯಲ್ಲಿ ಕಂಚಿ ಕಾಮಕೋಟಿ ಪೀಠದ ಸ್ವಾಮಿ ಜಯೇಂದ್ರ ಸರಸ್ವತಿಯವರ ಬಂಧನ ಬಿಜೆಪಿಗೆ ಖುಷಿ ಪಡುವ ಅವಕಾಶ ತಂದಿದೆ. ...ಜವಾಗಿಯೇ ಮುಳುಗುವವನಿಗೆ ಸಿಕ್ಕ ...ಲ್ಲುಕಡ್ಡಿಯಂತೆ ಅದನ್ನು ಗಟ್ಟಿಯಾಗಿ ...ಕೊಂಡಿದೆ. ಆದರೆ ಜನಗಳ ಮನೋಭಾವದ ...ವು, ಆಳ ಹರಿವುಗಳನ್ನು ಅರಿಯಲಾರದೆ ...ವಾಣಿ ಈ ಬಂಧನದ ಮೂಲಕ ತಾವು "ರಾಮ ...ಭೂಮಿ ಪ್ರಶ್ನೆಯಲ್ಲಾದಂತೆ ನಮ್ಮ ಸೈದ್ಧಾಂತಿಕ ...ತ್ತು ರಾಜಕೀಯ ಎದುರಾಳಿಗಳಿಗೆ ಬಲವಾದ ...ೇಟು ನೀಡುತ್ತೇವೆ"ಎಂದು ಆನಂದದಿಂದ ...ಚಿಯಲ್ಲಿ ಜಂಭ ಕೊಚ್ಚಿಕೊಂಡಿದ್ದಾರೆ. ...ಜೆಪಿ ಮತ್ತು ಸಂಘ ಪರಿವಾರದ ಇತರ ...ಘಟನೆಗಳು ನವೆಂಬರ್ 22 ರಂದು 'ಭಾರತ ...ದ್' ಕರೆ ನೀಡಿದವು; ಆದರೆ ಆ ದಿನ ...ಜೀವನ ಎಂದಿನಂತೆ ಇದ್ದುದನ್ನು ಕಂಡು ...ಬುಗೊಂಡವು. ನವದೆಹಲಿಯಲ್ಲಿ ವಾಜಪೇಯಿ ...ಬಂಧನದ ವಿರುದ್ಧ ಧರಣಿ ಕೂತಲ್ಲಿ ಅವರ ...ತೆಗೆ 200 ಕ್ಕಿಂತ ಹೆಚ್ಚು ಆತ್ಮಗಳೇನೂ ಇರಲಿಲ್ಲ. ...ದು ಸ್ಥಳೀಯ ಮಟ್ಟದ ಸಂಘಟನೆಯೂ ...ಕ್ಕಿಂತ ಹೆಚ್ಚು ಸಂಖ್ಯೆಯನ್ನು ಕಲೆಹಾಕಬಲ್ಲದು. ...ಂದೂ ಪತ್ರಿಕೆಯ ಸಂಪಾದಕೀಯ ...ಹೇಳುವಂತೆ '2004 ರ ಶಂಕರಾಚಾರ್ಯರ ...ವಿರುದ್ಧದ ಪ್ರಚಾರ ರಾಮದೇವಸ್ಥಾನ ...ವಳಿಗೆ ಸಮಾನವಾದುದೇ? ಯಾರೂ ...ಂದು ಗಂಭೀರವಾಗಿ ನಂಬುತ್ತಿಲ್ಲ, ಏಕೆಂದರೆ ...ಹಿಂದು ಕಾರ್ಯಾಚರಣೆಗಳಿಗೆ ಮಠದ ...ಂದಾಗಲೀ, ಸಾರ್ವಜನಿಕರಿಂದಾಗಲೀ ಸಿಕ್ಕ

ಹತಾಶೆಯ ಪರಿಕಾಷ್ಠೆ

ಬಿಜೆಪಿ ಅಧ್ಯಕ್ಷರ ಹತಾಶೆ ಎಂತಹ ಮಟ್ಟ ತಲುಪಿದೆಯೆಂದರೆ ಅವರ ರಾಷ್ಟ್ರೀಯ ಕಾರ್ಯಕಾರಿಣಿಯ ಮೊದಲ ದಿನದ ಅಧಿವೇಶನದ ನಂತರ ಅವರು ಕಾಂಗ್ರೆಸ್ ಮತ್ತು ಕಮ್ಯುನಿಸ್ಟರು ಎನ್‌ಡಿಎ ಹಲವು ಕ್ರಮಗಳನ್ನು ಕೈಗೊಳ್ಳಲು

ಇದ್ದದ್ದು ಇದ್ಹಾಂಗೆ.....

'ಅಡ್ವಾಣಿ ನನ್ನನ್ನು ದೈಹಿಕವಾಗಿ ಶೋಷಿಸಿದ'

ಮಾಜಿ ಸೊಸೆ

ಎಲ್.ಕೆ.ಅಡ್ವಾಣಿ ಎಂಬ ಬಿಜೆಪಿ ನಾಯಕ ಮತ್ತೆ ಹಿಂದೂತ್ವವಾದದ ರಥವನ್ನೇರುತ್ತಿರುವಾಗಲೇ ಆತನ ಮಾಜಿ ಸೊಸೆ ಬಾಂಬ್ ಒಂದನ್ನು ಸ್ಫೋಟಿಸಿದ್ದಾಳೆ.

ಅಡ್ವಾಣಿಯವರ ಏಕೈಕ ಸುಪುತ್ರ ಜಯಂತ್‌ನಿಂದ ಈಗ ವಿಚ್ಛೇದನ ಪಡೆದು ಲಂಡನ್‌ನಲ್ಲಿ ವಕೀಲೆಯಾಗಿ ಕೆಲಸ ಮಾಡುತ್ತಿರುವ ಗೌರಿ ಅಡ್ವಾಣಿ, ನಿನ್ನೆ ದೆಹಲಿಯಲ್ಲಿ ಪತ್ರಿಕಾ ಗೋಷ್ಠಿ ಕರೆದು "ಅಡ್ವಾಣಿ ನೈತಿಕವಾಗಿ ಮತ್ತು ಆರ್ಥಿಕವಾಗಿ ಭ್ರಷ್ಟವಾಗಿರುವ ಮನುಷ್ಯ. ಈತನನ್ನು ಪಕ್ಷದಿಂದಲೇ ಒದ್ದೋಡಿಸುವ ಬದಲಾಗಿ ಆತನನ್ನು ಅಧ್ಯಕ್ಷ ಸ್ಥಾನಕ್ಕೇರಿಸಿರುವುದು ದುರದೃಷ್ಟ. ಆತ ನನ್ನೊಂದಿಗೆ ನಡೆದುಕೊಂಡಿರುವ ಪರಿ ಹೊರಬಿದ್ದರೆ, ಪ್ರತಿ ಭಾರತೀಯ ತಲೆ ತಗ್ಗಿಸಬೇಕಾಗುತ್ತದೆ. ಮಾವ ಮತ್ತು ಸೊಸೆ ನಡುವಿನ ಪವಿತ್ರ ಸಂಬಂಧ ಅರಿಯದ ಅಡ್ವಾಣಿ ನನ್ನನ್ನು ಮಾನಸಿಕವಾಗಿಯೂ, ದೈಹಿಕವಾಗಿಯೂ ಶೋಷಿಸಿದ್ದಾರೆ" ಎಂದು ಆರೋಪಿಸಿದ್ದಾರೆ.

ಈ ಆರೋಪಗಳನ್ನು ಪತ್ರದ ಮೂಲಕ ವಾಜಪೇಯಿಗೂ ಮತ್ತು ಆರ್.ಎಸ್.ಎಸ್‌ನ ಸುದರ್ಶನ್‌ಗೂ ರವಾನಿಸಿರುವ ಗೌರ ಅಡ್ವಾಣಿ, ಈಗಲೂ ತನ್ನ ಮಾಜಿ ಮಾವನಿಂದ ಜೀವ ಬೆದರಿಕೆ ಇದೆ ಎಂದು ಹೇಳಿದ್ದಾಳೆ. "ತನ್ನ ಸ್ವಂತ ಮನೆಯಲ್ಲೇ, ತನ್ನ ಸ್ವಂತ ಸೊಸೆಯೊಂದಿಗೆ ಈ ದೇಶದ ಮಾಜಿ ಉಪ ಪ್ರಧಾನಿ, ಅನೈತಿಕವಾಗಿ ಅಸಹ್ಯಕರವಾಗಿ ಮತ್ತು ಅನಾಗರಿಕವಾಗಿ ವರ್ತಿಸಿದ್ದಾನೆ. ಹಾಗೆ ಮಾಡುವ ಮೂಲಕ ನನ್ನ ಆತ್ಮಗೌರವವನ್ನು, ನೈತಿಕ ಮೌಲ್ಯಗಳನ್ನು ಹಾಗೂ ಮಾನವ ಹಕ್ಕುಗಳನ್ನೂ ನಾಶ ಮಾಡಿದ್ದಾರೆ. ಇದೆಲ್ಲದರಿಂದ ಇಂದಿಗೂ ನಾನು ಮಾನಸಿಕವಾಗಿ ಜರ್ಜರಿತಳಾಗಿದ್ದೇನೆ" ಎಂದೂ ಗೌರಿ ಅಡ್ವಾಣಿ ಆಪಾದಿಸಿದ್ದಾರೆ. ಅಡ್ವಾಣಿ ವಿರುದ್ಧ ಹೀಗೆ ಗೌರಿ ಆರೋಪಗಳನ್ನು ಮಾಡುತ್ತಿರುವುದು ಇದೇ ಮೊದಲಲ್ಲ. ಬಾಬ್ರಿ ಮಸೀದಿಯ ನಾಶ ಕುರಿತಂತೆಯೂ ಆಕೆ ಗಂಭೀರವಾದ ಆರೋಪಗಳನ್ನು ಮಾಡಿದ್ದಳು.

ಈಗ ಲೈಂಗಿಕ ಶೋಷಣೆ ಬಗ್ಗೆ ಆರೋಪಗಳನ್ನು ಮಾಡಿರುವ ಗೌರಿ ಅಡ್ವಾಣಿ ಯಾರೋ ತಲೆ ಕೆಟ್ಟಿರುವ ಹೆಂಗಸಲ್ಲ. ಹಿರಿಯ ಪತ್ರಕರ್ತ ಪ್ರೇಮ್ ಸಬರ್‌ವಾಲ್‌ರವರ ಮಗಳಾದ ಈಕೆ ಸದ್ಯಕ್ಕೆ ಲಂಡನ್‌ನಲ್ಲಿ ವಕೀಲೆಯಾಗಿದ್ದಾಳೆ. 1988 ರಲ್ಲಿ ಲಾ ಮುಗಿಸಿದ್ದ ಈಕೆ ಬಿಜೆಪಿ ಪಕ್ಷದ ಸಿದ್ಧಾಂತಕ್ಕೆ ಮಾರು ಹೋಗಿ, ಅಡ್ವಾಣಿಯವರ ರಾಜಕೀಯ ಸಹಾಯಕಿಯಾಗಿ ಸೇರಿಕೊಂಡಳು. ಅಲ್ಲಿ ಅಡ್ವಾಣಿ ಮಗ ಜಯಂತ್‌ನ ಪರಿಚಯವಾಗಿ ಅವರಿಬ್ಬರೂ 1991 ರಲ್ಲಿ ಮದುವೆಯಾದರು. ಅದೆಂತಹ ಅದ್ದೂರಿ ಮದುವೆಯಾಗಿತ್ತೆಂದರೆ, ದೆಹಲಿಯ ಐತಿಹಾಸಿಕ ತಾಲ್‌ಕತೋರ ಮೈದಾನದಲ್ಲಿ ನಡೆದ ರಿಸೆಪ್ಷನ್‌ಗೆ ಸಾವಿರಾರು ಹಿರಿಯ ನಾಯಕರೂ, ಕಿರಿಯ ಪುಢಾರಿಗಳೂ ಬಂದಿದ್ದರು.



ಆದರೆ ನಾಲ್ಕು ವರ್ಷಗಳಲ್ಲೇ ಈ ಮದುವೆ ಮುರಿದುಬಿತ್ತು. ಆಗ ಅನ್ಯೋನ್ಯವಾಗಿ ವಿಚ್ಛೇದನೆ ಪಡೆಯುವುದಕ್ಕೆ ಜಯಂತ್ ಈಕೆಯ ಒತ್ತಡ ತರಲಾರಂಭಿಸಿದ್ದ. ಇದಕ್ಕೆ ಗೌರಿ ಒಪ್ಪದಿದ್ದಾಗ ಆಕೆಗೆ ಬೆದರಿಕೆಗಳು ಹಾಕಲಾಗಿತ್ತಂತೆ. 1998 ರಲ್ಲಿ ಅಡ್ವಾಣಿ ಗೃಹಮಂತ್ರಿಯಾದಾಗ ಈಕೆ ತನ್ನ ಜೀವ ಬೆದರಿಕೆಯಿಂದ ದೇಶವನ್ನೇ ತ್ಯಜಿಸಿ ಲಂಡನ್‌ಗೆ ಹಾರಿ ಹೋಗಿದ್ದಳು. ಆನಂತರ ಗೌರಿ ಮತ್ತೆ ಸುದ್ದಿ ಮಾಡಿದ್ದು 2001 ರಲ್ಲಿ. ಆಗ ಲಂಡನ್‌ನಲ್ಲಿ ಭಾರತದ ಡೆಪ್ಯುಟಿ ಹೈ ಕಮಿಷನರ್ ಆಗಿದ್ದ ಹರ್ದೀಪ್ ಪುರಿಯವರು ತನ್ನನ್ನು ಕರೆಸಿ ಜಯಂತ್‌ಗೆ ವಿಚ್ಛೇದನ ನೀಡದಿದ್ದರೆ ಪರಿಸ್ಥಿತಿ ನೆಟ್ಟಗಿರುವುದಿಲ್ಲ ಎಂದು ಬೆದರಿಸಿದ್ದಾರೆ ಎಂದು ಪೊಲೀಸರಿಗೆ ದೂರಿದ್ದಳು. ಇದನ್ನು ನಿರಾಕರಿಸಿ ಮಾನನಷ್ಟ ಮೊಕದ್ದಮೆಯನ್ನು ಹೂಡಿದ್ದ ಪುರಿ 'ಗೌರಿಯ ತಂದೆ ನನಗೆ ಪರಿಚಿತರಾಗಿದ್ದರಿಂದ ಆಕೆಗೆ ತಲಹೆ ನೀಡಿದ್ದೆ ಅಷ್ಟೇ ಎಂದಿದ್ದರು. ಆದರೆ ಇದೆಲ್ಲದಕ್ಕಿಂತಲೂ ದೊಡ್ಡ ಸುದ್ದಿಯಾದದ್ದು 2002ನೇ ಇಸವಿಯಲ್ಲಿ. ಬಾಬ್ರಿ ಮಸೀದಿಯ ನಾಶಕ್ಕೆ ಕಾರಣ ಯಾರು ಎಂದು ವಿಚಾರಣೆ ನಡೆಸುತ್ತಿರುವ ಲಿಬ್‌ರನ್ ಆಯೋಗಕ್ಕೆ ಲಿಖಿತ ಹೇಳಿಕೆಯನ್ನು ಸಲ್ಲಿಸಿದ್ದ ಗೌರಿ ಆ ಘಟನೆಯ ರುವಾರಿ ಅಡ್ವಾಣಿಯವರೇ ಎಂದು ಹೇಳಿದ್ದಳು.

ಅಷ್ಟೇ ಅಲ್ಲದೆ, ಬಾಬ್ರಿ ಮಸೀದಿಯ ನಾಶಕ್ಕೆ ಹೇಗೆ ಅಡ್ವಾಣಿ ಸಂಚು ಹೂಡಿದ್ದರು ಎಂದೂ ವಿವರಿಸಿದ್ದಳು. ಅವಳ ಹೇಳಿಕೆಯ ಪ್ರಕಾರ, ರಾಮರಥ ಯಾತ್ರೆ ವಾರಣಾಸಿಯನ್ನು ತಲುಪಿದಾಗ ಭಜರಂಗ ದಳದ ನಾಯಕ ವಿನಯ್ ಕಟಿಯಾರ್ ಅಡ್ವಾಣಿಯವರನ್ನು ಭೇಟಿಯಾಗಿದ್ದ. ಅಂದು ಅವರಿಬ್ಬರೂ ಮಾತನಾಡುತ್ತಿದ್ದಾಗ, "ಈ ಬಾಬ್ರಿ ಮಸೀದಿ ಎಂಬ ಕಳಂಕವನ್ನು ಅಳಿಸಿ ಹಾಕಲಾಗುವು ದಿಲ್ಲವೇ?" ಎಂದು ಅಡ್ವಾಣಿ ಕೇಳಿದರು. ಆಗ ಕಟಿಯಾರ್ "ನಿಮ್ಮ ಆದೇಶಕ್ಕಾಗಿ ಕಾಯುತ್ತಿದ್ದೇವೆ. ನೀವು ಅನುಮತಿ ನೀಡಿದರೆ ಅದರ ನಾಮಾವಶೇಷವೂ ಇಲ್ಲದಂತೆ ತೆಗೆದು ಹಾಕುತ್ತೇವೆ" ಎಂದ. "ಹಾಗಾದರೆ ಇನ್ನೇತಕ್ಕೆ ಕಾಯಬೇಕು. ಈ ಗುಲಾಮಗಿರಿಯ ಸಂಕೇತವನ್ನು ಇನ್ನೆಷ್ಟು ದಿನ ಸಹಿಸಬೇಕು? ಇದಕ್ಕೆ ಸೂಕ್ತ ಸಮಯ ಒದಗಿಬಂದಿದೆ" ಎಂದು ಅಡ್ವಾಣಿ ಹೇಳಿದರು. ಇಲ್ಲಿಯವರೆಗೂ ಲಿಬ್‌ರನ್ ಆಯೋಗದ ಮುಂದೆ ಬಾಬ್ರಿ ಮಸೀದಿಯ ನಾಶಕ್ಕೂ ತನಗೂ ಯಾವುದೇ ಸಂಬಂಧವಿಲ್ಲ ಎಂದು ಅಡ್ವಾಣಿ ಹೇಳುತ್ತಿರುವುದು ಶುದ್ಧ ಸುಳ್ಳು. ಆತನೇ ಇದಕ್ಕೆ ನೇರ ಕಾರಣ ಎಂದು ಗೌರಿ ದೂರಿದ್ದಳು. ಅಷ್ಟೇ ಅಲ್ಲದೆ "ಅಡ್ವಾಣಿಯವರು ಹಿಂದೂ ಧರ್ಮಕ್ಕೆ ಸೇರಿದವರೂ ಅಲ್ಲ, ಆ ಧರ್ಮವನ್ನು ಮನೆಯಲ್ಲಿ ಪಾಲಿಸುವುದೂ ಇಲ್ಲ. ನಾಸ್ತಿಕರಾದ ಅಡ್ವಾಣಿ ಹಿಂದೂ ಧರ್ಮವನ್ನು ರಾಜಕೀಯ ಲಾಭಕ್ಕೆ ಪ್ರಜ್ಞಾಪೂರ್ವಕವಾಗಿಯೇ ದುರ್ಬಳಕೆ ಮಾಡಿಕೊಳ್ಳುತ್ತಿದ್ದಾರೆ" ಎಂದೂ ಹೇಳಿದ್ದಳು.

ಈಗ ಗೌರಿ ಅವೆಲ್ಲದಕ್ಕಿಂತ ಗುರುತರವಾದ ಆರೋಪಗಳನ್ನು ಮಾಡಿದ್ದಾಳೆ. ಅಡ್ವಾಣಿ ತನ್ನನ್ನು ದೈಹಿಕವಾಗಿ ಮತ್ತು ಮಾನಸಿಕವಾಗಿ ಶೋಷಿಸಿದ್ದಾರೆ ಎಂದು ಹೇಳಿದ್ದಾಳೆ. ಆಕೆಯ ಈ ಆರೋಪಗಳನ್ನು ಎದುರಿಸುವುದು ಹಿಂದುತ್ವದ ರಥವನ್ನು ಏರಿದಷ್ಟು ಸುಲಭವಲ್ಲ ಎಂದು ಅಡ್ವಾಣಿ ಚಡಪಡಿಸುತ್ತಿದ್ದರೆ ಅಚ್ಚರಿ ಅಲ್ಲ!

ಕೃಪೆ : ಲಂಕೇಶ್ ಪತ್ರಿಕೆ

ಪೇಟೆಂಟ್ ಕಾಯಿದೆಗೆ ತಿದ್ದುಪಡಿ ತರಾತುರಿಯೇಕೆ?

ಭಾರತದ ಕೃಷಿ, ಕೈಗಾರಿಕೆ, ಜೀವ್ರತಳಿ ತಂತ್ರಜ್ಞಾನ, ಮಾಹಿತಿ ವಿಜ್ಞಾನ ಮುಂತಾದ ಅತ್ಯಂತ ಮಹತ್ವದ ಕ್ಷೇತ್ರಗಳ ಜೀವನ್ಮರಣದ ಪ್ರಶ್ನೆಗಳನ್ನು ಒಳಗೊಂಡಿರುವ 'ಪೇಟೆಂಟ್ ಮಸೂದೆ'ಯನ್ನು ಈ ಚಳಿಗಾಲದ ಅಧಿವೇಶನದಲ್ಲೇ ಮಂಡಿಸಲು ಯುಪಿಎ ಸರ್ಕಾರ ತರಾತುರಿಯಲ್ಲಿ ಯತ್ನಿಸುತ್ತಿದೆ. ವಿಚಿತ್ರವೆಂದರೆ ಹಿಂದಿನ ಎನ್‌ಡಿಎ ಸರ್ಕಾರ ಮಂಡಿಸಿದಂತೆಯೇ ಈ ಮಸೂದೆಯನ್ನು ರೂಪಿಸಿದ್ದು. ಏನೂ ಬದಲಾವಣೆ ತರದಂತೆಯೇ ಮಂಡಿಸಲು ಬಯಸಿರುವುದು. ಇದಕ್ಕೆ ಭಾರೀ ತಕರಾರು, ಪ್ರತಿರೋಧವಿದೆ. ವಿವಿಧ ಜನ ವಿಭಾಗಗಳ ವಿಶಾಲ ಅಭಿಪ್ರಾಯದ ಅಗತ್ಯವಿದೆ... ಆ ತಕರಾರು ಏನುವು?

1994 ರಲ್ಲಿ ಉರುಗ್ವೆಯಲ್ಲಿ ನಡೆದ ಅಂತಿಮ ಸುತ್ತಿನ ಮಾತುಕತೆಯ ನಂತರ ನಡೆದ ಒಪ್ಪಂದದಲ್ಲಿ ವಿಶ್ವವ್ಯಾಪಾರ ಸಂಘಟನೆ (WTO) ಅಸ್ತಿತ್ವಕ್ಕೆ ಬಂದಿದ್ದು, ಇದು ಗ್ಯಾಟ್ ಒಪ್ಪಂದ ಎಂದು ಹೆಸರಾಗಿತ್ತು. ಇದರ ಭಾಗವಾಗಿ ವಾಣಿಜ್ಯ ಸಂಬಂಧಿತ ಬೌದ್ಧಿಕ ಆಸ್ತಿಕ ಹಕ್ಕು (trade related aspects of intellectual property rights¥trips) ಜಾರಿಗೆ ಬಂದಿದ್ದು ಇದರ ಪ್ರಕಾರ ಭಾರತವು ತನ್ನ ಪೇಟೆಂಟ್ (ಸ್ವಾಮ್ಯ) ಕಾಯಿದೆಗೆ 3ನೇ ಬಾರಿಗೆ ತಿದ್ದುಪಡಿ ತರಬೇಕಾಗಿದೆ. ಒಪ್ಪಂದದ ಪ್ರಕಾರ ತಿದ್ದುಪಡಿಯನ್ನು 2004 ಡಿಸೆಂಬರ್ 31ರ ಒಳಗೆ ತರಬೇಕು.

ಆಶ್ಚರ್ಯವೆಂದರೆ, ಹಿಂದೆ ಬಿಜೆಪಿ ನೇತೃತ್ವದ ಎನ್‌ಡಿಎ ಸರ್ಕಾರ ತಯಾರು ಮಾಡಿದ ಮಸೂದೆಯನ್ನೇ ಅದೇ ರೂಪದಲ್ಲಿ ಚಳಿಗಾಲದ ಅಧಿವೇಶನದಲ್ಲಿ ಮಂಡಿಸಬೇಕೆಂದು ಕಾಂಗ್ರೆಸ್ ನೇತೃತ್ವದ ಯು.ಪಿ.ಎ ಸರಕಾರವೂ ಬಯಸಿದೆ. ಆದರೆ ಈ ಕುರಿತು ಇನ್ನಷ್ಟು ಚರ್ಚೆಯಾದ ಬಳಿಕವೇ ಈ ಮಸೂದೆ ಮಂಡನೆಯಾಗಬೇಕೆಂದು ಎಡಪಕ್ಷಗಳು ಒತ್ತಾಯಿಸಿವೆ.

ಪೇಟೆಂಟ್ ಕಾಯಿದೆ 1970: ಭಾರತದಲ್ಲಿ ಪೇಟೆಂಟ್ ಕಾಯಿದೆ ಅಸ್ತಿತ್ವಕ್ಕೆ ಬಂದುದು 1970 ರಲ್ಲಿ. ಆದರೆ ಇದು ಅಸ್ತಿತ್ವಕ್ಕೆ ಬರುವ ಮೊದಲು 10 ವರ್ಷಗಳ ಕಾಲ ದೀರ್ಘ ಚರ್ಚೆ, ಸಂವಾದದ ಬಳಿಕವೇ ಈ ಕಾಯಿದೆ ಅಸ್ತಿತ್ವಕ್ಕೆ ಬಂದಿತ್ತು. ಈ ಕಾಯಿದೆಯು ಜಾರಿಯಿಂದಾಗಿ ಭಾರತದಲ್ಲಿ ದೇಶೀಯ ಕೈಗಾರಿಕೆಗಳ ಬೆಳವಣಿಗೆಗೆ ಅತ್ಯಂತ ಸಹಾಯಕವಾಗಿದ್ದು ವಿದೇಶಿ ಕಂಪನಿಗಳ ಪೈಪೋಟಿ, ಒತ್ತಡವನ್ನು ಎದುರಿಸುವಲ್ಲಿ ಸಹಕಾರಿಯಾಗಿತ್ತು. ಇದರಿಂದಾಗಿಯೇ, ಔಷಧ ತಯಾರಿಕೆಯಲ್ಲಿ ಭಾರತ ಜಗತ್ತಿನ ಮುಂದುವರಿಯುತ್ತಿರುವ ದೇಶಗಳಲ್ಲಿ ಅಗ್ರಸ್ಥಾನವನ್ನು ಪಡೆದಿದೆ. ಆದ್ದರಿಂದ 1970 ರ ಪೇಟೆಂಟ್ ಕಾಯಿದೆಗೆ ಯಾವುದೇ ತಿದ್ದುಪಡಿ ತರುವ ಮೊದಲು ಭಾರತದ ಔಷಧಿ ತಯಾರಿಕಾ ಕೈಗಾರಿಕೆಗಳ ಹಿತಾಸಕ್ತಿಗೆ ಧಕ್ಕೆಯಾಗದಂತೆ ಎಚ್ಚರವಹಿಸುವುದು ಅಗತ್ಯ. 'ಟ್ರಿಪ್ಸ್' ಒಪ್ಪಂದದ ಪ್ರಕಾರ ಪೇಟೆಂಟ್ ಕಾಯಿದೆಗೆ ಈಗಾಗಲೇ 1999 ಮತ್ತು 2002 ರಲ್ಲಿ ಎರಡು ಬಾರಿ ತಿದ್ದುಪಡಿ ತರಲಾಗಿದ್ದು ಈಗ 3 ನೇ ತಿದ್ದುಪಡಿಯನ್ನು ತರಲಾಗುತ್ತಿದೆ.

1999 ಮತ್ತು 2002ರ ತಿದ್ದುಪಡಿ ಸಂದರ್ಭದಲ್ಲಿ ವಿವರವಾದ ಚರ್ಚೆ ಸಾಧ್ಯವಾಗಲಿಲ್ಲ. ಆ ಸಂದರ್ಭಗಳಲ್ಲಿ ಸಾಮ್ರಾಜ್ಯಶಾಹಿ ಒತ್ತಡಗಳಿಗೆ ಮಣಿದ ಎನ್.ಡಿ.ಎ ಸರಕಾರ ತರಾತುರಿಯಲ್ಲಿ ತಿದ್ದುಪಡಿಯನ್ನು ತಂದಿತ್ತು. ಈಗಲೂ ಅಷ್ಟೇ ತರಾತುರಿಯಲ್ಲಿ ತಿದ್ದುಪಡಿ ತರಲು ಕಾಂಗ್ರೆಸ್ ನೇತೃತ್ವದ ಯುಪಿಎ ಸರ್ಕಾರ ತರಲು ಯತ್ನಿಸುತ್ತಿರುವುದು ವಿಪರ್ಯಾಸ.

1970 ರ ಪೇಟೆಂಟ್ ಕಾಯಿದೆಯನ್ನು ಜಾರಿಗೆ ತರುವ ಮೊದಲು ಸಂಸತ್ತಿನ ಒಳಗೂ, ಸಂಸತ್ತಿನ ಹೊರಗೂ ತೀವ್ರವಾದ ಚರ್ಚೆಗಳು ನಡೆದಿದ್ದವು. 1959 ರಲ್ಲಿ ಜಸ್ಟೀಸ್ ಎನ್.ರಾಜಗೋಪಾಲ ಅಯ್ಯಂಗಾರ್ ಸಮಿತಿ ನೀಡಿದ ವರದಿಯ ನಂತರದಲ್ಲಿ ಚರ್ಚೆಗಳು ಆರಂಭವಾಗಿದ್ದವು. ಇಂತಹ ಇತಿಹಾಸವುಳ್ಳ ಪೇಟೆಂಟ್ ಕಾಯಿದೆಗೆ ತಿದ್ದುಪಡಿಯನ್ನು ಹಠಾತ್ತಾಗಿ ಜಾರಿಗೆ ತರುವುದು ಸರಿಯಲ್ಲ.

ವಿಶ್ವವ್ಯಾಪಾರ ಸಂಘಟನೆಯ ದೋಹಾ ಘೋಷಣೆ : ಗ್ಯಾಟ್ ಒಪ್ಪಂದದ 10 ವರ್ಷಗಳ ಅವಧಿ ಮತ್ತು ಅದಕ್ಕಿಂತ ಮೊದಲು ನಡೆದ ವ್ಯಾಪಕ ಚರ್ಚೆಯಲ್ಲಿ 'ಟ್ರಿಪ್ಸ್' (TRIPS)ನಿಂದಾಗಿ ಬೆಳವಣಿಗೆ ಹೊಂದುತ್ತಿರುವ ದೇಶಗಳಲ್ಲಿನ ಪೇಟೆಂಟ್ ಕಾಯಿದೆ ಮೇಲಿನ ಪರಿಣಾಮ, ದೇಶೀಯ ಕೈಗಾರಿಕೆಗಳ ಸ್ಥಿತಿಗತಿಗಳನ್ನು ಅವಲೋಕಿಸಲಾಗಿತ್ತು. ಈ ಕೈಗಾರಿಕೆಗಳ ಮೇಲೆ ಆಗಲಿರುವ ಕೆಟ್ಟ ಪರಿಣಾಮಗಳ ಕುರಿತು ರಕ್ಷಣೆ ಹೊಂದುವುದು ಅಗತ್ಯ ಎಂದು ಭಾವಿಸಲಾಗಿತ್ತು. ಅಂತೆಯೇ 'ಟ್ರಿಪ್ಸ್' ಒಪ್ಪಂದಗಳ ಅಂಶಗಳನ್ನು ಗಮನದಲ್ಲಿಟ್ಟುಕೊಂಡೇ ಬೆಳವಣಿಗೆ ಹೊಂದುತ್ತಿರುವ ದೇಶಗಳಿಗಾಗಿ ಕೆಲವು ಬದಲಾವಣೆಗಳನ್ನು ತರಲು ಸಾಧ್ಯವಾಗಬೇಕು. ಅದರಲ್ಲೂ 2001 ರ 'ಟ್ರಿಪ್ಸ್' ಒಪ್ಪಂದ ಮತ್ತು ಸಾರ್ವಜನಿಕ ಆರೋಗ್ಯ ಎಂಬುದರ ಕುರಿತು ದೋಹಾದಲ್ಲಿ ನಡೆದ ವಿಶ್ವವ್ಯಾಪಾರ ಸಂಘಟನೆಯ ಘೋಷಣೆ, ದೇಶೀಯ ಕೈಗಾರಿಕೆಗಳ ಹಿತಾಸಕ್ತಿಗಳ ರಕ್ಷಣೆಗಾಗಿ ಕಾಯಿದೆಗಳನ್ನು ರಚಿಸಲು ಆಯಾ ದೇಶಗಳಿಗೆ ಸಾರ್ವಭೌಮ ಹಕ್ಕುಗಳು ಇವೆ ಎಂದು ಪ್ರತಿಪಾದಿಸಿತು. ದೋಹಾದಲ್ಲಿ ನಡೆದ ವಿಶ್ವ ವ್ಯಾಪಾರ ಸಂಘಟನೆಯ ಸಚಿವ ಮಟ್ಟದ ಸಭೆಯ ಸಂದರ್ಭದಲ್ಲಿ 3ನೇ ಜಗತ್ತಿನ ದೇಶಗಳು ಮುಂದುವರಿದ ದೇಶಗಳ ಒತ್ತಡಗಳನ್ನು ಪ್ರತಿಭಟಿಸಿ, ಯಶಸ್ವಿಯಾದುದನ್ನು ಈ ಸಂದರ್ಭದಲ್ಲಿ ನೆನಪಿಸಿಕೊಳ್ಳಬೇಕು. ಮುಂದುವರೆಯುತ್ತಿರುವ ದೇಶಗಳಲ್ಲಿರುವ ಸಾರ್ವಜನಿಕ ಆರೋಗ್ಯದ ಪರಿಸ್ಥಿತಿಯನ್ನು ಗಮಸಿದ ದೋಹಾ ಘೋಷಣೆ ಎಲ್ಲರಿಗೂ ಕಡಿಮೆದರದಲ್ಲಿ ಔಷಧ ಮತ್ತು ಉತ್ತಮ ಆರೋಗ್ಯ ದೊರೆಯುವಂತಾಗಬೇಕು ಎಂಬುದನ್ನು ಸೂಚಿಸಿತ್ತು.

ಆದರೆ 'ಟ್ರಿಪ್ಸ್' ಒಪ್ಪಂದದಲ್ಲಿಯಾಲೀ ಅಥವಾ ನಂತರದ ದೋಹಾಘೋಷಣೆಯಲ್ಲಾಗಲೀ ಇರುವ 'ಫ್ಲೆಕ್ಸಿಬಿಲಿಟಿ' ಅಂಶವನ್ನು ದೇಶೀಯ ಹಿತಾಸಕ್ತಿಗೆ ಬಳಸಿಕೊಳ್ಳುವಲ್ಲಿ ಎನ್.ಡಿ.ಎ ಸರಕಾರ ವಿಫಲವಾಗಿತ್ತು 'ಫ್ಲೆಕ್ಸಿಬಿಲಿಟಿ' ಅಂದರೆ, 'ಟ್ರಿಪ್ಸ್' ಒಪ್ಪಂದ ಮಾಡಿಕೊಂಡ ನಂತರವೂ, ಹಿಂದುಳಿದ ದೇಶಗಳ ಅಗತ್ಯಗಳಿಗೆ ಅನುಗುಣವಾಗಿ ಕೆಲವು ಬದಲಾವಣೆಗಳನ್ನು ಮಾಡಲು ಇರುವ ಅವಕಾಶ. ಆ ಬದಲಾವಣೆಗಳನ್ನು ಮಾಡುವ ಮೊದಲು ವಿ.ವ್ಯಾ.ಸಂ. ಸಂಬಂದಪಟ್ಟವರೊಂದಿಗೆ ಮಾತುಕತೆ ನಡೆಸಿ, ಬದಲಾವಣೆಯ ಅಗತ್ಯತೆಗಳನ್ನು ಮನದಟ್ಟು ಮಾಡಬೇಕು ಅಷ್ಟೆ. ಈ ಹಿನ್ನೆಲೆಯಲ್ಲಿ ಟ್ರಿಪ್ಸ್ ಒಪ್ಪಂದವನ್ನು ವಿಮರ್ಶೆಗೆ ಒಳಪಡಿಸಬೇಕೆಂದೂ, ಮೂಲ ಒಪ್ಪಂದದಲ್ಲಿ ಇದಕ್ಕೆ ಅವಕಾಶ ಇದೆಯೆಂದೂ ಎಡಪಕ್ಷಗಳು ಒತ್ತಾಯಿಸಿದ್ದವು. ಆದರೆ ಎನ್.ಡಿ.ಎ ಸರಕಾರ ಇದನ್ನು ಗಂಭೀರವಾಗಿ ಪರಿಗಣಿಸಿರಲಿಲ್ಲ.

ಎನ್.ಡಿ.ಎ ಸರಕಾರ ಪೇಟೆಂಟ್ ಕಾಯಿದೆಗೆ 3ನೇ ತಿದ್ದುಪಡಿ ಮಸೂದೆಯನ್ನು ತಯಾರಿಸಿದ್ದು 2003 ರಲ್ಲಿ. ಆದರೆ ಅಷ್ಟರಲ್ಲಿ ಸರಕಾರ ಬಿದ್ದುಹೋಯಿತು. ಸಂಸತ್ತಿನಲ್ಲಿ ಚರ್ಚೆಗೆ ಅವಕಾಶವೇ ಒದಗಲಿಲ್ಲ. ಮಾತ್ರವಲ್ಲ, ಎನ್.ಡಿ.ಎ ಸರಕಾರವು 2ನೇ ತಿದ್ದುಪಡಿಯಲ್ಲಿರುವ ಕೆಲವು ಅಂಶಗಳನ್ನು ಬದಲಿಸಿ, ದೇಶದ ಹಿತಾಸಕ್ತಿಗೆ ಮಾರಕವಾಗುವ ಅಂಶಗಳನ್ನು 3ನೇ ತಿದ್ದುಪಡಿಯಲ್ಲಿ ಸೇರಿಸಿದೆ. ಉದಾಹರಣೆಗೆ 2002 ರಲ್ಲಿ ಲೋಕಸಭೆ ಅಂಗೀಕರಿಸಿದ ಪೇಟೆಂಟ್ ಕಾಯಿದೆಯ 2ನೇ ತಿದ್ದುಪಡಿಯಲ್ಲಿ, ಯಾವುದೇ ವಸ್ತುವಿಗೆ ಪೇಟೆಂಟ್ ನೀಡುವ ಮೊದಲು ವಿರೋಧಿಸುವ ಹಕ್ಕು ಸಾರ್ವಜನಿಕರಿಗೆ ಇತ್ತು. ಇದಕ್ಕೆ pre-grantsopposition ಎಂದು ಹೇಳುತ್ತಾರೆ. ಅಂದರೆ ಯಾವುದೇ ಕಂಪನಿಗೆ, ವಿದೇಶಿ ಅಥವಾ ಏಕಸ್ವಾಮ್ಯ, ಪೇಟೆಂಟ್ ನೀಡುವ ಮೊದಲೇ ತೊಂದರೆಗೆ ಒಳಗಾಗುವ ದೇಶೀಯ ಕಂಪನಿಗಳು ಅಥವಾ ಜನರು ತಮ್ಮ ವಿರೋಧವನ್ನು ವ್ಯಕ್ತಮಾಡಬಹುದಿತ್ತು. ಅದರ ವಿಚಾರಣೆಯಾದ ನಂತರವಷ್ಟೆ ಪೇಟೆಂಟನ್ನು ನೀಡಲಾಗುತ್ತಿತ್ತು. ಈಗ ಅದನ್ನು ಬದಲಿಸಿ, pre-grant representation ಎಂದು ತಿದ್ದುಪಡಿ ಮಾಡುವ ಮೂಲಕ, ಪೇಟೆಂಟನ್ನು ನೀಡಿದ ನಂತರ ಅಹವಾಲನ್ನು ಪರಿಶೀಲಿಸಲಾಗುವುದು. ಅದರಿಂದ ಯಾವುದೇ ಪ್ರಯೋಜನವಿಲ್ಲ. ಏಕೆಂದರೆ ಪೇಟೆಂಟ್ ಪಡೆದ ಕಂಪನಿ ಉತ್ಪಾದನೆ, ಮಾರುಕಟ್ಟೆ ಆರಂಭಿಸಿರುತ್ತದೆ. ಅದನ್ನು ನಿಲ್ಲಿಸುವುದು ಕಷ್ಟ.

ಇದೀಗ ಮಂಡಿಸಲಿರುವ 3ನೇ ತಿದ್ದುಪಡಿಯಲ್ಲಿ, ಪೇಟೆಂಟ್ ಕಾಯಿದೆಯ ವಿಭಾಗ 5ನ್ನು ತೆಗೆಯಲಾಗಿದೆ. ಇದು ಪೇಟೆಂಟ್ ಕಾಯಿದೆ ವ್ಯಾಪ್ತಿಗೆ ಸಂಬಂಧಪಟ್ಟಿದ್ದು (scope of patientibility) ಪೇಟೆಂಟ್‌ನ ವ್ಯಾಪ್ತಿಗೆ ಮಿತಿ ಹೇರದೇ ಹೋದಲ್ಲಿ, ಮಿತಿ ಮೀರಿದ ಹಣ ಹೊಂದಿರುವ ಶ್ರೀಮಂತ ಕಂಪನಿಗಳು, ಪ್ರತಿಷ್ಠಿತ ವಕೀಲರನ್ನು ನೇಮಕ ಮಾಡಿಕೊಳ್ಳುವುದರ ಮೂಲಕ, ಹೆಚ್ಚಿನೆಲ್ಲಾ ಪೇಟೆಂಟ್‌ಗಳನ್ನು ತಮ್ಮದಾಗಿಸಿಕೊಂಡು, ಸ್ಪರ್ಧೆಗೆ ಅವಕಾಶವಿಲ್ಲ[...] ಮಾಡುತ್ತದೆ. ಆದ್ದರಿಂದ ಪೇಟೆಂಟ್‌ನ ವ್ಯಾಪ್ತಿ[...] ಹೊಸದಾಗಿ ಸಂಶೋಧಿಸಿದ ವಸ್ತುಗಳಿಗೆ ಮಾ[...] ದೊರಕಬೇಕು.

ಡಾ.ಆರ್.ಎ.ಮಶಾಲ್ಕರ್ ನೇತೃತ್ವದ ಔ[...] ಸಂಶೋಧನೆ ಮತ್ತು ಅಭಿವೃದ್ಧಿ ಸಮಿ[...] (P.R.and D.C) ಕೂಡಾ ಶಿಫಾರಸು ಮಾ[...]

ಲಕ್ಷಾಂತರ ಪೇಟೆಂಟ್ ಅರ್ಜಿಗ[...] ಅಮೇರಿಕಾದ ಪೇಟೆಂಟ್ ಕಛೇರಿಗಳಲ್ಲಿ ಈಗಾ[...] 3.55 ಲಕ್ಷ ಅರ್ಜಿಗಳು ಬಂದಿವೆ. ಇದ[...] ಪರಿಶೀಲಿಸಲು 3000 ತಜ್ಞರ ತಂಡವಿದೆ. ಆ[...] ಅವರಿಗೆ ಸರಿಯಾಗಿ ಪರಿಶೀಲಿಸ[...] ಸಾಧ್ಯವಾಗುತ್ತಿಲ್ಲ. ಇದರಿಂದಾಗಿ 'ಠಕ್ಕು' ಕಂಪನಿ[...] ಪೇಟೆಂಟ್ ಹಕ್ಕನ್ನು ಪಡೆದುಕೊಳ್ಳುವ ಸಾಧ್ಯತೆಯ[...] ತಳ್ಳಿಹಾಕುವಂತಿಲ್ಲ.

1.1.2005 ನಂತರ 'ವಸ್ತು ಸ್ವಾಮ್ಯ' (pr[...]uct patient) ಜಾರಿಗೆ ಭಾರತದಲ್ಲಿ ಜಾ[...] ಬಂದಲ್ಲಿ, ಇಲ್ಲಿಯೂ ಅದೇ ಬವಣೆ. ನಮ್ಮ ಇಂ[...] ವ್ಯವಸ್ಥೆಯಲ್ಲಿ ನಿಜವಾಗಿಯೂ ಅರ್ಹ ಕಂಪನಿಗ[...] ವ್ಯಕ್ತಿಗಳಿಗೆ ಪೇಟೆಂಟ್ ನೀಡಲು ಸಾಧ್ಯ[...] ಹಾಗೊಂದು ವೇಳೆ ಸಾಧ್ಯವಾಗದೇ ಹೋ[...] ಲಕ್ಷಗಟ್ಟಲೆ ವಸ್ತುಗಳು ಪೇಟೆಂಟ್ ಪಡೆ[...] ಏಕಸ್ವಾಮ್ಯವನ್ನು ಹೊಂದಿ ದುಬ[...] ಬೆಲೆಯಾಗುತ್ತದೆ. ಶ್ರೀಮಂತರಿಗೆ ಮಾತ್ರ ದಕ್ಕು[...] ಬಡವರ ಪಾಲಿಗೆ ಇಲ್ಲವಾಗುತ್ತದೆ.

ಔಷಧಗಳ ದರ ಏರಿಕೆ : ಇತ್ತೀಚೆಗೆ ಔಷಧಿ[...] ದರಗಳಲ್ಲಿ ಏರಿಕೆಯಾಗುತ್ತಿದ್ದರೂ, ಇ[...] ದೇಶಗಳಿಗೆ ಹೋಲಿಸಿ ನೋಡಿದಲ್ಲಿ ಭಾರತ[...] ದರ ಇನ್ನೂ ಕಡಿಮೆ ಇದೆ.

ಉದಾ:	ಭಾರತ	ಪಾಕಿಸ್ತಾನ	ಅಮೇ[...]
ನೋವುನಿವಾರಕ- ಡೈಕ್ಲೋಫೈನಾಕ್ಸ್	ರೂ.3.50	84.71	674[...]
ಆಂಟಿ ಅಲ್ಸರ್- ಕಾಂಟಡಿನ್	ರೂ.6.02	74.09	863[...]

ಅದೇ ರೀತಿ 'ಗ್ಲಿವೆಕ್' (glevec) ಎ[...] ಕ್ಯಾನ್ಸರ್ ಗುಣಪಡಿಸಲು ಬಳಸುವ ಪರಿಣಾಮ[...] ಔಷಧಿಯ ಬೆಲೆ ತಿಂಗಳಿಗೆ ಸಾಧಾರಣ 1,20[...] ಆಗುತ್ತದೆ. ಇದನ್ನು ವಿದೇಶಿ ಕಂಪನಿಯೊ[...] ತಯಾರಿಸುತ್ತದೆ. ಆದರೆ ಇದರ ದೇಶೀ[...] ಉತ್ಪಾದನೆಯ ಬೆಲೆ ಕೇವಲ 10,000ರ[...] 12,000 ರೂ ಮಾತ್ರ. ಆದರೆ ಪೇಟೆ[...] ಕಾಯಿದೆಗೆ ತಿದ್ದುಪಡಿ ತಂದು 'ಗ್ಲಿವೆಕ[...] ಮಾರಾಟದ ಹಕ್ಕನ್ನು ಅದನ್ನು ತಯಾರು ಮಾ[...] ಕಂಪನಿಗೆ ಮಾತ್ರ ನೀಡಿದಾಗ ಸ್ಪರ್ಧೆ[...] ಇರುವುದಿಲ್ಲ. ಅಂದರೆ ತಿದ್ದುಪಡಿಗೊಳ[...] ಪೇಟೆಂಟ್ ಕಾಯಿದೆಯ ಪ್ರಕಾರ ಆ ಔಷಧಿ[...] ಪೇಟೆಂಟ್ ಪಡೆದ ಕಂಪನಿ ಮಾತ್ರ ಉತ್ಪಾ[...] ಮಾರಾಟ ಮಾಡಬೇಕಾಗುತ್ತದೆ. ಪೇಟೆ[...] ಅವಧಿ 20 ವರ್ಷ. ಅಂದರೆ 20 ವರ್ಷಗಳ[...] ಆ ಔಷಧಿಯನ್ನು ಬೇರೆಯವರಿಗೆ ತಯಾರಿ[...] ಮಾರಾಟ ಮಾಡಲು ಸಾಧ್ಯವಿಲ್ಲ. ಭಾರತೀಯವರ ಪರಿಸ್ಥಿತಿ ಹೇಗಾಗಬೇಕು?

ಇಂತಹ ಸನ್ನಿವೇಶದಲ್ಲಿ ಪೇಟೆಂಟ್ ಕಾಯ[...] ತರಲು ಉದ್ದೇಶಿಸಿರುವ 3ನೇ ತಿದ್ದುಪಡಿ[...] ಈಗಿರುವ ರೀತಿಯಲ್ಲೇ ಜಾರಿಗೆ ತ[...] ಎಡಪಕ್ಷಗಳು ತೀವ್ರ ವಿರೋಧವನ್ನು ವ್ಯಕ್ತಪಡಿ[...] ಇದು ದೇಶದ ಮತ್ತು ಜನತೆಯ ಹಿತಾಸಕ್ತಿ[...] ವಿರುದ್ಧವಾದುದು ಎಂದು ಎಡಪಕ್ಷಗಳು ವಾದಿ[...] ಆದ್ದರಿಂದ ಜನವರಿ 1,2005 ರ ಗಡು[...] ತಿದ್ದುಪಡಿಯನ್ನು ಜಾರಿಗೆ ತರಬೇಕೆಂಬ [...] ಸಲ್ಲದು ಎಂದು ಎಡಪಕ್ಷಗಳು ಒತ್ತಾಯಿ[...] ಸಾಕಷ್ಟು ಚರ್ಚೆ ಅವಶ್ಯ ಎಂದು ಹೇಳಿವೆ.

ಪೇಟೆಂಟ್ ಕಾಯಿದೆಗೆ ತಂದ ಪ್ರ[...] ತಿದ್ದುಪಡಿ 1999 ರಲ್ಲಿ ಜಾರಿಗೆ ಬಂದಿತ್ತು. [...] ಒಪ್ಪಂದದ ಪ್ರಕಾರ ಅದನ್ನು 1995 ರ ಜನವ[...]ರಿಂದಲೇ ಜಾರಿಗೆ ತರಬೇಕಾಗಿತ್ತು. ಅ[...] ನೀಡಿದ ಅವಧಿಯ ಒಳಗಡೆ ತಿದ್ದ[...] ಮಾಡಲೇಬೇಕೆಂಬ ಕಟ್ಟಲೆ ಏನಿಲ್ಲ. ಇ[...] ಸಂದರ್ಭದಲ್ಲಿ ಈಗಿನ ತಿದ್ದುಪಡಿ ಮಸೂದೆ[...] ಲೋಕಸಭೆಯ ಸ್ಥಾಯೀ ಸಮಿತಿಗೆ ಕಳುಹಿಸ[...] ಹಾಗೂ ವಿವಿಧ ವಿಭಾಗಗಳ ನಡುವೆ ವ[...] ಚರ್ಚೆಯ ನಂತರವೇ ಅದನ್ನು ಜಾ[...] ತರಬೇಕೆಂದು ಎಡಪಕ್ಷಗಳು ವಾದಿಸಿವೆ.

ಏಕೆಂದರೆ, ಪೇಟೆಂಟ್ ಕಾಯಿದೆಗೆ ತರಲ[...] ತಿದ್ದುಪಡಿ ಆರೋಗ್ಯಕ್ಷೇತ್ರದ ಮೇಲೆ [...] ಪರಿಣಾಮ ಬೀರುವುದಲ್ಲದೆ, ಕೃಷಿ, [...] ತಂತ್ರಜ್ಞಾನ, ಸಾಫ್ಟ್‌ವೇರ್ ಇತ್ಯಾದಿ ಕ್ಷೇ[...]

ಪೇಟೆಂಟ್ ಅಥವಾ ಸ್ವಾಮ್ಯ ಕಾಯಿದೆ ಎಂದರೇನು?

ಪೇಟೆಂಟ್ ಅಥವಾ ಸ್ವಾಮ್ಯ ಕಾಯಿದೆ ನಮ್ಮ ದೇಶದಲ್ಲಿ ಜಾರಿಗೆ ಬಂದಿದ್ದು 1970 ರಲ್ಲಿ. ಯಾವುದೇ ವ್ಯಕ್ತಿ ಅಥವಾ ಕಂಪನಿಗಳು ತಾವು ತಯಾರಿಸುವ ವಸ್ತುವಿನ ಮೇಲೆ ಅಥವಾ ವಸ್ತುವನ್ನು ತಯಾರಿಸುವ ವಿಧಾನದ ಮೇಲೆ ಸ್ವಾಮ್ಯವನ್ನು ಕೇಳಿದಲ್ಲಿ, ಸರಕಾರವು ತನ್ನ ನಿಯಮಗಳಿಗೆ ಅನುಗುಣವಾಗಿ ಒಪ್ಪಿಗೆಯನ್ನು ನೀಡುತ್ತದೆ. ವಸ್ತುವಿನ ಮೇಲೆ ಸ್ವಾಮ್ಯ ನೀಡಿದಲ್ಲಿ ಅದಕ್ಕೆ 'ಪ್ರೊಡಕ್ಟ್ ಪೇಟೆಂಟ್' ಎಂದೂ, ಅದನ್ನು ತಯಾರಿಸುವ ವಿಧಾನದ ಮೇಲೆ ಸ್ವಾಮ್ಯ ನೀಡಿದಲ್ಲಿ ಅದಕ್ಕೆ 'ಪ್ರೊಸೆಸ್ ಪೇಟೆಂಟ್' ಎಂದೂ ಕರೆಯುತ್ತಾರೆ. ನಮ್ಮ ದೇಶದಲ್ಲಿ ಸಧ್ಯಕ್ಕೆ ಜಾರಿಯಲ್ಲಿರುವುದು 'ಪ್ರೊಸೆಸ್ ಪೇಟೆಂಟ್', ಅಂದರೆ ವಸ್ತುವನ್ನು ತಯಾರಿಸುವ ವಿಧಾನದ ಮೇಲೆ ಮಾತ್ರ. ಉದಾಹರಣೆಗೆ ತಲೆನೋವಿನ ಮಾತ್ರೆ ತಯಾರಿಸುವ ವಿಧಾನದ ಮೇಲೆ ಸ್ವಾಮ್ಯ (ಪೇಟೆಂಟ್) ದೊರಕಿದ್ದರೆ, ಇನ್ನೊಂದು ವಿಧಾನದ ಮೂಲಕ ತಲೆನೋವಿನ ಮಾತ್ರೆಯನ್ನು ತಯಾರಿಸುವುದು, ಮಾರಾಟ ಮಾಡುವ ಹಕ್ಕು ಇನ್ನೊಂದು ಕಂಪನಿಗೆ ಇರುತ್ತದೆ. ಆದರೆ ಪೇಟೆಂಟ್ ಪಡೆದ ಕಂಪನಿಯು ಉತ್ಪಾದಿಸುತ್ತಿರುವ ವಿಧಾನದ ರೀತಿಯಲ್ಲೇ ಮಾತ್ರೆಯನ್ನು ತಯಾರಿಸುವ ಅವಕಾಶ ಇನ್ನೊಂದು ಕಂಪನಿಗೆ ಇರುವುದಿಲ್ಲ. ಇದರಿಂದ ಹೊಸ ಆವಿಷ್ಕಾರಗಳಿಗೆ ಅವಕಾಶವಾಗುವುದು ಮಾತ್ರವಲ್ಲದೆ, ಕಂಪನಿಗಳ ನಡುವೆ ಸ್ಪರ್ಧೆ ನಡೆಯುವುದರಿಂದ ಲಾಭಕೋರತನ ಕಡಿಮೆ ಇರುತ್ತದೆ.

'ಟ್ರಿಪ್ಸ್' ಒಪ್ಪಂದದ ಪ್ರಕಾರ ತಿದ್ದುಪಡಿ ತರಲಾಗುತ್ತಿರುವ ಪೇಟೆಂಟ್ ಕಾಯಿದೆಯ 3ನೇ ತಿದ್ದುಪಡಿ ಪ್ರಕಾರ, ಇನ್ನು ಮುಂದೆ, 'ವಸ್ತುವಿನ ಮೇಲೆ ಸ್ವಾಮ್ಯ' (product patent) ನೀಡಲಾಗುವುದು, ಅದರ ಪ್ರಕಾರ ತಲೆನೋವಿನ ಮಾತ್ರೆ ತಯಾರಿಸಲು, ಮಾರುಕಟ್ಟೆ ಮಾಡಲು ಯಾವುದೇ ವ್ಯಕ್ತಿ ಅಥವಾ ಕಂಪನಿಗೆ ಪೇಟೆಂಟ್ ನೀಡಲಾಗಿದೆ ಎಂದರೆ ಇನ್ನು ಬೇರೆ ಯಾವುದೇ ವ್ಯಕ್ತಿ ಅಥವಾ ಕಂಪನಿ ಯಾವುದೇ ಬ್ರಾಂಡ್‌ನಲ್ಲಿ ತಲೆನೋವಿನ ಮಾತ್ರೆ ತಯಾರಿಸಲು ಸಾಧ್ಯವಾಗುವುದಿಲ್ಲ, ಮಾರಾಟ ಮಾಡಲು ಸಾಧ್ಯವಾಗುವುದಿಲ್ಲ. ಅಂದರೆ ಆ ಮಾತ್ರೆಗೆ ಯಾವುದೇ ಸ್ಪರ್ಧೆ ಇಲ್ಲ.

ಈಗಿನ ಕಾಯಿದೆ ಪ್ರಕಾರ ಪೇಟೆಂಟ್ ಅವಧಿ 7 ವರ್ಷ ಇದ್ದು, ಹೊಸಕಾಯಿದೆ ಪ್ರಕಾರ 20 ವರ್ಷಕ್ಕೆ ಏರಿಸಲಾಗಿದೆ. ಅಂದರೆ 20 ವರ್ಷಗಳವರೆಗೆ ಆ ಮಾತ್ರೆಗೆ ಯಾವುದೇ ಸ್ಪರ್ಧೆ ಇಲ್ಲ.

ಹಾಗಾದರೆ ಬೆಲೆ, ಗುಣಮಟ್ಟ ಹೇಗಾಗಬಹುದು?

ಕೃಷಿ ಕೂಲಿಕಾರರ 3ನೇ ರಾಜ್ಯಸಮ್ಮೇಳನ

ಕ್ಷಿಪ್ರ ವಿಸ್ತರಣೆಗೆ ದೃಢ ಸಂಕಲ್ಪ

ಕೃಷಿ ಕೂಲಿಕಾರರ ಸಂಕಷ್ಟಗಳ ಬಗ್ಗೆ ವಿವರವಾಗಿ ಚರ್ಚಿಸಿದ ಸಮ್ಮೇಳನವು ಕೃಷಿ ಕೂಲಿಕಾರರ ಸಂಘಟನೆಯನ್ನು ರಾಜ್ಯಾದ್ಯಂತ ವಿಸ್ತರಿಸಿ ಸಮರಶೀಲವಾದ ಹೋರಾಟಗಳನ್ನು ನಡೆಸುವ ಮೂಲಕ ರಾಜ್ಯದ ಕೃಷಿ ಕೂಲಿಕಾರರ ಬಾಳಿಗೆ ನೆಮ್ಮದಿ ದೊರಕಿಸಲು ಸಾಧ್ಯವಾಗಬೇಕೆಂದು ನಿರ್ಧರಿಸಿದೆ.

ರಾಜ್ಯದಲ್ಲಿ ಸುಮಾರು ಒಂದು ಕೋಟಿಯಷ್ಟಿರುವ, ಅತ್ಯಂತ ನಿರ್ಲಕ್ಷ್ಯಕ್ಕೆ ಒಳಪಟ್ಟ, ನಿರ್ಗತಿಕರಾದ ಕೃಷಿ ಕೂಲಿಕಾರರ ನಡುವೆ ಕರ್ನಾಟಕ ಪ್ರಾಂತ ಕೃಷಿ ಕೂಲಿಕಾರರ ಸಂಘವನ್ನು ತ್ವರಿತವಾಗಿ ವಿಸ್ತರಿಸಲು ದೃಢ ಸಂಕಲ್ಪ ಮಾಡುವುದರೊಂದಿಗೆ ಮಂಡ್ಯ ನಗರದ "ಕಾಮ್ರೇಡ್ ಎಸ್.ಸೂರ್ಯನಾರಾಯಣರಾವ್' ಸಭಾಂಗಣದಲ್ಲಿ ನವೆಂಬರ್ 17 ರಿಂದ 19ರವರೆಗೆ ನಡೆದ ಕೃಷಿ ಕೂಲಿಕಾರರ 3ನೇ ರಾಜ್ಯ ಸಮ್ಮೇಳನವು ಯಶಸ್ವಿಯಾಗಿ ಮುಕ್ತಾಯವಾಯಿತು. 5 ವರ್ಷಗಳ ಹಿಂದೆ ಜರುಗಿದ 2ನೇ ರಾಜ್ಯ ಸಮ್ಮೇಳನದ ನಂತರದ ಅವಧಿಯಲ್ಲಿ ಉಲ್ಬಣಗೊಂಡ ಕೃಷಿ ಕೂಲಿಕಾರರ ಸಂಕಷ್ಟಗಳ ಬಗ್ಗೆ ವಿವರವಾಗಿ ಚರ್ಚಿಸಿದ ಸಮ್ಮೇಳನವು ಕೃಷಿ ಕೂಲಿಕಾರರ ಸಂಘಟನೆಯನ್ನು ರಾಜ್ಯಾದ್ಯಂತ ವಿಸ್ತರಿಸಿ ಸಮರಶೀಲವಾದ ಹೋರಾಟಗಳನ್ನು ನಡೆಸುವ ಮೂಲಕ ರಾಜ್ಯದ ಕೃಷಿ ಕೂಲಿಕಾರರ ಬಾಳಿಗೆ ನೆಮ್ಮದಿ ದೊರಕಿಸಲು ಸಾಧ್ಯವಾಗಬೇಕೆಂದು ನಿರ್ಧರಿಸಿದೆ.

ಹೆಚ್ಚಿದ ಅಸಹನೀಯ ಬದುಕಿನ ಸ್ಥಿತಿ

ಈ ಅವಧಿಯಲ್ಲಿ ಕೇಂದ್ರದಲ್ಲಿ ಅಧಿಕಾರ ನಡೆಸುತ್ತಿದ್ದ ಬಿಜೆಪಿ ನೇತೃತ್ವದ ಸರ್ಕಾರ ಮತ್ತು ರಾಜ್ಯದಲ್ಲಿ ಅಧಿಕಾರ ನಡೆಸುತ್ತಿದ್ದ ಎಸ್.ಎಂ.ಕೃಷ್ಣ ನೇತೃತ್ವದ ಕಾಂಗ್ರೆಸ್ ಸರ್ಕಾರಗಳು ಜಾರಿಗೊಳಿಸಿದ ಉದಾರೀಕರಣ, ಖಾಸಗೀಕರಣ ಮತ್ತು ಜಾಗತೀಕರಣದ ಧೋರಣೆಗಳಿಂದಾಗಿ ಕೃಷಿ ರಂಗವು ಹಿಂದೆಂದೂ ಕಂಡರಿಯದ ಬಿಕ್ಕಟ್ಟಿಗೆ ಒಳಗಾಯಿತು. ತೀವ್ರ ಬೆಲೆ ಕುಸಿತದಿಂದ ಕಂಗಾಲಾದ ರೈತರು ಸಾಲದ ಬಾಧೆ ತಾಳಲಾರದೆ ಸಾಲುಸಾಲಾಗಿ ಆತ್ಮಹತ್ಯೆ ಮಾಡಿಕೊಳ್ಳತೊಡಗಿದರು. ರೈತರನ್ನೇ ಅವಲಂಭಿಸಿ ಬದುಕುತ್ತಿರುವ ಕೃಷಿ ಕೂಲಿಕಾರರು ಉದ್ಯೋಗ ಸಿಗದಂತಾಗಿ ಎಲ್ಲೆಲ್ಲೋ ವಲಸೆ ಹೋಗುವಂತಾಯಿತು. ಮೂರು ನಾಲ್ಕು ವರ್ಷಗಳಿಂದ ಮುಂದುವರೆದ ಬರಗಾಲವು ಕೃಷಿ ಕೂಲಿಕಾರರ ಬದುಕನ್ನು ಇನ್ನಷ್ಟು ಅಸಹನೀಯವಾಗಿಸಿತು. ಹಸಿವಿನ ಸಾವುಗಳು ಸಂಭವಿಸಿದವು. ಹಸಿವನ್ನು ಸಹಿಸಲಾಗದೆ ಆತ್ಮಹತ್ಯೆಗಳೂ ಸಂಭವಿಸಿದವು.

ಕೃಷಿ ವಲಯದಲ್ಲಿ ಉದಾರೀಕರಣದ ನೀತಿಗಳ ಅನುಷ್ಠಾನದಿಂದಾಗಿ ಬಡರೈತರು ತಮ್ಮ ಭೂಮಿಯನ್ನು ಕಳೆದುಕೊಂಡು ಕೃಷಿ ಕೂಲಿಕಾರರಾಗತೊಡಗಿದರು. ನೇಕಾರಿಕೆಯಂತಹ ಪರಂಪರಾಗತ ಗುಡಿ ಕೈಗಾರಿಕೆಗಳು ನಾಶವಾಗಿ, ಗ್ರಾಮೀಣ ಕುಶಲಕರ್ಮಿಗಳು ಸಹ ಕೂಲಿಕಾರರ ಸಮೂಹಕ್ಕೆ ಸೇರ್ಪಡೆಯಾದರು. ನಗರಗಳಲ್ಲಿ ಕಾರ್ಖಾನೆಗಳು ಮುಚ್ಚುತ್ತಿದ್ದಂತೆ, ಕೆಲಸ ಕಳೆದುಕೊಂಡು ಹಳ್ಳಿಗಳಿಗೆ ಹಿಂತಿರುಗಿದ ಕಾರ್ಮಿಕರು ಹೊಟ್ಟೆಪಾಡಿಗಾಗಿ ಕೃಷಿ ಕೆಲಸವನ್ನು ಹುಡುಕುವಂತಾಯಿತು. ಸರ್ವೋಚ್ಚ ನ್ಯಾಯಾಲಯದ ಆದೇಶದ ಹೆಸರಿನಲ್ಲಿ ಅರಣ್ಯಭೂಮಿ ಸಾಗುವಳಿದಾರರನ್ನು ಒಕ್ಕಲೆಬ್ಬಿಸುವ ಪ್ರಯತ್ನದಿಂದಾಗಿ ಭೂಮಿ ಕಳೆದುಕೊಂಡವರು ಸಹ ಕೂಲಿಕಾರರ ಸಮೂಹವನ್ನು ಸೇರುವಂತಾಯಿತು. ಹೀಗೆ ಕೃಷಿ ಕೂಲಿಕಾರರ ಸಂಖ್ಯೆ ದೇಶಮಟ್ಟದಲ್ಲಿ ಹಾಗೂ ರಾಜ್ಯದಲ್ಲಿ ಗಣನೀಯವಾಗಿ ಏರುವಂತಾಯಿತು.

ಕೃಷಿ ಕೂಲಿಕಾರರ ಸಂಖ್ಯೆ ಹೆಚ್ಚಾಗುತ್ತಾ ಹೋದಂತೆ ಅವರಿಗೆ ದೊರೆಯುತ್ತಿದ್ದ ಕೆಲಸದ ದಿನಗಳು ಕಡಿಮೆಯಾಗುವಂತಾಯಿತು. ಕೃಷಿ ಕೆಲಸಗಳಲ್ಲಿ ಹೆಚ್ಚೆಚ್ಚಾಗಿ ಬಳಕೆಯಾಗುತ್ತಿರುವ ಯಂತ್ರಗಳು ಕೃಷಿ ಕೂಲಿಕಾರರ ಕೆಲಸವನ್ನು ಕಿತ್ತುಕೊಳ್ಳುವಂತಾಯಿತು. ಕೆಲಸದ ಲಭ್ಯತೆ ಕುಸಿಯುತ್ತಾ ಹೋದಂತೆ ಕೃಷಿ ಕೂಲಿಕಾರರ ಸಂಪಾದನೆ ಇಳಿಮುಖವಾಗು ವಂತಾಯಿತು. ವಲಸೆ ಸಮಸ್ಯೆ ಗಂಭೀರವಾಯಿತು.

ಈ ಅವಧಿಯಲ್ಲಿ ಕೃಷಿ ಕೂಲಿಕಾರರ ಮೇಲೆ ಭೂಮಾಲಕ ಶಕ್ತಿಗಳ ದಾಳಿ ದಬ್ಬಾಳಿಕೆಗಳು ಹೆಚ್ಚಾದವು. ಮಹಿಳೆಯರ ಮೇಲೆ, ದಲಿತರ ಮೇಲೆ ದೌರ್ಜನ್ಯಗಳು ನಡೆದಾಗ, ದೌರ್ಜನ್ಯವೆಸಗಿದವರ ವಿರುದ್ಧ ಕಾನೂನು ಕ್ರಮ ಜರುಗಿಸುವ ಬದಲು ಪೊಲೀಸರು ತಪ್ಪಿತಸ್ಥರಿಗೆ ಕುಮ್ಮಕ್ಕು ಕೊಟ್ಟ ಹಲವಾರು ಪ್ರಕರಣಗಳು ಈ ಅವಧಿಯಲ್ಲಿ ಜರುಗಿದವು.



ಮೆರವಣಿಗೆ

ಸಮ್ಮೇಳನವು ಇಂತಹ ಹತ್ತಾರು ಪ್ರಶ್ನೆಗಳನ್ನು ಚರ್ಚೆ ಮಾಡಿ, ಸಂಘಟನೆಯನ್ನು ವಿಸ್ತರಿಸಿ ಗಟ್ಟಿಗೊಳಿಸುವ ಮೂಲಕ ಮಾತ್ರವೇ ಈ ಸಮಸ್ಯೆಗಳನ್ನು ಇತ್ಯರ್ಥಪಡಿಸಲು ಸಾಧ್ಯವೆಂಬ ತೀರ್ಮಾನಕ್ಕೆ ಬರುವಂತಾಯಿತು.

ಉದ್ಘಾಟನೆ: ತ್ರಿಪುರ ರಾಜ್ಯದ ಎಡರಂಗ ಸರ್ಕಾರದ ಕೃಷಿ ಹಾಗೂ ಆರೋಗ್ಯ ಸಚಿವರಾದ ಕಾಮ್ರೇಡ್ ತಪನ್ ಚಕ್ರವರ್ತಿ ಸಮ್ಮೇಳನವನ್ನು ಉದ್ಘಾಟಿಸಿದರು. ಕೃಷಿ ಉತ್ಪನ್ನಗಳ ಆಮದುಗಳ ಮೇಲೆ ನಿರ್ಬಂಧ ವಿಧಿಸಬೇಕೆಂದು ಅವರು ಕೇಂದ್ರ ಸರ್ಕಾರವನ್ನು ಒತ್ತಾಯಿಸಿದರು. ವಾಜಪೇಯಿ ಅವರ ಸರ್ಕಾರ ಕೃಷಿ ಉತ್ಪನ್ನಗಳ ಆಮದುಗಳ ಮೇಲಿನ ನಿರ್ಬಂಧಗಳನ್ನು ತೆಗೆದುಹಾಕಿರುವುದೇ ದೇಶದ ರೈತರು ಮತ್ತು ಕೃಷಿ ಕೂಲಿಕಾರರು ಗಂಭೀರ ಸಮಸ್ಯೆಗಳನ್ನು ಎದುರಿಸುವಂತಾಗಿದೆ ಎಂದ ಅವರು ಮುಕ್ತ ಆಮದು ನೀತಿಯಿಂದಾಗಿ ದೇಶೀಯ ಕೃಷಿ ಉತ್ಪನ್ನಗಳಿಗೆ ಸೂಕ್ತ ಮಾರುಕಟ್ಟೆ ಸಿಗದಂತಾಗಿ ರೈತರು ಹಾನಿಗೊಳಗಾಗುತ್ತಿದ್ದಾರೆ ಎಂದು ಹೇಳಿದರು. ಪ್ರಗತಿಪರವಾದ ಭೂಸುಧಾರಣಾ ಕಾಯ್ದೆಯನ್ನು ಜಾರಿಗೆ ತಂದಿದ್ದರೆ ಇಂದು ಗ್ರಾಮೀಣ ಪ್ರದೇಶಗಳಲ್ಲಿ ಇಷ್ಟೊಂದು ನಿರುದ್ಯೋಗ, ಬಡತನ ಇರುತ್ತಿರಲಿಲ್ಲ ಎಂದು ಹೇಳಿದ ಅವರು ಕೇರಳ, ಪಶ್ಚಿಮ ಬಂಗಾಳ ಮತ್ತು ತ್ರಿಪುರ ರಾಜ್ಯಗಳಲ್ಲಿ ಅಧಿಕಾರಕ್ಕೆ ಬಂದ ಎಡರಂಗ ಸರ್ಕಾರಗಳು ಮಾತ್ರ ಪ್ರಗತಿಪರವಾದ ಭೂಸುಧಾರಣಾ ಕಾಯ್ದೆಯನ್ನು ರೂಪಿಸಿ ಕಟ್ಟುನಿಟ್ಟಾಗಿ ಜಾರಿಗೊಳಿಸಿದ್ದರಿಂದ ಭೂಹೀನ ಬಡವರಿಗೆ ಭೂಮಿ ಸಿಗುವಂತಾಗಿದೆ ಎಂದರು. ಕೇಂದ್ರದಲ್ಲಿ ಈಗ ಎಡಪಕ್ಷಗಳ ಬೆಂಬಲದೊಂದಿಗೆ ಅಧಿಕಾರಕ್ಕೆ ಬಂದಿರುವ ಸರ್ಕಾರವು ಉದ್ದೇಶಿತ ಗ್ರಾಮೀಣ ಉದ್ಯೋಗ ಭರವಸೆ ಕಾಯ್ದೆಯನ್ನೂ ಶೀಘ್ರವೇ ಜಾರಿಗೊಳಿಸಬೇಕೆಂದು ಒತ್ತಾಯಿಸಿದರು.



ವಿಚಾರಸಂಕಿರಣದಲ್ಲಿ ಸಂಘದ ಅಖಿಲ ಭಾರತ ಪ್ರ.ಕಾರ್ಯದರ್ಶಿ ಎ.ವಿಜಯರಾಘವನ್, ಜಿ.ಸಿ.ಬಯ್ಯಾರೆಡ್ಡಿ, ನಿತ್ಯಾನಂದಸ್ವಾಮಿ ಮತ್ತು ಸುನಂದ ಜಯರಾಂ

ಯಶಸ್ವಿ ಬಹಿರಂಗಸಭೆ ಹಾಗೂ ಒಂದು ಸರಳ ವಿವಾಹ

ಸಮ್ಮೇಳನದ ಸ್ವಾಗತ ಸಮಿತಿಯ ಅಧ್ಯಕ್ಷರೂ ಆದ ಜೆ.ಡಿ(ಎಸ್) ಶಾಸಕ ಸಿ.ಎಸ್.ಪುಟ್ಟರಾಜು ಸಮಾರಂಭದ ಅಧ್ಯಕ್ಷತೆ ವಹಿಸಿದ್ದರು. ಸಿಪಿಐ(ಎಂ) ಶಾಸಕ ಜಿ.ವಿ.ಶ್ರೀರಾಮರೆಡ್ಡಿ, ಜೆ.ಡಿ(ಎಸ್) ವಿಧಾನಪರಿಷತ್ ಸದಸ್ಯ ಕೆ.ಟಿ.ಶ್ರೀಕಂಠೇಗೌಡ, ಸಿಪಿಐ(ಎಂ) ರಾಜ್ಯ ಕಾರ್ಯದರ್ಶಿ ಜಿ.ಎನ್.ನಾಗರಾಜ ಮಾತನಾಡಿದರು. ಸಂಘದ ರಾಜ್ಯ ಅಧ್ಯಕ್ಷ ನಿತ್ಯಾನಂದಸ್ವಾಮಿ ಪ್ರಾಸ್ತಾವಿಕವಾಗಿ ಮಾತನಾಡಿದರು. ಸ್ವಾಗತ ಸಮಿತಿಯ ಪ್ರಧಾನ ಕಾರ್ಯದರ್ಶಿ ಎಂ.ಪುಟ್ಟಮಾದು ಸ್ವಾಗತಿಸಿ ಕೊನೆಯಲ್ಲಿ ವಂದಿಸಿದರು. ಇದೇ ಸಂದರ್ಭದಲ್ಲಿ ಸಮ್ಮೇಳನದ ಉದ್ಘಾಟನಾ ಸಮಾರಂಭದಲ್ಲಿ ಪಾಲ್ಗೊಳ್ಳಲು ಆಗಮಿಸಿದ್ದ ಸಾವಿರಾರು ಜನ ಕೃಷಿ ಕೂಲಿಕಾರರ ಸಮಕ್ಷಮದಲ್ಲಿ ನಗರದ ಯುವ ವಕೀಲ ಶ್ರೀನಿವಾಸ ಕುಮಾರ್ ಮತ್ತು ಪತ್ರಕರ್ತೆ ವೀಣಾ ಪರಸ್ಪರ ಹೂವಿನ ಹಾರಗಳನ್ನು ವಿನಿಮಯ ಮಾಡಿಕೊಳ್ಳುವ ಮೂಲಕ ಸರಳವಾಗಿ ವಿವಾಹವಾದರು. ಇದಕ್ಕೂ ಮೊದಲು ನಗರದ ಪ್ರಮುಖ ಬೀದಿಗಳಲ್ಲಿ ಕೃಷಿ ಕೂಲಿಕಾರರ ಬೃಹತ್ ಮೆರವಣಿಗೆಯನ್ನು ಹೊರಡಿಸಲಾಗಿತ್ತು. ರಾಜ್ಯದ ಕೆಲವು ಜಿಲ್ಲೆಗಳಿಂದ ಮತ್ತು ಮುಖ್ಯವಾಗಿ ಮಂಡ್ಯ ಜಿಲ್ಲೆಯ ಮಳವಳ್ಳಿ, ಮಂಡ್ಯ ಮತ್ತು ಮದ್ದೂರು ತಾಲೂಕುಗಳಿಂದ ಸಾವಿರಾರು ಜನ ಕೃಷಿ ಕೂಲಿಕಾರರು ಮೆರವಣಿಗೆಯಲ್ಲಿ ಭಾಗವಹಿಸಿದ್ದರು.

ಪ್ರತಿನಿಧಿಗಳ ಅಧಿವೇಶನ : ಸಂಘದ ರಾಜ್ಯ ಅಧ್ಯಕ್ಷ ನಿತ್ಯಾನಂದಸ್ವಾಮಿ ಧ್ವಜಾರೋಹಣ ಮಾಡುವುದರೊಂದಿಗೆ ಪ್ರತಿನಿಧಿಗಳ ಅಧಿವೇಶನ ಆರಂಭವಾಯಿತು. ಸಮ್ಮೇಳನದ ಕಲಾಪಗಳನ್ನು ನಡೆಸಲು ನಿತ್ಯಾನಂದಸ್ವಾಮಿ, ಕೆ.ಬಾಳಪ್ಪ ಮತ್ತು ಗಾಯತ್ರಿ ಅವರನ್ನು ಒಳಗೊಂಡ ಅಧ್ಯಕ್ಷೀಯ ಮಂಡಳಿಯನ್ನು ಆಯ್ಕೆ ಮಾಡಲಾಯಿತು. ಅಗಲಿದ ಸಂಗಾತಿಗಳಿಗೆ ಶ್ರದ್ಧಾಂಜಲಿ ಸಲ್ಲಿಸಿದ ಬಳಿಕ ಸಂಘದ ಪ್ರಧಾನ ಕಾರ್ಯದರ್ಶಿ ಚಂದ್ರಪ್ಪ ಹೊಸ್ಕೇರಾ ಪ್ರತಿನಿಧಿಗಳ ಚರ್ಚೆಗಾಗಿ ವರದಿಯೊಂದನ್ನು ಮಂಡಿಸಿದರು. ಗಂಗಾವತಿ, ಕುಷ್ಟಗಿ, ರಾಯಚೂರು, ದೇವದುರ್ಗ, ಸಿರುಗುಪ್ಪ, ಕುರುಗೋಡು, ಮಳವಳ್ಳಿ, ಮಂಡ್ಯ, ಮದ್ದೂರು, ಆನೇಕಲ್, ಬೆಂಗಳೂರು ದಕ್ಷಿಣ, ಉಡುಪಿ, ಹಾನಗಲ್ಲ, ಶಿಗ್ಗಾಂವ, ಸವಣೂರು, ಕುಂದಗೋಳ, ಸವದತ್ತಿ ಮತ್ತು ಅಫಜಲಪುರ ತಾಲ್ಲೂಕುಗಳಿಂದ ಆಗಮಿಸಿದ್ದ ಒಟ್ಟು 107 ಪ್ರತಿನಿಧಿಗಳು ಸಮ್ಮೇಳನದಲ್ಲಿ ಭಾಗವಹಿಸಿದ್ದರು. ಅವರಲ್ಲಿ 29 ಜನ ಮಹಿಳೆಯರು, ಕರ್ನಾಟಕ ಪ್ರಾಂತ ರೈತ ಸಂಘದಿಂದ 5 ಜನ, ಡಿವೈಎಫ್ಐನಿಂದ 5 ಜನ, ಜನವಾದಿ ಮಹಿಳಾ ಸಂಘದಿಂದ 3 ಜನ ಮತ್ತು ಎಸ್.ಎಫ್.ಐನಿಂದ ಇಬ್ಬರು ಸೌಹಾರ್ದ ಪ್ರತಿನಿಧಿಗಳು ಸಮ್ಮೇಳನದಲ್ಲಿ ಭಾಗವಹಿಸಿದ್ದರು.

ಪ್ರಧಾನ ಕಾರ್ಯದರ್ಶಿಯವರ ವರದಿಯ ಮೇಲೆ ನಡೆಸಲಾದ ಚರ್ಚೆಯಲ್ಲಿ 11 ಜನ ಮಹಿಳೆಯರು ಸೇರಿದಂತೆ ಒಟ್ಟು 42 ಜನ ಪ್ರತಿನಿಧಿಗಳು ಭಾಗವಹಿಸಿದ್ದರು. ಪ್ರತಿನಿಧಿಗಳು ಸೂಚಿಸಿದ ಕೆಲವು ತಿದ್ದುಪಡಿಗಳನ್ನು ಅಂಗೀಕರಿಸುವ ಮೂಲಕ ಪ್ರಧಾನ ಕಾರ್ಯದರ್ಶಿ ವರದಿಯನ್ನು ಸರ್ವಾನುಮತದಿಂದ ಅಂಗೀಕರಿಸ ಲಾಯಿತು.


ವಿಚಾರ ಸಂಕಿರಣ: ನವೆಂಬರ್ 18 ರ ಸಂಜೆ "ಕೃಷಿ ಬಿಕ್ಕಟ್ಟು ಮತ್ತು ರೈತ-ಕೂಲಿಕಾರರ ಸ್ಥಿತಿಗತಿ" ಎಂಬ ವಿಷಯವನ್ನು ಕುರಿತು ವಿಚಾರ ಸಂಕಿರಣವೊಂದನ್ನು ಏರ್ಪಡಿಸಲಾಗಿತ್ತು. ನಿತ್ಯಾನಂದಸ್ವಾಮಿ ಅಧ್ಯಕ್ಷತೆ ವಹಿಸಿದ್ದರು. ಅಖಿಲ ಭಾರತ ಕೃಷಿ ಕೂಲಿಕಾರರ ಸಂಘದ ಪ್ರಧಾನ ಕಾರ್ಯದರ್ಶಿಯೂ, ರಾಜ್ಯ ಸಭಾ ಸದಸ್ಯರೂ ಆಗಿರುವ ಕಾಮ್ರೇಡ್ ಎ.ವಿಜಯರಾಘವನ್ ಅವರು ವಿಚಾರಸಂಕಿರಣವನ್ನು ಉದ್ಘಾಟಿಸುತ್ತಾ ನಮ್ಮ ದೇಶದಲ್ಲಿ ಕೃಷಿ ಉತ್ಪನ್ನಗಳಿಗೆ ಸರಿಯಾದ ಬೆಲೆ ಸಿಗದಂತಾಗಿ ಸಾವಿರಾರು ರೈತರು ಆತ್ಮಹತ್ಯೆ ಮಾಡಿಕೊಂಡರೆ, ಇನ್ನೊಂದೆಡೆ ಊಟಕ್ಕಿಲ್ಲದೆ ಸಾವಿರಾರು ಜನ ಬಡವರು, ಮಕ್ಕಳು ಅಸುನೀಗಿದರು. ಇದು ಜಾಗತೀಕರಣದ ಫಲ ಎಂದು ಬಣ್ಣಿಸಿದ ಅವರು ಬಡರೈತರು, ಕೃಷಿ ಕೂಲಿಕಾರರು, ದಲಿತರು ಮತ್ತು ಇತರ ದುಡಿಯುವ ವರ್ಗದ ಜನರು ಒಂದಾಗಿ ಪರ್ಯಾಯ ಕೃಷಿ ನೀತಿಗಾಗಿ ಹೋರಾಡಬೇಕಿದೆ ಎಂದು ಹೇಳಿದರು. ಕರ್ನಾಟಕ ಪ್ರಾಂತ ರೈತ ಸಂಘದ ಪ್ರಧಾನ ಕಾರ್ಯದರ್ಶಿ ಜಿ.ಸಿ.ಬಯ್ಯಾರೆಡ್ಡಿ, ರಾಜ್ಯ ಮಹಿಳಾ ರೈತ ಸಂಘದ ಶ್ರೀಮತಿ ಸುನಂದ ಜಯರಾಂ, ಕರ್ನಾಟಕ ರಾಜ್ಯ ಸರಕಾರಿ ನೌಕರರ ಒಕ್ಕೂಟದ ಜಿಲ್ಲಾ ಅಧ್ಯಕ್ಷ ಚಿಕ್ಕಸ್ವಾಮಿ ಮತ್ತು ವಿಶ್ವೇಶ್ವರಯ್ಯ ಗ್ರಾಮೀಣ ಬ್ಯಾಂಕಿನ ನೌಕರರ ಸಂಘದ ಕಾರ್ಯದರ್ಶಿ ಎಂ.ನಾಗರಾಜೇಗೌಡ ವಿಚಾರ ಸಂಕಿರಣದಲ್ಲಿ ಭಾಗವಹಿಸಿ ಮಾತನಾಡಿದರು.



ಪ್ರತಿನಿಧಿಗಳು

ಮಹಿಳಾ ಕೃಷಿ ಕೂಲಿಕಾರರ ಪ್ರಶ್ನೆಗಳು : ನವೆಂಬರ್ 19 ರಂದು ಬೆಳಗ್ಗಿನ ಅವಧಿಯನ್ನು ಕೃಷಿ ಕೂಲಿಕಾರ ಮಹಿಳೆಯರ ಸಮಸ್ಯೆಗಳನ್ನು ಚರ್ಚಿಸಲು ಮೀಸಲಾಗಿಡಲಾಗಿತ್ತು. ಆಧುನಿಕ ಸಮಾಜದಲ್ಲೂ ಮುಂದುವರೆದಿರುವ ಲಿಂಗ ತಾರತಮ್ಯ, ಮಹಿಳೆಯರಿಗೆ ಪುರುಷರಿಂದಿಗೆ ಸಮಾನ ಕೂಲಿಯ ನಿರಾಕರಣೆ, ಮಹಿಳೆಯರ ಮೇಲೆ ಹೆಚ್ಚುತ್ತಿರುವ ದೌರ್ಜನ್ಯಗಳು ಮೊದಲಾದ ಪ್ರಶ್ನೆಗಳ ಮೇಲೆ ಚರ್ಚೆ ನಡೆಯಿತು. ಮಹಿಳಾ ಕೃಷಿ ಕೂಲಿಕಾರರ ಹಕ್ಕುಗಳ ರಕ್ಷಣೆಗಾಗಿ

ಪುಟ 12 ಕ್ಕೆ



ಕುರುಡು ಕಾಂಚಾಣ

ರಾಜಕೀಯದ ಕಂಪನೀಕರಣ - ರಿಲೈಯೆನ್ಸ್ ವಿವಾದ

ಜಿ.ಎಸ್.ಮಣಿ

ರಿಲೆಯನ್ಸ್ ಕಂಪನಿಯ ಅಂಬಾನಿ ಕುಟುಂಬದೊಳಗೆ ದಾಯಾದಿ ಕಲಹ. ಈ ಕುಟುಂಬದ ಅಣ್ಣತಮ್ಮಂದಿರಾದ ಮುಖೇಶ್ ಮತ್ತು ಅನಿಲ್ ಅಂಬಾನಿಗಳ ನಡುವೆ ಈ ಕಲಹ ಎದ್ದಿದೆ. ಈ ಸ್ವತ್ತಿನ ಸ್ವಾಮ್ಯದ ವಿಷಯದಲ್ಲಿಯೇ ಕಲಹವೆದ್ದಿದೆ. ಸ್ವಾಮ್ಯತ್ವದ ಬಗ್ಗೆ ಕಲಹ ಇದೆಯೆಂದು ಮುಖೇಶ್ ಅಂಬಾನಿ ಖಾಸಗಿ ಟಿವಿ ಚಾನೆಲ್‌ವೊಂದಕ್ಕೆ ಹೇಳುವುದರ ಜೊತೆಗೆ ವಿಷಯ ಸಾರ್ವಜನಿಕವಾಗಿಬಿಟ್ಟಿದೆ. ಬೂರ್ಜ್ವಾ ಮಾಧ್ಯಮಗಳು ಸುದ್ದಿ ಸುಂಟರಗಾಳಿಯನ್ನೇ ಹರಿಯಬಿಟ್ಟಿದ್ದಾರೆ. ಮುಖೇಶ್ ಮತ್ತು ಅನಿಲ್ ತಮ್ಮ ಕಂಪನಿಗಳ ನೌಕರರಿಗೆ ಇ-ಮೇಲ್ ಕಳುಹಿಸಿ ಆ ಮೂಲಕ ತಮ್ಮ ಹಿಡಿತ ಹೆಚ್ಚಿಸಿಕೊಳ್ಳುವ ಪ್ರಯತ್ನ ಮಾಡಿದ್ದಾರೆ. ಇದಲ್ಲದೆ ವಿವಿಧ ಬಂಡವಾಳಿಗರು, ರಾಜಕಾರಣಿಗಳು, ಗಣ್ಯರು ಈ ಕಲಹವನ್ನು ಪರಿಹರಿಸುವ ಪ್ರಯತ್ನ ಮಾಡಿದ / ಮಾಡುವ ಸುದ್ದಿಗಳೂ ಹರಿದಾಡತೊಡಗಿವೆ.

ಶೇರು ಮಾರುಕಟ್ಟೆಯೂ ಯದ್ವಾತದ್ವಾ ವರ್ತನೆ ಮಾಡಿದೆ. ವಿವಾದ/ ಕಲಹ ಮುಂದುವರಿಯುವಂತೆ ಕಾಣುತ್ತಿದೆ.



ಏನೇ ಇರಲಿ ಇಲ್ಲಿ ಮುಖ್ಯ ವಿಷಯವೆಂದರೆ ಈ 90000 ಕೋಟಿ ರೂಪಾಯಿಗಳ ಆಸ್ತಿ ಎಲ್ಲಿಂದ ಬಂತೆಂಬುದು. ಇದರ ದೊಡ್ಡ ಪಾಲು ಬ್ಯಾಂಕುಗಳು ಮತ್ತು ಹಣಕಾಸು ಸಂಸ್ಥೆಗಳಿಂದ ಬಂದಿದ್ದು ಎಂಬುದನ್ನು ತಿಳಿದುಕೊಂಡರೆ ಇದು ಜನರ ಆಸ್ತಿ ಎಂಬುದೂ ಗೊತ್ತಾಗುತ್ತದೆ. ಜನತೆಯ ಆಸ್ತಿಯನ್ನು ತಮ್ಮ ಖಾಸಗಿ ಆಸ್ತಿಯನ್ನಾಗಿಸಿ ತಮಗೆ ಬೇಕಾದಂತೆ ಕಿತ್ತಾಡುವುದು ಬಂಡವಾಳಿಗರ ನೈತಿಕ ರೀತಿ ಇರಬಹುದು. ಆದರೆ ಇಂತಹ ನೈತಿಕತೆಯಿಂದಾಗಿ ದುಡಿವ ಜನರ ಮೇಲೆ ಹಾಗೂ ದೇಶದ ಜನಸಾಮಾನ್ಯರ ಮೇಲೆ ದುಷ್ಪರಿಣಾಮ ಆಗುತ್ತದೆ ಎನ್ನುವುದೂ ಸುಳ್ಳಲ್ಲ.

ಆದ್ದರಿಂದಲೇ ಈ ಖಾಸಗಿ ಆಸ್ತಿಯ ರಾಜಕೀಯಕರರು/ ಕಂಪನೀಕರರು ಎಲ್ಲವೂ ಖಂಡಿತವಾಗಿಯೂ ಜನವಿರೋಧಿ. ಆದರೆ ಬಂಡವಾಳಶಾಹಿ ವ್ಯವಸ್ಥೆಯ ನ್ಯಾಯಕ್ಕೆ ಇದು ವಿರುದ್ಧವಾದುದಲ್ಲ. ಈ ಪದ್ಧತಿಯಲ್ಲಿ ಇಂತಹ ಕಲಹ ಬಹಳ ನ್ಯಾಯಯುತವಾದುದು.

ಸಹಸ್ರ ಸಹಸ್ರ ಜನಸಾಮಾನ್ಯರ ಜೀವನದ ಮೇಲೆ ದುಷ್ಪರಿಣಾಮ ಬೀರಿದರೇನು? ಬಂಡವಾಳಿಗರ ಕುಟುಂಬದೊಳಗಿನ ಕಲಹ ಅತ್ಯಂತ ನ್ಯಾಯಯುತವಾದದ್ದು? ಅಲ್ಲವೇ?

ಉದ್ಯೋಗ ಭರವಸೆ ಯೋಜನೆಗೆ ವಿಶ್ವ ಕಾರ್ಮಿಕ ಸಂಘಟನೆಯ ಬೆಂಬಲ

ಕೇಂದ್ರದ ಯುಪಿಎ ಸರ್ಕಾರದ ಮುಂದಾಳತ್ವ ವಹಿಸಿರುವ ಕಾಂಗ್ರೆಸ್‌ಗೆ ಕನಿಷ್ಠ ಸಾಮಾನ್ಯ ಕಾರ್ಯಕ್ರಮದಲ್ಲಿನ ಉದ್ಯೋಗ ಭರವಸೆಯ ಯೋಜನೆಯನ್ನು ಜಾರಿಗೊಳಿಸುವ ಮನಸ್ಸಿಲ್ಲದಿರಬಹುದು. ಆದರೆ ಎಡಪಕ್ಷಗಳ ಈ ಯೋಜನೆಗೆ ವಿಶ್ವ ಕಾರ್ಮಿಕ ಸಂಘಟನೆಯ ಮಹಾನಿರ್ದೇಶಕ ಜುವಾನ್ ಸೋಮಾರಿಯಾ ಬೆಂಬಲ ನೀಡಿದ್ದಾರೆ.

ಉದಾರೀಕರಣದ ಹಣಕಾಸು ಮಂತ್ರಿ ಪಿ.ಚಿದಂಬರಂ ಯೋಜನೆಗೆ ಹಣವೆಲ್ಲಿ ಎಂದು ತಮಗೆ ಮನಸ್ಸಿಲ್ಲದಿರುವುದನ್ನು ಆಗಲೇ ಆಡಿ ತೋರಿಸಿ ಆಗಿದೆ. ಆದರೆ ಈ ಯೋಜನೆ ಅತ್ಯಂತ ಪ್ರಗತಿಪರವಾದದ್ದು ಮತ್ತು ಮಾನವೀಯಾದದ್ದು ಎಂಬುದನ್ನು ವಿಶ್ವ ಕಾರ್ಮಿಕ ಸಂಸ್ಥೆಯ ಮುಖ್ಯಸ್ಥರು ಹೇಳಿದ್ದಾರೆ. ದಿ ಹಿಂದೂ ಪತ್ರಿಕೆಗೆ ನೀಡಿರುವ ಸಂದರ್ಶನವೊಂದರಲ್ಲಿ ಅವರು ಇದನ್ನು ಹೇಳಿದ್ದಾರೆ. ಬಡತನ ಮತ್ತು ಬೆಳವಣಿಗೆಯ ಬಗ್ಗೆ ಮಾತನಾಡುವಾಗ ಜಾಗತಿಕವಾಗಿ ಯಾವುದೇ ನೀತಿಗಳು ಉದ್ಯೋಗ ಸೃಷ್ಟಿ ಮಾಡುತ್ತಿಲ್ಲ' ಎಂಬುದನ್ನು ಗಮನಿಸಬೇಕು ಎಂದು ಅವರು ಹೇಳಿದ್ದಾರೆ. ಆರ್ಥಿಕ ನೀತಿಗಳ ಯಶಸ್ಸಿನ ಮಾಪಕಗಳನ್ನೇ ಬದಲಾಯಿಸಬೇಕು ಎಂದಿರುವ ಅವರು 'ಇಂದು ಆರ್ಥಿಕ ಬೆಳವಣಿಗೆ ಮುಖ್ಯವಾದದ್ದಾಗಿದೆ. ಆದರೆ ಭಾರತ ಮತ್ತು ಜಗತ್ತಿನ ಇತರ ದೇಶಗಳ ಅನುಭವವೇನೆಂದರೆ ಉದ್ಯೋಗ ಬೆಳವಣಿಗೆ ಇಲ್ಲದ ಆರ್ಥಿಕ ಬೆಳವಣಿಗೆ ಆಗುತ್ತಿರುವುದು. ಇಂತಹ ಬೆಳವಣಿಗೆಯಿಂದ ಪ್ರಯೋಜನವಿಲ್ಲ. ಆದ್ದರಿಂದ ಬೆಳವಣಿಗೆಯಿಂದ ಉದ್ಯೋಗ ಸೃಷ್ಟಿ ಮತ್ತು ಸಾಮಾಜಿಕ ರಕ್ಷಣೆ ಆಗುವಂತಾಗಬೇಕು' ಎಂದಿದ್ದಾರೆ ಆತ.

ಇಂತಹ ಉದ್ದೇಶಗಳನ್ನು ಇಟ್ಟುಕೊಂಡರೆ ಆ ದೇಶದ ನೀತಿಗಳು ಇಂತಹ ಉದ್ದೇಶಗಳನ್ನು ಸಾಧಿಸುವತ್ತ ಗಮನಹರಿಸಬೇಕು. ಕನಿಷ್ಠ ಸಾಮಾನ್ಯ ಕಾರ್ಯಕ್ರಮದ ಉದ್ಯೋಗ ಭರವಸೆ ಯೋಜನೆ ಅಗಾಧ ಸಾಧ್ಯತೆಗಳನ್ನು ಹೊಂದಿದೆ ಎಂದಿರುವ ಅವರು ಇದು ಭಾರತದ ಜನತೆಯ ಆಶಯಗಳ ಪ್ರತಿಫಲನವೂ ಆಗಿದೆ ಎಂದಿದ್ದಾರೆ.

ಇದಕ್ಕೆ ತಗಲುವ ಅಪಾರ ವೆಚ್ಚದ ಬಗ್ಗೆ ಕೇಳಿದಾಗ ಆತ ಇಂತಹ ಯೋಜನೆಗಳ ಅನುಷ್ಠಾನ ಸುಲಭದ ಕೆಲಸವೇನಲ್ಲ. ಆದರೆ ಇಂತಹ ಉದ್ದೇಶಗಳನ್ನು ಹೊಂದದೇ ಹೋದರೆ ಏನೂ ಆಗುವುದೇ ಇಲ್ಲ ಎಂದಿದ್ದಾರೆ.

ಬಹುಗಾತ್ರದ ಆರ್ಥಿಕದ ಅನುಕೂಲ ಭಾರತಕ್ಕಿದೆ. ಆದ್ದರಿಂದಲೇ ದೊಡ್ಡ ಪ್ರಮಾಣದಲ್ಲಿ ಉದ್ಯೋಗ ಸೃಷ್ಟಿ ಮಾಡುವಯೋಜನೆಯನ್ನು ಅದುಕೈಗೆತ್ತಿಕೊಳ್ಳಬಹುದು. ಅಂತರ್ರಾಷ್ಟ್ರೀಯ ಸೌಕರ್ಯಗಳಲ್ಲಿ ಕಾರ್ಮಿಕ ಶಕ್ತಿಯ ಬಳಕೆಯ ತಂತ್ರಜ್ಞಾನಗಳನ್ನೇ ಆರಿಸಿಕೊಳ್ಳುವುದರಿಂದ ಇದನ್ನು ಸುಲಭವಾಗಿ ಸಾಧಿಸಬಹುದು. ಈ ಮೂಲಕ ಜನರೂ ಇಂತಹ ಕೆಲಸಗಳಲ್ಲಿ ಕೌಶಲ್ಯವನ್ನು ಬೆಳೆಸಿಕೊಳ್ಳುವುದು ಸಾಧ್ಯವಾಗುತ್ತದೆ.

ನೋಡಿ ನಮ್ಮಲ್ಲಿ ಮೈಕ್ರೋಕ್ರೆಡಿಟ್ (ಸ್ವಸಹಾಯ ಗುಂಪುಗಳಿಗೆ, ನೀಡುವ ಅತಿಸಣ್ಣ ಸಾಲಗಳು) ಎಂತಹ ಉತ್ತಮ ರೀತಿಯಲ್ಲಿ ನಡೆಯುತ್ತಿದೆ ಎಂದು ಹೇಳುವುದಕ್ಕಿಂತ ಇಂತಹ ವಿಷಯಗಳಲ್ಲಿ ಸ್ಪಷ್ಟವಾದ ರಾಷ್ಟ್ರೀಯ ನೀತಿಯ ಅವಶ್ಯಕತೆ ಇದೆ ಎಂದವರು ಹೇಳಿದ್ದಾರೆ.

ಅವರ ಪ್ರಕಾರ ಭಾರತದಲ್ಲಿ ಅಗಾಧ ಸೃಜನಶೀಲತೆ ಇದೆ. ಆದರೆ ಉತ್ಪಾದಕತೆ ತೀರ ಕೆಳಮಟ್ಟದಲ್ಲಿದೆ.ಇದರಿಂದಾಗಿ ಇದು ಬರೀ ಹೊಟ್ಟೆಪಾಡಿಗಾಗಿನ ಕತೆಯಾಗಿ ಬಿಟ್ಟಿದೆ. ಇದಕ್ಕೆ ಒತ್ತಾಸೆ ನೀಡಿದರೆ - ಸ್ವಲ್ಪ ನಿರ್ವಹಣಾ ಜ್ಞಾನದ ಬೆಂಬಲ ನೀಡಿದರೆ ಸಾಮಾಜಿಕ ರಕ್ಷಣೆ, ಆರೋಗ್ಯ ಸೌಲಭ್ಯ, ಸಾಲಸೌಲಭ್ಯ ಮತ್ತು ಸ್ವಲ್ಪ ಮಾರುಕಟ್ಟೆ ಜ್ಞಾನ ನೀಡಿದರೆ ಉತ್ಪಾದಕತೆ ಹೆಚ್ಚುತ್ತದೆ.

ಜಾಗತೀಕರಣದ ಜೊತೆಗೇ ಸ್ಥಳೀಕರಣವೂ ಬೇಕು. ರಾಷ್ಟ್ರೀಯ ಆಡಳಿತ ಉತ್ತಮವಾಗಿದ್ದರಷ್ಟೇ ಸಾಲದು ಜಾಗತಿಕ ಆಡಳಿತವೂ ಉತ್ತಮವಾಗಿರಬೇಕು. ಯುಪಿಎ ಸರ್ಕಾರದ ನೇತೃತ್ವ ವಹಿಸಿರುವ ಕಾಂಗ್ರೆಸ್ಸಿಗರಿಗೆ ಜನಪರ ಅರ್ಥಶಾಸ್ತ್ರದ ಪಾಠದಂತಿದೆಯಲ್ಲವೇ ಇದು. ಕಾಂಗ್ರೆಸ್ಸಿಗರು ಇದನ್ನು ಓದಿದರೆ ತಾನೆ ಆ ಮಾತು?

ನಮ್ಮ ಆರೋಗ್ಯ ನಮ್ಮ ಕೈಯಲ್ಲಿ





ಆರೋಗ್ಯ ರಕ್ಷಣೆಯ ಆರ್ಥಿಕತೆ ಹಾಗೂ ರಾಜಕಾರಣ

ಆರ್ಥಿಕ ದೂರದೃಷ್ಟಿ ಇರುವುದು ತಪ್ಪಲ್ಲ, ಆದರೆ ಜನಸಂಪತ್ತನ್ನು ಜನೋಪಯೋಗಕ್ಕೆ ಉಪಯೋಗಿಸದೇ ಇರುವುದು ತಪ್ಪು. ಹಾಗೂ ಆರ್ಥಿಕ ರಕ್ಷಣೆಗೆ ಆಪತ್ತು ಉಂಟುಮಾಡಬಹುದಾಗಿದೆ. ಬಡದೇಶಗಳ ಜನಸಂಪನ್ಮೂಲಗಳನ್ನು ಸಮಾಜದ ಒಳಿತಿಗೆ ಉಪಯೋಗಿಸದೇ, ಕೇವಲ ಯುದ್ಧ ಮಾಡಲು ಸೈನ್ಯ ಶಕ್ತಿಯನ್ನು ವೃದ್ಧಿಸಲು ಉಪಯೋಗಿಸ ಲಾಗುತ್ತಿದೆ. ಇದು ತಿರುವುದು ಮುರುವಿನ ತೀರ್ಮಾನದಿಂದ ಉಂಟಾದ ಗೊಂದಲದ ಸಂಕೇತ. ಈ ಜಗತ್ತಿನಲ್ಲಿ ವೈದ್ಯ, ಶಾಲಾ ಶಿಕ್ಷಕ ಹಾಗೂ ದಾದಿ. ಈ ಸುಧಾರಣೆ ವಿರೋಧಿ ಆರ್ಥಿಕ ನೀತಿಯಿಂದ, ಸೇನಾಧಿಕಾರಿಗಳಾದಂತ ಹೆಚ್ಚು ಚಿಂತಿತರಾಗಿದ್ದಾರೆ. ಇದನ್ನು ಸರಿಪಡಿಸಲು ಆರ್ಥಿಕ ಮುಂದಾಲೋಚನೆಯನ್ನು ಖಂಡಿಸುವ ಬದಲು ಈ ಖರ್ಚು ವೆಚ್ಚದ ಪುನರ್ವಿಮರ್ಶೆ ಮಾಡುವುದು ಅಗತ್ಯ.


ಈ ಮುಖ್ಯ ವಿಷಯ ಸಾಮಾಜಿಕ ಜೀವನದ ಎರಡು ವಿಷಯಗಳಿಗೆ ಸಂಬಂಧಿಸಿದೆ, (ಒಂದು) ಸಕ್ರಿಯ ರಾಜಕಾರಣದ ಪಾತ್ರವನ್ನು ಗುರುತಿಸುವುದು; (ಎರಡು) ಆರ್ಥಿಕ ಚರ್ಚೆಯ ಮುಕ್ತಮನಸ್ಸಿನ ಪರಾಮರ್ಶೆ ಮಾಡುವುದು. ಸಂಪನ್ಮೂಲಗಳನ್ನು ಹಂಚುವಾಗ ಯುದ್ಧದ ಸಿದ್ಧತೆಗೆ, ಆರೋಗ್ಯ ಹಾಗೂ ಶಿಕ್ಷಣಕ್ಕಿಂತ ಹೆಚ್ಚಿನ ಮಹತ್ವ ಕೊಟ್ಟಿಲ್ಲ ಅದು ಅಪಾಯವನ್ನು ಉಂಟುಮಾಡಬಲ್ಲದೆ. ಅಪಾಯವನ್ನು ತಡೆಗಟ್ಟಲು ಪ್ರಬುದ್ಧ ಸಾರ್ವಜನಿಕ ಚರ್ಚೆ ಸಹಾಯಕವಾಗಬಲ್ಲದು. ಸಮರ್ಥ ಜೀವನ ನಡೆಸಲು ಪ್ರಮುಖ ಅಗತ್ಯತೆಗಳನ್ನು ಕಂಡು ಹಿಡಿಯ ಬೇಕಾಗುತ್ತದೆ. ಪ್ರಜಾಪ್ರಭುತ್ವದ ವಿಧಾನ ಲಭ್ಯವಿರುವುದರಿಂದ ಜನರ ಅಗತ್ಯತೆಗಳನ್ನು ಗೊತ್ತುಪಡಿಸಿ, ಸಂಪನ್ಮೂಲಗಳನ್ನು ಸರಿಯಾಗಿ ಬೆಳೆಸಲು ಮುಕ್ತಮಾಹಿತಿ ಹಾಗೂ ಚರ್ಚೆ ಅಗತ್ಯ. ಆರೋಗ್ಯ ರಕ್ಷಣೆ ಚರ್ಚೆಯಲ್ಲಿ ಹುಸಿ ಆರ್ಥಿಕತೆಯನ್ನು ಗುರುತಿಸಬಹುದಾಗಿದೆ. ಸಂಪನ್ಮೂಲಗಳ ಕೊರತೆಯಿಂದ ಆರೋಗ್ಯ ಹಾಗೂ ಶಿಕ್ಷಣದಂತಹ ಸಾಮಾಜಿಕ ಅಗತ್ಯತೆಗಳಿಗೆ ರಾಷ್ಟ್ರ ಶ್ರೀಮಂತವಾಗುವ ತನಕ ಬಂಡವಾಳವನ್ನು ಮುಂದೂಡಬೇಕು ಎಂದು ಹೇಳಲಾಗುತ್ತದೆ. ಆರೋಗ್ಯ ಹಾಗೂ ಶಿಕ್ಷಣ ಸೇವೆಗಳು ದುಡಿಮೆ ಆಧಾರಿತ ಹಾಗು ಹೋಲಿಸಿದಲ್ಲಿ ಕಡಿಮೆ ಖರ್ಚಿನದು.

ಬಡದೇಶದಲ್ಲಿ ಆರೋಗ್ಯ ಹಾಗೂ ಶಿಕ್ಷಣದ ಸೇವೆಗಳನ್ನು ಅಳವಡಿಸಲು ಸಂಪನ್ಮೂಲದ ಕೊರತೆ ಅಡ್ಡಿ ಬರಬೇಕಾಗಿಲ್ಲ.

ಉಪಸಂಹಾರ

ಒಳ್ಳೆಯ ಆರೋಗ್ಯವು ಒಳ್ಳೆ ಬೆಳವಣಿಗೆಗೆ ಪೂರಕವೇ ಎಂದು ಪ್ರಶ್ನಿಸುವವರು ಒಳ್ಳೇ ಆರೋಗ್ಯವು ಬೆಳವಣಿಗೆಯ ಅವಿಭಾಜ್ಯ ಅಂಗ ಎಂಬುದನ್ನು ನಿರ್ಲಕ್ಷಿಸುತ್ತಾರೆ. ಆರೋಗ್ಯ ರಕ್ಷಣೆಯನ್ನು ಸಾಧನವಾಗಿಸಿ ಪ್ರಗತಿ ಸಾಧಿಸಿ ಆರ್ಥಿಕ ಬೆಳವಣಿಗೆಗೆ ಅದು ಪೂರಕವೆಂದು ಸಾಧಿಸಬೇಕಾಗಿಲ್ಲ. ಸಂದರ್ಭ ಒಳ್ಳೆಯದಾಗಿದ್ದಲ್ಲಿ ಒಳ್ಳೇ ಆರೋಗ್ಯ ಹಾಗೂ ಆರ್ಥಿಕ ಸಂಪತ್ತು ಪರಸ್ಪರ ಪೂರಕ. ಆರೋಗ್ಯವಂತ ಮಾನವರು ಹೆಚ್ಚು ಗಳಿಸಬಲ್ಲರು, ಹೆಚ್ಚು ಗಳಿಸಿದವರು ಆರೋಗ್ಯ ಸೌಲಭ್ಯವನ್ನು ದೊರಕಿಸಿಕೊಳ್ಳಬಲಲ್ರು; ಒಳ್ಳೇ ಪೌಷ್ಟಿಕ ಆಹಾರವನ್ನು ಉಪಯೋಗಿಸಿಬಲ್ಲರು ಹಾಗೂ ಆರೋಗ್ಯಕರ ಜೀವನ ನಡೆಸಲು ಸ್ವತಂತ್ರರು.

ಆರೋಗ್ಯ ಸುಧಾರಿಸಲು ಪೂರಕ ಸಂದರ್ಭವಿಲ್ಲದಲ್ಲಿ ಸಾರ್ವಜನಿಕ ಆರೋಗ್ಯ ನೀತಿಯೂ



ಖ್ಯಾತ ಆರ್ಥಿಕ ಚಿಂತಕ ನೋಬಲ್ ಪ್ರಶಸ್ತಿ ವಿಜೇತ ಅಮರ್ತ್ಯಸೇನ್ ರವರ ವಿಚಾರಧಾರೆ ಕಳೆದ ಸಂಚಿಕೆಯಲ್ಲಿ ಓದಿದ್ದೀರಿ. ಉಳಿದ ಭಾಗ ಇಲ್ಲಿದೆ.

ಸೇರಿದ ಹಾಗೆ ಅನೇಕ ಕಾರ್ಯಗಳನ್ನು ಕೈಗಳ್ಳಬಹುದು. ಆರ್ಥಿಕ ಪ್ರಗತಿ ಹಾಗೂ ಆರೋಗ್ಯ ಸುಧಾರಣೆಗೆ ಸಂಬಂಧವಿದ್ದರೂ, ಈ ಸಂಬಂಧ ಕೆಲವು ಸಾರ್ವಜನಿಕ ನೀತಿಯಿಂದ ಸಡಿಲಗೊಳ್ಳುತ್ತಿದೆ. ಆರ್ಥಿಕ ಬೆಳವಣಿಗೆಯಿಂದ ಉತ್ಪನ್ನವಾದ ಹೆಚ್ಚಿನ ಆದಾಯವನ್ನು ಜನಾರೋಗ್ಯ ಸುಧಾರಿಸಲು ಹಾಗು ಬಡತನ ಕಡಿಮೆ ಮಾಡಲು ಹೇಗೆ ಉಪಯೋಗಿಸಲಾಗುವುದು ಎಂಬುದರ ಮೇಲೆ ಆರೋಗ್ಯ ಸುಧಾರಣೆಗ ಸಾಧ್ಯ. ಬೆಳವಣಿಗೆ ಆಧಾರಿತ ಆರೋಗ್ಯ ಸಾಧನೆ ಕೇವಲ ಆರ್ಥಿಕ ಬೆಳವಣಿಗೆಗಿಂತ ಹೆಚ್ಚು ಪ್ರಯೋಜನಕಾರಿ. ಆರ್ಥಿಕ ಪರಿಸ್ಥಿತಿ ಅನುಕೂಲಕರವಾಗಿಲ್ಲದಿದ್ದರೂ, ಪ್ರಾಥಮಿಕ ಜನ ಆರೋಗ್ಯಕ್ಕೆ ಲಭ್ಯವಿರುವ ಸಂಪನ್ಮೂಲಗಳನ್ನು ಬಳಕೆ ಮಾಡಿ ಸಾಮಾಜಿಕವಾಗಿ ಸುಧಾರಣೆಗಳನ್ನು ಮಾಡಲು ಉಪಯೋಗಿಸ ಬಹುದಾಗಿದೆ. ವೈದ್ಯಕೀಯ ಚಿಕಿತ್ಸೆ ಹಾಗೂ ಆರೋಗ್ಯ ರಕ್ಷಣೆಯನ್ನು ಜನರಿಗೆ ತಲುಪಿಸುವುದಕ್ಕೆ ಸಂಬಂಧಿಸಿದ ಖರ್ಚಿನ ಆರ್ಥಿಕ ವಿಷಯಗಳ ಬಗ್ಗೆ ಗಮನ ಹರಿಸುವುದು ಅತಿ ಮುಖ್ಯ. ಆರೋಗ್ಯ ರಕ್ಷಣೆ ಹೆಚ್ಚು ದುಡಿಮೆ ಆಧಾರಿತ ಪ್ರಕ್ರಿಯೆಯಾಗಿರುವುದರಿಂದ, ಕಡಿಮೆ ಕೂಲಿ ಆರ್ಥಿಕತೆಯವರು ಆರೋಗ್ಯದ ಬಗ್ಗೆ ಹೆಚ್ಚು ಏಕಾಗ್ರತೆ ವಹಿಸಬೇಕು.

ಕೊನೆಯದಾಗಿ ಆರ್ಥಿಕ ಸಂಪನ್ಮೂಲವನ್ನು ಸಾಮಾಜಿಕವಾಗಿ ಹಂಚುವಲ್ಲಿ ಸಕ್ರಿಯ ರಾಜಕಾರಣ ಹಾಗೂ ಪ್ರಬುದ್ಧ ಸಾರ್ವಜನಿಕ ಚರ್ಚೆಯು ಅದರ ಅವಿಭಾಜ್ಯ ಅಂಗ. ಆರ್ಥಿಕತೆಯ ಸಂರಕ್ಷಣೆಯು ವೈದ್ಯನ, ದಾದಿಯ ಹಾಗೂ ಶಾಲಾ ಶಿಕ್ಷಕನ ಬದಲು ಸೇನಾಧಿಕಾರಿ ದುಃಸ್ವಪ್ನವಾಗಲು ಸಾಧ್ಯ. ಸೇನಾಧಿಕಾರಿಗಿಂತ ವೈದ್ಯ, ಶಾಲಾಶಿಕ್ಷಕ ಅಥವಾ ನರ್ಸಿಗ ಸಂಪನ್ಮೂಲದ ಕೊರತೆ ಪರಿಗಣನೆಯಾದರೆ, ಆ ಸ್ಥಿತಿಗೆ ಕಾರಣರಾದ ಅಪವಾದಕ್ಕೆ ಸಾರ್ವಜನಿಕರಾದ ನಾವು ಹೊಣೆಗಾರರು. ಏಕೆಂದರೆ ಸೇನಾವಾದಿಗಳಿಗೆ ಆದ್ಯತೆಗಳನ್ನು ಆದಲು ಬದಲು ಮಾಡಲು ನಾವೇ ಕಾರಣರಾಗುತ್ತೇವೆ. ಪ್ರಬುದ್ಧ ಸಾರ್ವಜನಿಕ ಚರ್ಚೆ, ಜನರ ಭಾಗವಹಿಸುವಿಕೆಯಿಂದ ಮಾತ್ರ ನಮ್ಮ ಜೀವನಕ್ಕೆ ಹಾಗೂ ಸ್ವಾತಂತ್ರಕ್ಕೆ ರಕ್ಷಣೆ ನೀಡಬಲ್ಲ ಬದಲಾವಣೆ ತರಲು ಸಾಧ್ಯ. ಜನರು ಕೇವಲ ರೋಗಿಗಳಂತೆ ನಿಷ್ಕ್ರಿಯರಾಗದೆ ಬದಲಾವಣೆಯಲ್ಲಿ ಹರಿಕಾರ ರಾಗಬೇಕು. ನಿಷ್ಕ್ರಿಯೆಯ ಫಲ ರೋಗ ಹಾಗೂ ನಾವು.

ಸಾಮ್ರಾಜ್ಯಶಾಹಿ ಹಸ್ತಕ್ಷೇಪದ ಕರಿನೆರಳು

ಉಕ್ರೇನಿನಲ್ಲಿ ಚುನಾವಣೆ - ರಾಜಕೀಯ ಬಿಕ್ಕಟ್ಟು

ಶರತ್ ಚಂದ್ರ

ಉಕ್ರೇನಿನಲ್ಲಿ ಅಧ್ಯಕ್ಷೀಯ ಚುನಾವಣೆ ನಡೆದು, ಚುನಾವಣೆಗಳ ಫಲಿತಾಂಶ ಬರುತ್ತಿದ್ದಂತೆ ಚುನಾವಣಾ ಅಕ್ರಮಗಳ ಆಪಾದನೆಗಳೂ ಬಂದು ತೀವ್ರ ರಾಜಕೀಯ ಬಿಕ್ಕಟ್ಟು ಸೃಷ್ಟಿಯಾಗಿದೆ. ಮೊದಲ ನೋಟಕ್ಕೆ ಇದು ಆ ದೇಶದ (ಮತ್ತು ಸಾಮಾನ್ಯ ಎಲ್ಲಾ ಮಾಜಿ ಸೋವಿಯತ್ ಒಕ್ಕೂಟದ ದೇಶಗಳ) ಪಾರ್ಲಿಮೆಂಟರಿ ಪ್ರಜಾಪ್ರಭುತ್ವ ವ್ಯವಸ್ಥೆ ಬೇರೂರದಿರುವುದರ ಪರಿಣಾಮವಾಗಿ ಕಾಣುತ್ತದೆ. ಆಳದಲ್ಲಿ ನೋಡಿದರೆ ಸರ್ಬಿಯಾದಿಂದ ಆರಂಭವಾಗಿ ಇತ್ತೀಚೆಗೆ ಜಾರ್ಜಿಯಾದವರೆಗೆ ಮಾಜಿ ಸಮಾಜವಾದಿ ದೇಶಗಳ ಚುನಾವಣೆಗಳಲ್ಲಿ ಅಮೇರಿಕ ಮತ್ತು ಯುರೋಪಿಯನ್ ಸಾಮ್ರಾಜ್ಯಶಾಹಿ ಹಸ್ತಕ್ಷೇಪ ನಡೆಸುತ್ತಿರುವುದು ಸ್ಪಷ್ಟವಾಗಿ ಕಂಡುಬರುತ್ತದೆ. ಮಾಜಿ ಸೋವಿಯೆತ್ ಒಕ್ಕೂಟದ ದೇಶಗಳನ್ನು ತಮ್ಮ ಕಬಂಧ ಬಾಹುಬಂಧನದಲ್ಲಿ ಬಿಗಿದು ರಶ್ಯಾವನ್ನು ಅಂತರ್ರಾಷ್ಟ್ರೀಯವಾಗಿ ದುರ್ಬಲಗೊಳಿಸುವ ವ್ಯೂಹ ಸಹ ಇದು ಒಂದು ವ್ಯವಸ್ಥಿತ ಪ್ರಯತ್ನ. ಉಕ್ರೇನಿನ ಬಿಕ್ಕಟ್ಟು ಬಗ್ಗೆ ಒಂದು ನೋಟ.

ಸರ್ಬಿಯಾ, ಜಾರ್ಜಿಯಾದಲ್ಲಿ ...ನಾವಣೆಗಗಳ ಸಮಯದಲ್ಲಿ ನಡೆದ ನಾಟಕದ ...ನ್ನೊಂದು 'ಶೋ' ಉಕ್ರೇನಿನಲ್ಲಿ ನಡೆಯುತ್ತಿದೆ. ...ಯಾವುದೇ ದೇಶಗಳಲ್ಲಿ 'ಸಮಾಜವಾದಿ ಹಾದಿ' ...ಲ್ಲಿ ಸಾಗುವವರು ಅಧಿಕಾರದಲ್ಲಿ ಇಲ್ಲ. ...ಂಡವಾಳಶಾಹಿ ಹೆಚ್ಚು ಕಡಿಮೆ ಪುನಃ ...ಪಿತವಾಗಿದೆ. ಆದರೂ ಇಂತಹ ಹಲವು ...ೇಶಗಳಲ್ಲಿರುವ ಸರ್ಕಾರಗಳು, ನಾಯಕರು ...ಮೇರಿಕ-ಯುರೋಪಿಯನ್ ಸಾಮ್ರಾಜ್ಯಶಾಹಿ ...ತಾಸಕ್ತಿಗಳಿಗೆ ತಲೆಬಾಗದೆ ಸ್ವತಂತ್ರ ಹಾದಿ ...ಳಿಯುವವರು. ಇಂತಹ ನಾಯಕರನ್ನು ...ದಲಾಯಿಸಿ ತಮ್ಮ ತಾಳಕ್ಕೆ ಕುಣಿಯುವ ...ಯಕರುಗಳನ್ನು ಅಧಿಕಾರಕ್ಕೆ ತರುವುದು ...ಮ್ರಾಜ್ಯಶಾಹಿ ಉದ್ದೇಶ. ಇದನ್ನು ...ಂತಿಯುತವಾಗಿ ಚುನಾವಣೆಯಲ್ಲಿ ಹಣ ಮತ್ತು ...ಚಾರ/ ಪ್ರಕ್ಷೋಭೆಯ ಹೊಳೆ ಹರಿಸುವುದರ ...ೂಲಕ ಸಾಧಿಸಲಾಗುತ್ತಿದೆ. ಕೇಂದ್ರ ಮತ್ತು ...ರ್ವ ಯುರೋಪಿನ ಹಲವು ದೇಶಗಳಲ್ಲಿ ಈ ...ತ್ರ ಸಾಮ್ರಾಜ್ಯಶಾಹಿಗಳಿಗೆ ಫಲ ಕೊಟ್ಟಿದೆ. ...ತಹ ದೇಶಗಳನ್ನು ನಾಟೋ ಮತ್ತು ...ುರೋಪಿಯನ್ ಒಕ್ಕೂಟದ ರಾಜಕೀಯ-...ಲಿಟರಿ ಕಬಂಧ ಬಾಹುಗಳ ಬಳಸಿ ಸಹ ...ಲಾಗಿದೆ. ಆ ಮೂಲಕ ಮುಂದೆ ಯಾವುದೇ ...ದು ದೇಶದಲ್ಲಿ ಸರ್ಕಾರದ ನೀತಿಗಳ ವಿರುದ್ಧ ... ದಂಗೆ ಎದ್ದಿದ್ದರೆ, ಅದನ್ನು ಹತ್ತಿಕ್ಕುವುದು ...ಲಭವಾಗುತ್ತದೆ.

...ಕ್ರೇನಿನ ಆಂತರಿಕ ವಿಷಯ

ಇಂತಹುದೇ ತಂತ್ರ ಉಕ್ರೇನಿನಲ್ಲಿ ...ಸಲಾಗುತ್ತಿದ್ದು, ಅದೂ ಸಾಮ್ರಾಜ್ಯಶಾಹಿಗಳಿಗೆ ...ಪ್ರದವಾಗುವ ಸೂಚನೆಗಳು ಕಂಡುಬರುತ್ತಿವೆ. ...ಕ್ರೇನಿನಲ್ಲಿ ಅಧ್ಯಕ್ಷೀಯ ಚುನಾವಣೆಗಳು ನಡೆದವು ...ೀಚೆಗೆ ಎರಡು ಅವಧಿಗಳವರೆಗೆ ಅಧ್ಯಕ್ಷರಾಗಿದ್ದ ...ಚ್‌ಮಾ ಬೆಂಬಲಿಗ ಹಾಗೂ ಪ್ರಸ್ತುತ ಪ್ರಧಾನಿ ...ರ್ ಯಸು ಸೋವಿತ್ ಆಳುವ ಪಕ್ಷದ ...ರ್ಥಿ. ಮೊದಲ ಸುತ್ತಿನಲ್ಲಿ ಇಬ್ಬರಿಗೂ ...ಮಾರು ಶೇಕಡಾ 40 ಮತ ಬಂದಿದ್ದರಿಂದ, ...ಡನೇ ಸುತ್ತಿನ ಮತದಾನ ಅಗತ್ಯವಾಯಿತು. ...ಕ್ರೇನ್ ಸಂವಿಧಾನ ಪ್ರಕಾರ ಶೇಕಡಾ 50 ಕ್ಕಿಂತ ...ಚ್ಚು ಮತಗಳಿಸಿದರೆ ಮಾತ್ರ ಅಧ್ಯಕ್ಷನಾಗುತ್ತಾನೆ) ...ಡನೇ ಸುತ್ತಿನ ಮತದಾನದಲ್ಲಿ ಚುನಾವಣಾ ...ಮಿಷನ್ ಪ್ರಧಾನಿ ಯಸೊ ಸೋವಿತ್‌ರನ್ನು ...ಯಿ ಎಂದು ಘೋಷಿಸಿತು. ಆದರೆ ಇದನ್ನು ...ರೋಧಪಕ್ಷ ಮತ್ತು ಅವರ ಅಭ್ಯರ್ಥಿ ಒಪ್ಪಲಿಲ್ಲ. ...ನಾವಣಾ ಪ್ರಕ್ರಿಯೆಯ ಅಕ್ರಮ ಆರೋಪಿಸಿ ...ಧ್ಧ ಚಳುವಳಿ ಹರಿಯಬಿಟ್ಟರು. ಚುನಾವಣಾ ...ಮಿಷನ್ ಮುಂದೆ ನಿಯಮಗಳ ಪ್ರಕಾರ ದೂರು ...ಸಿ, ಅದರ ತೀರ್ಪಿಗೆ ಕಾಯುವ ಮೊದಲೇ ...ದಿಗಿಳಿದದ್ದು ಮಾತ್ರವಲ್ಲ, ಅದನ್ನು ...ತರ್ರಾಷ್ಟ್ರೀಯಗೊಳಿಸಿದರು.


...ಚುನಾವಣೆಗಳ ಫಲಿತಾಂಶ ಮತ್ತು ಅದರ ಬಗ್ಗೆ ...ಾದ ಉಕ್ರೇನಿನ ಆಂತರಿಕ ವಿಷಯ. ಚುನಾವಣೆಯಲ್ಲಿ ಅಕ್ರಮಗಳಾಗಿದ್ದರೂ, ಅದನ್ನು ಹೇಗೆ ನಿರ್ವಹಿಸಬೇಕೆಂಬುದು ಆ ದೇಶದ ಕಾನೂನು-ಸಂವಿಧಾನದ ಪ್ರಕಾರ ನಿರ್ಧಾರವಾಗಬೇಕು. ಆದರೆ ಇದೆಲ್ಲದರ ಮೊದಲೇ, ಅಮೇರಿಕಾದ ಸರ್ಕಾರ ಮತ್ತು ಅಧ್ಯಕ್ಷ ಬುಶ್ ಈ ಚುನಾವಣೆ ಫಲಿತಾಂಶವನ್ನು ಒಪ್ಪಲು ಸಾಧ್ಯವಿಲ್ಲ ಎಂದು ಘೋಷಿಸಿಯೇಬಿಟ್ಟರು. ವಿರೋಧಪಕ್ಷದ ಅಭ್ಯರ್ಥಿ ಸಹ ಮರು-ಮತದಾನ ಆಗಬೇಕೆಂದು ಒತ್ತಾಯಿಸಿ, ಅಂತಹ ನಿರ್ಧಾರ ಕೈಗೊಳ್ಳುವವರೆಗೆ ರಾಜಧಾನಿ ಕೀವ್‌ನ ಕೇಂದ್ರಿಯ ಸ್ವಾತಂತ್ರ್ಯ ಚೌಕ'ದಲ್ಲಿ ಧರಣಿ ಹೂಡುವುದಾಗಿ ಘೋಷಿಸಿದರು. ವಿರೋಧಿ ನಾಯಕ ಯುಶ್ ಚೆಂಕೊ ಇಂತಹ ಸಂದರ್ಭಕ್ಕೆ ಸಾಕಷ್ಟು ಪೂರ್ವಯೋಜನೆ ಮಾಡಿದ ಹಾಗಿತ್ತು. ಅವರ ಬೆಂಬಲಿಗರಿಗೆ ಆಹಾರ, ಬೆಡ್ ವೈದ್ಯಕೀಯ ಸೇವೆಗೆ ಹಲವು ದಿನಗಳ ಅವಧಿಗೆ ವ್ಯವಸ್ಥೆ ಮಾಡಲಾಗಿತ್ತು. ಅಧ್ಯಕ್ಷ ಆಯ್ಕೆಯ ವಿಜಯದ ಉತ್ಸವಕ್ಕೆಂದು ಬಂದಿದ್ದ ಯುಶ್ ಚೆಂಕೊ ಬೆಂಬಲಿಗರು, ಅವರ ಸೋಲನ್ನು ಒಪ್ಪದೆ ಪಟ್ಟುಹಿಡಿದಿದ್ದಾರೆ ಎಂದು ವಿರೋಧಿ ವಕ್ತಾರರ ಅಂಬೋಣ. ಆದರೆ 'ಉತ್ಸವ'ಕ್ಕೆಂದು ಬಂದವರು ಹಲವು ದಿನಗಳ ಅವಧಿಯ 'ಧರಣಿ'ಗೆ ಸಿದ್ದರಾಗಿ ಬಂದದ್ದು ಕಾಣುತ್ತದೆ.

ವಿದೇಶಿ ಹಸ್ತಕ್ಷೇಪ

ಚುನಾವಣೆಯ ಮರುದಿನದಿಂದಲೇ ಅಮೇರಿಕದಷ್ಟು ನೇರವಾಗಿ, ದರ್ಪದಿಂದ ಅಲ್ಲದಿದ್ದರೂ ಯುರೋಪಿಯನ್ ಒಕ್ಕೂಟದ ಕಡೆಯಿಂದಲೂ ಉಕ್ರೇನಿನ ಚುನಾವಣೆ ಫಲಿತಾಂಶದ ಬಗ್ಗೆ ಹಸ್ತಕ್ಷೇಪ ಆರಂಭವಾಯಿತು. ಅಧ್ಯಕ್ಷ ಕುಚಿಮಾ ಮತ್ತು ಸರ್ಕಾರ ಸೈನ್ಯ-ಪೊಟಿನ್ ಬಳಸಿ ಚುನಾವಣಾ ಫಲಿತಾಂಶವನ್ನು ಜಾರಿ ಮಾಡಬಾರದು ಎಂದು ಬಹಿರಂಗವಾಗಿ ಹೇಳಿದರು. ಯುರೋಪಿಯನ್ ಕಮಿಷನ್ ನಾಯಕ ಮತ್ತು ಸಾಮ್ರಾಜ್ಯಶಾಹಿಯ ನಂಬಿಕಸ್ತ ಲೇಕ್ ವಲೆಸಾ(ಈಗ ಮೂಲೆಗುಂಪಾಗಿರುವ ಪೋಲೆಂಡಿನ ಮಾಜಿ ಅಧ್ಯಕ್ಷ) ರನ್ನು ಮಧ್ಯಸ್ತಿಕೆಗೆ ಕಳಿಸಲಾಯಿತು. ಎರಡನೇ ಸುತ್ತಿನ ಮತದಾನ ಮಾಡುವುದೇ ಉತ್ತಮ ಪರಿಹಾರ ಎಂದು ಉಕ್ರೇನಿನ ಅಧ್ಯಕ್ಷರಿಗೆ ಹೇಳಲಾಯಿತು. ಈ ನಡುವೆ ವಿರೋಧಿ ಬೆಂಬಲಿಗರು ಪಾರ್ಲಿಮೆಂಟು ಸುತ್ತುವರಿದು ಹಿಂಸಾತ್ಮಕ ದಾಳಿ ಆರಂಭಿಸಿದ್ದರು. ಪಾರ್ಲಿಮೆಂಟು ಮತ್ತು ಸುಪ್ರೀಂಕೋರ್ಟ್ ಮರು - ಮತದಾನದ ನಿರ್ಧಾರಕೈಗೊಳ್ಳುವವರೆಗೆ 'ಸ್ವಾತಂತ್ರ್ಯಚೌಕ'ದಲ್ಲಿ ಧರಣಿ ಹೂಡಿ ರಾಜಧಾನಿಯ ಜೀವನ ಸ್ತಬ್ದಗೊಳಿಸಿದರು. ಸಾವಿರಾರು ವಿರೋಧಿ ಬೆಂಬಲಿಗರು ಕದಲುವುದಿಲ್ಲ ಎಂದು ಘೋಷಿಸಲಾಗಿದೆ. ಈ ನಡುವೆ ಅಧ್ಯಕ್ಷ ಕುಚ್‌ಮಾ ರಶ್ಯಾಕ್ಕೆ ತೆರಳಿ ಅಧ್ಯಕ್ಷ ಪುಟಿನ್ ಜತೆ ಮಾತುಕತೆ ನಡೆಸಿದ್ದು, ಉಕ್ರೇನಿನ ಚುನಾವಣೆ ಪೂರ್ತಿ ಅಂತರ್ರಾಷ್ಟ್ರೀಕರಿಸಲ್ಪಟ್ಟಿದೆ.

ಎಕ್ಸಿಟ್ ಪೋಲ್ ಥರ ಜನ ಓಟು ಮಾಡಬೇಕೆ?

ವಿರೋಧಿಗಳು ಚುನಾವಣೆ ಬಗ್ಗೆ ಎತ್ತುವ ಆಕ್ಷೇಪವಾದರೂ ಏನು? ವಿರೋಧಿ ಅಭ್ಯರ್ಥಿಗೆ ಎಕ್ಸಿಟ್ ಅಭಿಪ್ರಾಯ ಸಂಗ್ರಹ (ಮತ ನೀಡಿ ಹೊರಬರುತ್ತಿರುವ ಮತದಾರನು ಯಾರಿಗೆ ಮತ ಹಾಕಿದ್ದಿ? ಎಂದು ಕೇಳಿ ಸಂಗ್ರಹಿಸುವ ಮಾಹಿತಿ)ದಲ್ಲಿ ಬಹುಮತ (ಶೇಕಡಾ 54) ಬಂದಿದೆಯಂತೆ! ಆದ್ದರಿಂದ ಚುನಾವಣಾ ಅಕ್ರಮಗಳು ನಡೆದಿವೆಯಂತೆ. ಈ ಅಭಿಪ್ರಾಯ ಸಂಗ್ರಹಕ್ಕೂ ನಿಜವಾದ ಮತದಾನದ ಫಲಿತಾಂಶಕ್ಕೂ ವ್ಯತ್ಯಾಸವಾಗುವುದು ಸರ್ವೇಸಾಮಾನ್ಯ. ಇತ್ತೀಚಿನ ಅಮೆರಿಕದ ಅಧ್ಯಕ್ಷೀಯ ಚುನಾವಣೆಯಲ್ಲಿ ಅಭಿಪ್ರಾಯ ಸಂಗ್ರಹದಲ್ಲಿ ಜಾರ್ಜ್ ಬುಶ್ ಸೋತಿದ್ದು, ಜಾನ್ ಕೆರ್ರಿ ಗೆದ್ದಿದ್ದ! ಅಲ್ಲದೆ ಈ ಅಭಿಪ್ರಾಯ ಸಂಗ್ರಹ ಮಾಡಿದವರು ಯಾರು? ಈ ಸಮೀಕ್ಷೆಗಳ ಹಿಂದೆ ಜಾರ್ಜ್ ಸೋರೋಸ್ ಎಂಬ ಅಮೆರಿಕನ್ ಕೋಟ್ಯಾಧೀಶನ ಹಣದಿಂದ ನಡೆಯುವ 'ಮುಕ್ತ ಸಮಾಜ' 'ಪ್ರಜಾಪ್ರಭುತ್ವ' ಪೌಂಡೇಶನ್‌ಗಳು ಇವೆ. ಪಶ್ಚಿಮ ಯುರೋಪಿನ ಕೆಲವು ರಾಯಭಾರ ಕಛೇರಿಗಳು ಈ ಪೌಂಡೇಷನ್‌ಗಳಿಗೆ ದೊಡ್ಡ ಪ್ರಮಾಣದಲ್ಲಿ ಧನ ಸಹಾಯ ಮಾಡಿವೆ. ಈ ಅಭಿಪ್ರಾಯ ಸಂಗ್ರಹಗಳ ಫಲಿತಾಂಶವನ್ನು ಪಾಶ್ಚಿಮಾತ್ಯ ಮಾಧ್ಯಮಗಳು ಮತ್ತು ವಿರೋಧಿ - ಅಭ್ಯರ್ಥಿ ಪರ ಮಾಧ್ಯಮಗಳು ದೊಡ್ಡದಾಗಿ ಬಿತ್ತರಿಸಿ ಚುನಾವಣೆ ಮೇಲೆ ಪರಿಣಾಮ ಬೀರಲು ಪ್ರಯತ್ನಿಸಿದವು. ಚುನಾವಣೆ ನಂತರವೂ ಪಾಶ್ಚಿಮಾತ್ಯ ಮಾಧ್ಯಮಗಳು ರಾಜಧಾನಿಯ ಮುಖ್ಯಚೌಕದಲ್ಲಿ ನೆರೆದಿರುವ ಜನರನ್ನು ದಿನವಿಡೀ ತೋರಿಸುತ್ತಾ, ಇಡೀ ದೇಶವೇ ವಿರೋಧಿ ಅಭ್ಯರ್ಥಿಯನ್ನು ಬೆಂಬಲಿಸುತ್ತಿದೆ. ಇದು 'ಜನತಾ ಶಕ್ತಿ' ಮತ್ತು 'ಸರ್ಕಾರಿ ಶಕ್ತಿ' ಯ ನಡುವೆ



ಹೋರಾಟ. ಇದರಷ್ಟು ದೊಡ್ಡ ಸುಳ್ಳು ಇನ್ನೊಂದಿರಲಿಕ್ಕಿಲ್ಲ. ಮೊದಲ ಸುತ್ತಿನ ಚುನಾವಣೆ ಫಲಿತಾಂಶ (ಈ ಬಗ್ಗೆ ಅಂತಹ ಗದ್ದಲವೇನೂ ಆಗಿಲ್ಲ) ದ ಪ್ರಕಾರವೇ ಇಬ್ಬರಿಗೂ ಸಮಾನ ಮತದಾನ ಬಂದಿತ್ತು. ಇಬ್ಬರಿಗೂ ಬಹುಮತ ಬಂದಿರಲಿಲ್ಲ. ಇದಲ್ಲದೆ ಜಾರ್ಜಿಯಾದಲ್ಲೂ, ಸರ್ಬಿಯಾದಲ್ಲೂ ಇದೇ 'ಚುನಾವಣಾ ಅಕ್ರಮ'ಗಳ ಆಪಾದನೆ 'ಜನತಾ ಶಕ್ತಿ' ಯ ಪ್ರದರ್ಶನ, ಕೋಟ್ಯಾಧೀಶ ಸೋರೋಸ್ ದುಡ್ಡಿನ ಸಂಘಟನೆಗಳ ಪಾತ್ರ - ಸಾಮಾನ್ಯ ಸಂಗತಿ ಆಗಿತ್ತು ಎಂಬುದು ಏನು ಹೇಳುತ್ತದೆ?

ಉಕ್ರೇನ್ ಒಡೆದು ಹೋಗುವುದೇ?

ನಿಜ ಸಂಗತಿ ಪಾಶ್ಚಿಮಾತ್ಯ ಮಾಧ್ಯಮಗಳು ಹೇಳುವಂತೆ ಸರಳವಾಗಿಲ್ಲ. ಆಳುವ ಪಕ್ಷದ ಅಭ್ಯರ್ಥಿಗೆ ಪೂರ್ವ ಉಕ್ರೇನಿನಲ್ಲಿ ಭಾರಿ ಬೆಂಬಲ ಇದೆ. ವಿರೋಧಿ ಅಭ್ಯರ್ಥಿಗೆ ಪಶ್ಚಿಮ ಭಾಗದಲ್ಲಿ ಹೆಚ್ಚಿನ ಬೆಂಬಲ ಇದೆ. ಉಕ್ರೇನಿನ ಎರಡು ಭಾಗಗಳಲ್ಲಿ ಜನಾಭಿಪ್ರಾಯದಲ್ಲಿ ಬಹಳ ವ್ಯತ್ಯಾಸ ಇದೆ. ಪೂರ್ವ ಉಕ್ರೇನ್ ಕೈಗಾರಿಕ್ಕತ ಮತ್ತು ರಶ್ಯನ್ ಮಾತನಾಡುವ ಪ್ರದೇಶ.ಹಿಂದೆ ಸೋವಿಯತ್ ಒಕ್ಕೂಟ ಮತ್ತು ಈಗ ನೆರೆಯ ರಶ್ಯಾದ ಜತೆ ನಿಕಟ ಆರ್ಥಿಕ ಸಂಬಂಧ ಇರುವ ಪ್ರದೇಶ. ರಶ್ಯಾದ ಜತೆ ನಿಕಟ ಆರ್ಥಿಕ - ರಾಜಕೀಯ ಸಂಬಂಧ ಹೊಂದುವುದನ್ನು ಬಯಸುತ್ತಾರೆ. ಕಳೆದ ವರ್ಷ ಉಕ್ರೇನಿನ ಪ್ರಸ್ತುತ ಅಧ್ಯಕ್ಷ ಕುಚ್‌ಮಾ ರಶ್ಯಾ, ಬೈಲೋರಶ್ಯಾ ಮತ್ತಿತರ ಮಾಜಿ ಸೋವಿಯತ್ ಒಕ್ಕೂಟದ ದೇಶಗಳೊಂದಿಗೆ ಆರ್ಥಿಕ-ಪ್ರಾದೇಶಿಕ ರಾಜಕೀಯ - ಮಿಲಿಟರಿ ಕೂಟ ರಚಿಸುವ ಒಪ್ಪಂದಕ್ಕೆ ಭಾರಿ ಬೆಂಬಲ ಇದೆ - ಈ ಪ್ರದೇಶದಲ್ಲಿ. ಪಶ್ಚಿಮ ಉಕ್ರೇನ್ ಹೆಚ್ಚು ಕೃಷಿ - ಆಧಾರಿತ ಪ್ರದೇಶ. 1945 ಮೊದಲು ರಾಜಕೀಯವಾಗಿ ಪ್ರತ್ಯೇಕವಾಗಿದ್ದ ಪ್ರದೇಶ. ಇಲ್ಲಿ ಉಕ್ರೇನಿಯನ್ ರಾಷ್ಟ್ರೀಯ ಭಾವನೆ ಪ್ರಬಲವಾಗಿದೆ. ಜನಾಂಗೀಯ - ಸಾಂಸ್ಕೃತಿಕವಾಗಿ ಯುರೋಪಿನ ಜತೆ ಗುರುತಿಸಿಕೊಳ್ಳುತ್ತಾರೆ ಜನ ಇಲ್ಲಿ. ಯುರೋಪಿನ್ ಒಕ್ಕೂಟಕ್ಕೆ ಸೇರಿದರೆ ದೇಶಕ್ಕೆ ಒಳ್ಳೇದು ಜನಾಭಿಪ್ರಾಯ ಹೆಚ್ಚು ವ್ಯಾಪಕವಾಗಿದೆ. ಈಗ ಉಕ್ರೇನ್‌ನಲ್ಲಿ ಕಂಡುಬರುತ್ತಿರುವ ಕಾದಾಟ-ಹೋಯ್ದಾಟಗಳ ನಿಜವಾದ ಆರ್ಥಿಕ-ಸಾಮಾಜಿಕ-ರಾಜಕೀಯ ಮೂಲ ಇಲ್ಲಿದೆ. ಹೊರಗಿನ ಶಕ್ತಿಗಳ ಮಧ್ಯಪ್ರವೇಶ, ಹಸ್ತಕ್ಷೇಪ ದೇಶವನ್ನು ಒಡೆಯಬಹುದು. ಉಕ್ರೇನಿನ ಜನತೆಯ ಹಿತಾಸಕ್ತಿಗಳಿಗೆ ಪರವಾದ ಪರಿಹಾರವನ್ನು ತಡೆಹಿಡಿಯಬಹುದು.

ಮುಂದೇನು?

ಪಾರ್ಲಿಮೆಂಟು ಪ್ರಧಾನಿ ಸರ್ಕಾರ ವಜಾ ಮಾಡಿದ್ದು, ಸುಪ್ರೀಂಕೋರ್ಟ್ ಸಹ ಮರು-ಮತದಾನದ ಬಗ್ಗೆ ತೀರ್ಪು ಕೊಟ್ಟಿದೆ. ಈ ನಡುವೆ ಅಧ್ಯಕ್ಷ ಕುಚ್‌ಮಾ ಇಡೀ ಚುನಾವಣೆಯನ್ನು ರದ್ದು ಮಾಡಿ, ಈ ಇಬ್ಬರೂ ಅಭ್ಯರ್ಥಿಗಳು ಇಲ್ಲದೆ ಪುನಃ ಚುನಾವಣೆ ನಡೆಸುವ ಪ್ರಸ್ತಾವ ಮಾಡಿದ್ದಾರೆ. ಉಕ್ರೇನಿ ಸಂವಿಧಾನದಲ್ಲಿ ಅಧ್ಯಕ್ಷರಿಗೆ ಭಾರಿ ಅಧಿಕಾರಿಗಳಿದ್ದು, ಇದು ಆದರೂ ಆಗಬಹುದು. ಆದರೆ ಅಮೆರಿಕ-ಯುರೋಪಿಯನ್ ಸಾಮ್ರಾಜ್ಯಶಾಹಿಯ ಆರ್ಥಿಕ-ರಾಜಕೀಯ-ಮಿಲಿಟರಿ ಒತ್ತಡ ಪಾರ್ಲಿಮೆಂಟು, ಸುಪ್ರೀಂಕೋರ್ಟ್‌ಗಳ ನಿರ್ಧಾರದ ಹಿಂದೆ ಕೆಲಸ ಮಾಡಿದೆ. ಉಕ್ರೇನನ್ನು ಯುರೋಪಿಯನ್ ಒಕ್ಕೂಟ ಮತ್ತು ನಾಟೋ ಕೂಟದ ಕಬಂಧ ಬಾಹುಗಳಲ್ಲಿ ಬಂಧಿಸಿ, ರಶ್ಯಾ ಮತ್ತು ಮಾಜಿ ಸೋವಿಯತ್ ಒಕ್ಕೂಟದ ದೇಶಗಳ ಆರ್ಥಿಕ-ರಾಜಕೀಯ- ಮಿಲಿಟರಿ ಕೂಟ ಆಗುವುದನ್ನು ತಡೆಯುವುದು ಸಾಮ್ರಾಜ್ಯಶಾಹಿಗಳ ಉದ್ದೇಶ. ಉಕ್ರೇನನ್ನು ಹೇಗಾದರೂ ಗೆದ್ದುಕೊಂಡರೆ ಉಳಿದ ದೇಶಗಳಲ್ಲಿ ಇದೇ ರೀತಿಯ 'ರಾಜಕೀಯ ಬದಲಾವಣೆ' ತರುವುದು ಸಾಧ್ಯವಾಗುತ್ತದೆ ಎಂದು ಅವರ ಲೆಕ್ಕಾಚಾರ. ರಶ್ಯಾ ಸಹ ಸುಮ್ಮನೆ ಕುಳಿತಿಲ್ಲ. ಪ್ರತಿ-ತಂತ್ರಗಳನ್ನು ಹೂಡುತ್ತಿದೆ.

ಇವೆಲ್ಲ ತಂತ್ರಗಳ ಮಧ್ಯೆ ಜನಗಳ ಹಿತಾಸಕ್ತಿಗೆ ಏನಾಗಿದೆ? ಈ ಎರಡೂ ಗುಂಪುಗಳು ಸೋವಿಯತ್ ಒಕ್ಕೂಟ ವಿಘಟನೆ ನಂತರ ಸಾರ್ವಜನಿಕ ಆಸ್ತಿಯ ಖಾಸಗೀಕರಣದಿಂದ ಹುಟ್ಟಿದ ಬಂಡವಾಳಶಾಹಿಯನ್ನು ಪ್ರತಿನಿಧಿಸುತ್ತವೆ. ಒಂದು ಯುರೋಪಿಯನ್ ಕೂಟ, ಇನ್ನೊಂದು ರಶ್ಯನ್ ಕೂಟಕ್ಕೆ ಹೋಗಬಯಸುತ್ತವೆ. ಜನರ ನಿಜವಾದ ಹಿತಾಸಕ್ತಿಗಳನ್ನು ಪ್ರತಿನಿಧಿಸುವ ಶಕ್ತಿಗಳು ರಾಜಕೀಯವಾಗಿ ಪ್ರಬಲವಾಗಿಲ್ಲ. ಯುರೋಪಿಯನ್ ಕೂಟಕ್ಕೆ ಉಕ್ರೇನು ಸೇರಿದರೆ, ಸರ್ಕಾರ ಹೆಚ್ಚು ಸಾಮ್ರಾಜ್ಯಶಾಹಿ ಪರವಾಗಿರುತ್ತದೆ. ಸರ್ಕಾರದ ಬಂಡವಾಳಶಾಹಿ ನೀತಿಗಳ ವಿರುದ್ಧ ದಂಗೆ ಎದ್ದಾಗ, ಅದನ್ನು ಹತ್ತಿಕ್ಕುವ ಸಾಧ್ಯತೆ ಹೆಚ್ಚು. ಆದ್ದರಿಂದ ಈಗಿನ ಬೆಳವಣಿಗೆ ಜನರ ಹಿತಾಸಕ್ತಿಗೆ ವಿರೋಧವಾದುದು.

ಕರ್ಣನ ಪಾತ್ರದ ಬಗ್ಗೆ ಪಂಪನ 'ಪಕ್ಷಪಾತ' ಮತ್ತು ಆತನ ಕೊನೆಯ ದಿನಗಳ ಬಗೆಗಿನ ಚಾರಿತ್ರಿಕ ನಿಗೂಢತೆಯ ಎರಡು ಎಳೆಗಳ ಸುತ್ತ ಕೆ.ವೈ.ನಾರಾಯಣಸ್ವಾಮಿ ಯವರು 'ಪಂಪ ಭಾರತ' ಎಂಬ ನಾಟಕ ಹೆಣೆದಿದ್ದಾರೆ. ಇಂತಹ ಉತ್ತಮ ನಾಟಕವನ್ನು 'ಸಮುದಾಯ' ಬರೆಸಿ ಪ್ರದರ್ಶನ ಮಾಡಿದ್ದು ಕನ್ನಡ ನಾಟಕಗಳಲ್ಲಿ ಒಂದು ಪ್ರಮುಖ ಸಾಂಸ್ಕೃತಿಕ ಮೈಲಿಗಲ್ಲು ಎಂದು ನಿಸ್ಸಂಶಯವಾಗಿ ಹೇಳಬಹುದು. ನ

ನಾಟಕ ವಿಮರ್ಶೆ

ಪಂಪ ಭಾರತ

ಮಹಾಭಾರತದ ಕಥೆಗೆ ನೂರಾರು ಅವತರಣಿಕೆಗಳು ಇವೆ. ಭಾರತದಲ್ಲಿ ಮಾತ್ರವಲ್ಲ - ವಿಶ್ವಾದಾದ್ಯಂತ. ಇಂತಹ ಕಥೆಗಳು ಸ್ವಾಭಾವಿಕವಾಗಿಯೇ ಮೂಲದಿಂದ ಭಿನ್ನವಾಗಿ, ಕೆಲವು ಪಾತ್ರಗಳಿಗೆ ಹೆಚ್ಚು ಒತ್ತು ಕೊಡುತ್ತವೆ. ಕಥೆ ಹೇಳುವವರ, ಆಯಾ ಪ್ರದೇಶದ ಸಮಕಾಲೀನ ಬದುಕಿಗೆ ಸ್ಪಂದಿಸುತ್ತವೆ. ಕರ್ಣ, ಅರ್ಜುನ, ದ್ರೌಪದಿಯ ಪಾತ್ರಗಳನ್ನು ಪ್ರಧಾನ ಪಾತ್ರವಾಗಿಸಿದ - ಹಲವು ಅವತರಣಿಕೆಗಳಿವೆ. ಪಂಪ ಭಾರತ ಅದರಲ್ಲೊಂದು. ಪ್ರಾಚೀನ ಕನ್ನಡದಲ್ಲಿ ಮೇರುಕೃತಿ. ಚಾರಿತ್ರಿಕ - ಸಾಂಸ್ಕೃತಿಕ ಮಹತ್ವದ ಕೃತಿ. ಪಂಪ ಭಾರತ ಅರ್ಜುನನ್ನು ಪ್ರಧಾನ ಪಾತ್ರವಾಸಿದರೂ, ಕರ್ಣನ ಬಗ್ಗೆ ಆತ ತೋರುವ ಅಪಾರ ಅಭಿಮಾನ, 'ಪಕ್ಷಪಾತ' - ಕೃತಿಯ ಪರಿಚಯವಿದ್ದವರಿಗೆ ಗೊತ್ತಿದ್ದದ್ದೇ. ಪಂಪನ ಕೊನೆಯ ದಿನಗಳ ಬಗ್ಗೆ ಚಾರಿತ್ರಿಕವಾಗಿ ನಿಗೂಢತೆ ಇದೆ. ರಾಜನ ಆಸ್ಥಾನ ಬಿಟ್ಟು ತನ್ನ ಸ್ವಗ್ರಾಮಕ್ಕೆ ಮರಳಿದ ಜೈನ-ವೈದಿಕರ ಗಲಭೆಗಳಲ್ಲಿ ಕೊಲೆಯಾದ ಎಂಬ ವದಂತಿ ಇದೆ.

'ಕರ್ಣ' ಮತ್ತು 'ಮತಾಂತರ'

ಕರ್ಣನ ಪಾತ್ರದ ಬಗ್ಗೆ ಪಂಪನ 'ಪಕ್ಷಪಾತ' ಮತ್ತು ಆತನ ಕೊನೆಯ ದಿನಗಳ ಬಗೆಗಿನ ಚಾರಿತ್ರಿಕ ನಿಗೂಢತೆಯ ಎರಡು ಎಳೆಗಳ ಸುತ್ತ ಕೆ.ವೈ.ನಾರಾಯಣಸ್ವಾಮಿ ಯವರು 'ಪಂಪ ಭಾರತ' ಎಂಬ ನಾಟಕ ಹೆಣೆದಿದ್ದಾರೆ. ಕೆಳಜಾತಿ ವ್ಯಕ್ತಿಗಳ ಆಕ್ರೋಶಗಳು, ಅವರು ಎದುರಿಸುವ ಮಾನಸಿಕ ಗೊಂದಲ-ತಾಕಲಾಟ, ಸಮಾಜದಲ್ಲಿ ಎದುರಿಸುವ ಮೋಸ-ಘಾತಕ-ಅವಮಾನವನ್ನು ಮಹಾಭಾರತದ ಕರ್ಣ ಪ್ರತಿನಿಧಿಸುವಂತೆ ಯಾವ ಪಾತ್ರವೂ ಮಾಡುವುದಿಲ್ಲ. ಇನ್ನೊಂದು ಹತ್ತಿರಕ್ಕೆ ಬರುವ ಪಾತ್ರವೆಂದರೆ ಏಕಲವ್ಯ. ಪಂಪನ ಕಾಲದಲ್ಲಿ ಜೈನರು - ವೈದಿಕರ ನಡುವೆ ಕಾದಾಟ 'ಕೋಮುಗಲಭೆ' ರೂಪ ತಳೆದಿರುತ್ತದೆ. ಪಂಪನ ತಂದೆ ವೈದಿಕನಾಗಿ ಹುಟ್ಟಿದರು, ಜೈನ ಮತ ಸ್ವೀಕರಿಸಿದವರು. ಅದು ಕರ್ನಾಟಕದಲ್ಲಿ ಜೈನಮತ ಏರುಸ್ಥಿತಿಯಲ್ಲಿದ್ದ ಕಾಲ. ಜಾತಿ ವ್ಯವಸ್ಥೆಯ ವಿರುದ್ಧ ಭಾರತದಾದ್ಯಂತ ಬಂಡಾಯ, ಬದಲಿಯಾಗಿ ಬೌದ್ಧ-ಜೈನ ಮತಗಳು ಬಂದಿದ್ದು ಎಲ್ಲರಿಗೂ ಗೊತ್ತು. ವೈದಿಕ ಧರ್ಮದ ಬರ್ಬರ ಜಾತಿ ವ್ಯವಸ್ಥೆಯಡಿಯಲ್ಲಿ ನರಳುತ್ತಿದ್ದ ಹಲವರಿಗೆ ಬೌದ್ಧ-ಜೈನ ಮತಗಳು ಆಕರ್ಷವಾಗಿದ್ದರೆ ಏನೂ ಆಶ್ಚರ್ಯವಿಲ್ಲ. ಆದ್ದರಿಂದ ಬೌದ್ಧ-ಜೈನ ಮತಗಳಿಗೆ ಹಲವರು ಮತಾಂತರಗೊಂಡರು. ಇಂತಹ 'ಮತಾಂತರ'ಗಳ ವಿರುದ್ಧ ಸ್ವಾಭಾವಿಕವಾಗಿಯೇ ಪಟ್ಟಭದ್ರ ವೈದಿಕರು ಕಿಡಿಕಾರುತ್ತಿದ್ದರು. ಅದರಲ್ಲೂ ರಾಜರುಗಳು, ಜೈನ ಮತಕ್ಕೆ ಮತಾಂತರ ಹೊಂದಲು ಆರಂಭಿಸಿದಾಗ ಅವರಿಗೆ ಇನ್ನಷ್ಟು ಕಷ್ಟಕ್ಕಿಟ್ಟುಕೊಂಡಿತು.

ಕರ್ಣ ಪ್ರತಿನಿಧಿಸುವ ಕೆಳಜಾತಿಯ ವ್ಯಕ್ತಿಗಳ ವೇದನೆ ಮತ್ತು 'ಮತಾಂತರ'ಗಳು ಭಾರತದ ಚರಿತ್ರೆಯ ತುಂಬಾ ಹಬ್ಬಿವೆ. ಪ್ರಾಚೀನ ಭಾರತದಿಂದ ಹಿಡಿದು, ಸಮಕಾಲೀನ ಬದುಕಿನವರೆಗೆ ಇವೆರಡೂ ನಮ್ಮ ಬದುಕಿನಲ್ಲಿ ಎದುರಿಸುತ್ತಿರುವ ದಾಂಧಲೆಗಳನ್ನು 'ಪಂಪಭಾರತ' ಸಮರ್ಥವಾಗಿ ಚಿತ್ರಿಸುತ್ತದೆ. ಇವೆರಡೂ ಸಾವಿರಾರು ವರ್ಷಗಳಿಂದ ಜೀವಂತ! ಜ್ವಲಂತ 'ಸಮಸ್ಯೆ'ಗಳಾಗಿ ಉಳಿದಿದ್ದರ ಬಗ್ಗೆ ಮರುಗುತ್ತದೆ. ಕಿಡಿಕಾರುತ್ತದೆ. ಇದನ್ನು ಪಂಪ ಮತ್ತು ಪಂಪ ಭಾರತದ ಮತ್ತು ಹಲವು ಸಮಕಾಲೀನ ಘಟನೆಗಳ ಮೂಲಕ ಅತ್ಯಂತ ಸೃಜನಾತ್ಮಕವಾಗಿ ಹೇಳುತ್ತದೆ.

ಪಂಪನ ಕೊನೆಯ ದಿನಗಳು

ಪಂಪನ ಕೊನೆಯ ದಿನಗಳ ಬಗ್ಗೆ ಆತನ ಸ್ವಗ್ರಾಮದಲ್ಲಿ ಒಂದು ಶಾಸನ ಇದೆ. ಆ ಶಾಸನ ಓದಿದರೆ ಪಂಪನ ಕೊನೆಯ ದಿನಗಳ ಬಗೆಗಿನ ನಿಗೂಢತೆ ಪರಿಹರಿಸಬಹುದು ಎಂದು ಕೆಲವು ಚರಿತ್ರೆಯ ಸಂಶೋಧಕರು ಹೊರಡುವುದರಿಂದ ಆರಂಭವಾಗುವ ನಾಟಕತ ಕಥೆ ಕುತೂಹಲಕಾರಿಯಾಗಿ, ಅರ್ಥಪೂರ್ಣವಾಗಿ ಬೆಳೆಯುತ್ತಾ ಹೋಗುತ್ತದೆ. ಆತನ ಶಾಸನದ ಮೇಲೆ ಸಂಘ ಪರಿವಾರ 'ಮತಾಂತರ ವಿರುದ್ಧ' ಅಂಟಿಸಿರುವ ನೋಟೀಸು, ಚರಿತ್ರೆ ಸಂಶೋಧಕರಿಗೆ ಬೆದರಿಕೆ, ಪಂಪನ ಅಭಿಮಾನಿ ದೊರೆ ನೇಮಿಸಿದ್ದ ಕಾವಲುಗಾರ ಸಂಶೋಧಕರಿಗೆ 'ಸಂದರ್ಶನ' ಕೊಡುವುದು, ಪಂಪ ಮತ್ತು ದೊರೆ ಶಾಸನದ ಬಳಿ, ಬೇಟಿಯಾಗುವುದು, ಅಲ್ಲೇ ಪಂಪ ಮತ್ತು ಆತನ ಪಾತ್ರ 'ಕರ್ಣ'ನ ಭೇಟಿ - ಹೀಗೆ ಕಥೆ ಬೆಳೆಯುತ್ತಾ ಹೋಗುತ್ತದೆ.

ಪಂಪನನ್ನು ಆತನೇ ಸೃಷ್ಟಿಸಿದ ಕರ್ಣನ ಪಾತ್ರದ ದೂರುಗಳು ಕಾಡುತ್ತವೆ. ನನ್ನ ಪಾತ್ರವನ್ನು ಹಾಗೇಕೆ, ಹೀಗೇಕೆ ಮಾಡಿದಿ? ನನ್ನ ಪಾತ್ರಕ್ಕೆ 'ನ್ಯಾಯ' ದೊರಕಿಸಲಿಲ್ಲವೇಕೆ? ದೊರೆಯನ್ನು ಅರ್ಜುನ ಮಾಡುವ ಮೊದಲು ಕರ್ಣನಾಗಿ ಮಾಡಿಸಿ ಗೆಲ್ಲಿಸಲಿಲ್ಲವೇಕೆ? ಎಂಬ 'ಕರ್ಣ'ನ ಪ್ರಶ್ನೆ, ಮತ್ತು ಅದಕ್ಕೆ ಪಂಪನ ಉತ್ತರ ಮೇಲೆ ಹೇಳಿದ ಸಮಸ್ಯೆಗಳ ಪ್ರಬುದ್ಧ ಚಿತ್ರಣ ಕೊಡುತ್ತದೆ. ಅದರ ಜತೆ ಹೆಣೆದುಕೊಂಡು ಹೋಗುವ ಪಂಪ ಮತ್ತು ಆತನ ದೊರೆಯ ನಡುವೆ ಸಂಭಾಷಣೆ - ಪಂಪನ ಕೊನೆಯ ದಿನಗಳಲ್ಲಿ ಆತನ 'ಕೊಲೆ'ಯಾಗದಂತೆ ಯಾಕೆ ತಡೆಯಲಾಗಲಿಲ್ಲ ಎಂಬ ಪ್ರಶ್ನೆ ಸಂಕೀರ್ಣ ಉತ್ತರ ಹುಡುಕುತ್ತಾ ಹೋಗುತ್ತದೆ. ಈ ಎಲ್ಲಾ ಪಂಪನ ಬಗೆಗಿನ ಕೊನೆಯ ಶಾಸನದ ಸುತ್ತ ನಡೆಯುತ್ತಾ ಹೋಗುತ್ತದೆ. ಭೂತ-ವರ್ತಮಾನಗಳ



ನಡುವೆ, ಮಹಾಭಾರತ ಪಂಪನ ಕಾಲ ಹಾಗೂ 21ನೇ ಶತಮಾನಗಳ ನಡುವೆ ಕಥೆ ಲೀಲಾಜಾಲವಾಗಿ ಓಡಾಡುತ್ತದೆ. ಸಂಶೋಧಕರನ್ನು ಪಂಪನ ಶಾಸನಕ್ಕೆ ಕಟ್ಟಿ ಹಾಕಿ ಮತಾಂತರವನ್ನು ನಿಷೇಧಿಸುವ ನಮ್ಮ 'ಪ್ರಾಚೀನ ಚರಿತ್ರೆ ಮತ್ತು ಧರ್ಮ'ವನ್ನು ಎತ್ತಿ ಹಿಡಿಯುವ ಧೂರ್ತರ ಘೋಷಣೆಯಲ್ಲಿ ನಾಟಕ ಮುಗಿಯುತ್ತದೆ.

ಸಾಂಸ್ಕೃತಿಕ ಮೈಲಿಗಲ್ಲಾಗುವ ಪ್ರಯೋಗ

ಇಂತಹ ಉತ್ತಮ ನಾಟಕವನ್ನು 'ಸಮುದಾಯ' ಬರೆಸಿ ಪ್ರದರ್ಶನ ಮಾಡಿದ್ದು ಕನ್ನಡ ನಾಟಕಗಳಲ್ಲಿ ಒಂದು ಪ್ರಮುಖ ಸಾಂಸ್ಕೃತಿಕ ಮೈಲಿಗಲ್ಲು ಎಂದು ನಿಸ್ಸಂಶಯವಾಗಿ ಹೇಳಬಹುದು. ನಾಟಕದ ಪ್ರಯೋಗ ಉತ್ತಮವಾಗಿ ಮೂಡಿಬಂದಿದೆ. ನಾಟಕದ ಹಲವು ದೃಶ್ಯಗಳು ನೆನಪಿನಲ್ಲಿ ನಿಲ್ಲುವ 'ದೃಶ್ಯಕಾವ್ಯ'ವಾಗಿದೆ. ಭೂತ-ವರ್ತಮಾನಗಳನ್ನು ದಾಟಿ ನಿಲ್ಲುವ ನಾಟಕದ ಪಾತ್ರ-ಸಂದರ್ಭವನ್ನು ಸಮರ್ಥವಾಗಿ ರಂಗದ ಮೇಲೆ ತಂದಿದೆ. ಉತ್ತಮ ನಟನೆ, ಬೆಳಕು, ಸಂಗೀತ ಹೊಂದಿದ್ದ ಪ್ರಯೋಗ ನಾಟಕಕ್ಕೆ ಒಂದು ಹೊಸ ಆಯಾಮ ಕೊಡುವುದರಲ್ಲಿ ಸಫಲವಾಗಿದೆ. ನಾಟಕದ ಕೇಂದ್ರವಾದ ಪಂಪನ ಶಾಸನ ಮತ್ತು ಸುತ್ತಲ ಪ್ರದೇಶದ ಸೆಟ್ ಅತ್ಯಂತ ಕಲಾತ್ಮಕವಾಗಿತ್ತು. ಪ್ರಮೋದ್ ಶಿಗ್ಗಾಂವ್ ಅವರ ನಿರ್ದೇಶನವೂ ಅಚ್ಚುಕಟ್ಟಾಗಿತ್ತು.

ಇಡೀ ನಾಟಕದ ಪ್ರಬುದ್ಧ ಆದರೂ ಚುರುಕಿನ, ಚುರುಕು ಮುಟ್ಟಿಸುವ ಮಾತುಗಳಿಗೆ ಪ್ರೇಕ್ಷಕರು ತೋರಿಸುವ ಸ್ಪಂದನವೂ ಆಶ್ಚರ್ಯ-ಸಂತೋಷ ಕೊಡುವಂಥದ್ದಾಗಿತ್ತು. ರವೀಂದ್ರ ಕಲಾಕ್ಷೇತ್ರದಲ್ಲಿ ಕಿಕ್ಕಿರಿದು ಸೇರಿ, ನಾಟಕವನ್ನು ಆಸ್ವಾದಿಸಿ ಸ್ಪಂದಿಸಿದ್ದು, 'ಸಮುದಾಯ' ಹೆಮ್ಮೆ ಪಡಬಹುದಾದ ನಾಟಕ ಪ್ರಯೋಗಗಳಲ್ಲಿ ಇದು ಒಂದು ಎಂದು ಹೇಳಬಹುದು. ಈ ನಾಟಕದ ಹಲವು ಪ್ರಯೋಗಗಳಾಗಲಿ. ನಾಟಕದ ತಿರುಳಿನ ಬಗ್ಗೆ ಚರ್ಚೆ ಮೂಡಿ ಬರಲಿ. ಇದು ನಮ್ಮ ಇಂದಿನ ಸಾಂಸ್ಕೃತಿಕ ಸನ್ನಿವೇಶದಲ್ಲಿ ಅತ್ಯಗತ್ಯ.

ಆದರೂ...

ನಾಟಕ 'ಕರ್ಣ'ನಂತಹ ಕೆಳಜಾತಿಯ ವ್ಯಕ್ತಿಗಳ ವೇದನೆ ಬಗ್ಗೆ, ಅದು ಚರಿತ್ರೆಯ ತುಂಬಾ ಅವಿರತವಾಗಿ ನಡೆದುಬಂದ ಬಗ್ಗೆ ಹೇಳುತ್ತದೆ. ಪಂಪನಾಗಲಿ, ನಾಟಕಕಾರನಾಗಲಿ ಇಡೀ ವ್ಯವಸ್ಥೆಯನ್ನು ಕಿತ್ತೊಗೆಯುವ ಶಕ್ತಿಗಳು, ಚರಿತ್ರೆಯ ತುಂಬಾ ನಡೆವ ಇಂತಹ ಪ್ರಯತ್ನಗಳ ಬಗ್ಗೆ ಚಕಾರವೆತ್ತುವುದಿಲ್ಲ. ಕರ್ಣನ ಕಾಲದಲ್ಲಾಗಲೀ, ಪಂಪನ ಕಾಲದಲ್ಲಾಗಲೀ ಈಗಲೂ ಇದಕ್ಕೆ ಕಾರಣಗಳು ಸಮಾಜವ್ಯವಸ್ಥೆ ಯಾವುದು ಎಂಬ ಬಗ್ಗೆ ಗೊತ್ತಿಲ್ಲ. ಕೆಳಜಾತಿಯ ವ್ಯಕ್ತಿಯ ವೇದನೆ ಬಗ್ಗೆ ಮರುಕ, ಕೋಪ ಇದೆ. ಆದರೆ ತುಳಿತಕ್ಕೊಳಗಾದ ಇಡೀ ಜಾತಿ-ವರ್ಗಗಳ ದುರಂತದ ಬಗ್ಗೆ ಕೋಪ, ಮರುಕ ಇಲ್ಲ. ಅವರ ವಿಮೋಚನೆಯ ಹಾದಿಯ ಸುಳಿವು ಇಲ್ಲ. 'ಮತಾಂತರ ವಿರೋಧಿ'ಗಳ ಅಟ್ಟಹಾಸದಿಂದ ಕೊನೆಗೊಳ್ಳುವ ನಾಟಕದ ಧ್ವನಿ ಕೂಡಾ ನಿರಾಶದಾಯಕ.

- ವಸಂತ್

ಕೃಷಿ ಕೂಲಿಕಾರರ 3ನೇ ರಾಜ್ಯಸಮ್ಮೇಳನ

ಪುಟ 9 ರಿಂದ

ಹೋರಾಡುವುದು ಸಂಘದ ಒಂದು ಪ್ರಮುಖ ಆಧ್ಯತೆಯಾಗಿದೆ ಎಂದೂ ವರ್ಷಕ್ಕೊಮ್ಮೆ ತಾಲೂಕುಮಟ್ಟದ ಮಹಿಳಾ ಕೃಷಿ ಕೂಲಿಕಾರರ ಸಮಾವೇಶಗಳನ್ನು ನಡೆಸಿ ಈ ಕುರಿತಾದ ಚಟುವಟಿಕೆಗಳನ್ನು ವಿಮರ್ಶಿಸಬೇಕೆಂದು ಸಮ್ಮೇಳನವು ನಿರ್ಧರಿಸಿತು.

ನಿರ್ಣಯಗಳು: ಗ್ರಾಮೀಣ ಉದ್ಯೋಗ ಭರವಸೆ ಕಾಯ್ದೆ ಜಾರಿಗಾಗಿ ಒತ್ತಾಯಿಸಿ ಡಿಸೆಂಬರ್ 10 ರಂದು ರಾಜ್ಯಾದ್ಯಂತ ತಹಶೀಲ ಕಾರ್ಯಾಲಯಗಳ ಎದುರು ಸಾಮೂಹಿಕ ಧರಣಿ ಸತ್ಯಾಗ್ರಹ ನಡೆಸಬೇಕೆಂಬ ನಿರ್ಣಯವನ್ನು ಅಲ್ಲದೆ ಎಲ್ಲ ಕೃಷಿ ಕೂಲಿಕಾರಿ ಕುಟುಂಬಗಳಿಗೆ ಹಳದಿ ಪಡಿತರ ಕಾರ್ಡುಗಳನ್ನು ವಿತರಣೆ ಮಾಡಬೇಕು. ಭಾಗ್ಯಜ್ಯೋತಿ- ಕುಟೀರಜ್ಯೋತಿ ಫಲಾನುಭವಿಗಳ ಹಳೆಯ ವಿದ್ಯುತ್ ಬಾಕಿಗಳನ್ನು ಮನ್ನಾಮಾಡಿ ಉಚಿತ ವಿದ್ಯುತ್ ಪೂರೈಸಬೇಕು, ಸರ್ಕಾರಿ ಕಾಮಗಾರಿಗಳಲ್ಲಿ ಮತ್ತು ಕೃಷಿ ಕೆಲಸಗಳಲ್ಲಿ ಯಂತ್ರಗಳ ಬಳಕೆಯನ್ನು ನಿಷೇದಿಸಬೇಕು, ಕಂದಾಯ ಅಥವಾ ಅರಣ್ಯ ಭೂಮಿಯಲ್ಲಿ ವಾಸವಿರುವ ಅಥವಾ ಬೇಸಾಯ ಮಾಡುತ್ತಿರುವ ಬಡವರನ್ನು ಒಕ್ಕಲೆಬ್ಬಿಸಬಾರದು, ಕೃಷಿ ಕೂಲಿಕಾರರಿಗೆ ಕೇರಳ ಮಾದರಿಯಲ್ಲಿ ಕನಿಷ್ಠ ವೇತನ, ಭವಿಷ್ಯನಿಧಿ, ಗ್ರಾಚುಯಿಟಿ, ನಿವೃತ್ತಿವೇತನ ಮೊದಲಾದ ಸೌಲಭ್ಯಗಳನ್ನು ಒಳಗೊಂಡ ಸಮಗ್ರ ಕಾನೂನು ಜಾರಿಗೆ ತರಬೇಕು, ಹೈನುಗಾರಿಕೆ, ಕೋಳಿ ಸಾಕಣಿಕೆ ಮೊದಲಾದ ಉಪಕಸುಬು ಕೈಗೊಳ್ಳಲು ಕೃಷಿ ಕೂಲಿಕಾರರಿಗೆ ಬ್ಯಾಂಕುಗಳಿಂದ ಸಾಲ ಸೌಲಭ್ಯ ಒದಗಿಸಬೇಕು ಎಂದು ಒತ್ತಾಯಿಸುವ ನಿರ್ಣಯಗಳನ್ನು ಅಂಗೀಕರಿಸಲಾಯಿತು.

33 ಜನ ಸದಸ್ಯರುಳ್ಳ ರಾಜ್ಯ ಕಾರ್ಯಕಾರಿ ಸಮಿತಿಯನ್ನು 11 ಜನ ಪದಾಧಿಕಾರಿಗಳನ್ನು ಆಯ್ಕೆ ಮಾಡಲಾಯಿತು.

ಸಮಾರೋಪ : ಸಮ್ಮೇಳನದ ಸಮಾರೋಪ ಸಮಾರಂಭದ ಅಧ್ಯಕ್ಷತೆಯನ್ನು ನೂತನವಾಗಿ ಮರುಆಯ್ಕೆಯಾದ ನಿತ್ಯಾನಂದಸ್ವಾಮಿ ವಹಿಸಿದ್ದರು. ಮಂಡ್ಯದ ಶಾಸಕ ಜೆ.ಡಿ(ಎಸ್)ನ ಎಂ.ಶ್ರೀನಿವಾಸ ಮುಖ್ಯ ಅತಿಥಿಯಾಗಿ ಆಗಮಿಸಿದ್ದರು. ತಮಿಳುನಾಡಿನ ಕೃಷಿ ಕೂಲಿಕಾರರ ಸಂಘದ ಪ್ರಧಾನ ಕಾರ್ಯದರ್ಶಿ ತಿರುನಾವಕ್ಕರಸ್ಸು ಸಮಾರೋಪ ಭಾಷಣ ಮಾಡಿದರು. ಕೃಷಿ ಕೂಲಿಕಾರರು ತಮ್ಮ ಆರ್ಥಿಕ ಬೇಡಿಕೆಗಳಿಗಾಗಿ ಹೋರಾಡುತ್ತಿರುವಾಗಲೇ ಸಮಾಜದಲ್ಲಿ ಇನ್ನೂ ಜೀವಂತ ಇರುವ ಅಸ್ಪೃಶ್ಯತೆ, ಜಾತಿ ಪದ್ಧತಿಯಂಥ ಸಾಮಾಜಿಕ ಪಿಡುಗುಗಳ ವಿರುದ್ಧವೂ ಹೋರಾಡಬೇಕೆಂದು ಕರೆ ನೀಡಿದರು.

ಈ ನಡುವೆ ಕಾರ್ನಟಕ ಪ್ರಾಂತ ರೈತ ಸಂಘದ ಅಧ್ಯಕ್ಷರಾದ ಮಾರುತಿ ಮಾನ್ಪಡೆ, ಡಿವೈಎಫ್ಐ ರಾಜ್ಯ ಕಾರ್ಯದರ್ಶಿ ಕೆ.ಮಹಾಂತೇಶ್, ಎಸ್.ಎಫ್.ಐ ರಾಜ್ಯ ಉಪಾಧ್ಯಕ್ಷ ಟಿ.ಎಲ್.ಕೃಷ್ಣೇಗೌಡ ಐಕ್ಯರಂಗ ಪತ್ರಿಕೆಯ ಗುರುಶಾಂತ್ ಮೊದಲಾದವರು ಸಮ್ಮೇಳನಕ್ಕೆ ಶುಭಕೋರಿ ಮಾತನಾಡಿದರು. ಅಚ್ಚುಕಟ್ಟಾಗಿ ನಡೆದ ಕಲಾಪಗಳು, ಸಂಘಟನೆಯನ್ನು ತ್ವರಿತವಾಗಿ ವಿಸ್ತರಿಸುವ ಕುರಿತಾಗಿ ನಡೆದ ಚರ್ಚೆ ಹಾಗೂ ತೀರ್ಮಾನಗಳಿಂದ ಉತ್ಸಾಹಭರಿತರಾದ ಪ್ರತಿನಿಧಿಗಳ ಹರ್ಷೋದ್ಗಾರಗಳೊಂದಿಗೆ ಸಮ್ಮೇಳನವು ಮುಕ್ತಾಯವಾಯಿತು.

ವರದಿ : **ಚಂದ್ರಪ್ಪ ಹೊಸ್ಕೇರಾ**

PRB DECR 319-79/79 AIKYARANGA WEEKLY Reg. No. 17015/64 CPM(G)/KA/BGS-119/2003-05

ಭಾರತ ಕಮ್ಯುನಿಸ್ಟ್ ಪಕ್ಷ(ಮಾರ್ಕ್ಸ್‌ವಾದಿ), ಕರ್ನಾಟಕ ರಾಜ್ಯ ಸಮಿತಿಯ ಪರವಾಗಿ ಮುದ್ರಣ ಮತ್ತು ಪ್ರಕಾಶನ: ಜಿ.ಎನ್.ನಾಗರಾಜ್
ಸಂಪಾದಕರು: ಎಸ್.ವೈ.ಗುರುಶಾಂತ್ ಸಂಪಾದಕೀಯ ಕಛೇರಿ: ನಂ.12, 1ನೇ ಅಡ್ಡರಸ್ತೆ, ಸಂಪಂಗಿರಾಮನಗರ, ಬೆಂಗಳೂರು-27 ಫೋನ್ ನಂ. 2236462.
ಮುದ್ರಣ: ಹನಿ ಪ್ರಿಂಟರ್ಸ್, ಕ್ವೀನ್ ರಸ್ತೆ, ಬೆಂಗಳೂರು.

Printed & Published by Communist Party of India(Marxist), Karnataka State Committee. Editor: S.Y.GURUSHANTH